# ಅಪರಂಜಿ

ತಿಳಿನಗೆಯ ಕಾರಂಜಿ

ಸೆಪ್ಟೆಂಬರ್ 2017

ನಾನ್ ನಿನ್ ಪ್ರೀತಿಸ್ತೀನಿ ಕಣೇ...
ಫೇಸ್ ಬುಕ್ ಆಣೆ... ನಂಬು..



**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎಸ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಎಂ. ಶಿವಕುಮಾರ್

**ಟ್ರಸ್ಟಿಗಳು**

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ವಿ.ಆರ್. ನಾಥ್

ಶ್ರೀ ಎಚ್.ಎಸ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್


**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ



# ಅಪರಂಜಿ

ತಿಳಿನಗೆಯ ಕಾರಂಜಿ


**ಸಂಪುಟ 34**
**ಸಂಚಿಕೆ - 12**
**ಸೆಪ್ಟೆಂಬರ್ - 2017**


## ಈ ಸಂಚಿಕೆಯಲ್ಲಿ.....


| | | |
|---|---|---|
| ಅಪರಂಜಿ ಕಿಡಿ | *ಪ್ರಕಾಶ್* | 2 |
| ನಮ್ಮ ನಿಮ್ಮಲ್ಲಿ | *ಶಿವಕುಮಾರ್* | 3 |
| ವಾಲ್ಮೀಕಿ ಸೃಷ್ಟಿಸಿದ... | *ಎಸ್.ಆರ್. ವಿಜಯಶಂಕರ್* | 5 |
| ಮೈಸೂರು ಪೇಟ | *ಪಾಲಹಳ್ಳಿ ವಿಶ್ವನಾಥ್* | 9 |
| ಐ.ಟಿ. ದಾಳಿ | *ಗಣೇಶ ಹೆಗ್ಗಡೆ* | 14 |
| ಸಂಜೆಹೊತ್ತಿಗೆ ಸೀರೆ..... | *ಎಚ್.ಆರ್. ಹನುಮಂತ ರಾವ್* | 18 |
| ಪಂಚ್ ಪದ್ಯಗಳು | *ಎಚ್. ಡುಂಡಿರಾಜ್* | 22 |
| ಕೇಶ ಕ್ಲೇಶ ಕಳೆದಾಗ | *ನಳಿನಿ ಸೂರ್ಯಪ್ರಕಾಶ್* | 23 |
| ಬ್ರೇಕಿಂಗ್ ನ್ಯೂಸ್ | *ನಂನಾಗ್ರಾಜ್* | 26 |
| ಭುಕ್ಕುಂಡ ವಿಜಯ | *ಗುಂಡಯ್ಯ* | 28 |
| ಹೀಗೊಂದು ಮದುವೆ? | *ವೈ. ಸತ್ಯನಾರಾಯಣ ಕಾಸರಗೋಡು* | 30 |
| ವೀಕ್ ಎಂಡ್ ವಿಥ್.... | *ಬೇಲೂರು ರಾಮಮೂರ್ತಿ* | 33 |
| ಸೇವಾ........ಸಂಘ | *ಗುಂಡುರಾವ್ ದೇಸಾಯಿ* | 37 |
| ತುಂತುರು | *ದಂನಆ* | 36 |
| ವ್ಯಂಗ್ಯ ಮೆಲುಕು | *ಪ್ರಕಾಶ್ ಶೆಟ್ಟಿ* | 40 |


**ಮುಖಪುಟ ವ್ಯಂಗ್ಯಚಿತ್ರ - ಜಿ.ಎಸ್. ನಾಗನಾಥ್**


ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanji42@hotmail.com



ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com



*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



ಭಾರತ ಬಾಹ್ಯಾಕಾಶದ 'ಆದಿತ್ಯ' ಯು.ಆರ್. ರಾವ್ ಅವರ
ಆತ್ಮಕ್ಕೆ ಚಿರಶಾಂತಿ ದೊರೆಯಲಿ!!

★★★

ಐ.ಟಿ. ರಿಟರ್ನ್ಸ್‌ಗೆ ಆಧಾರ್ ಬೇಕಿಲ್ಲ – ಸುದ್ದಿ

*● 'ನಿರಾಧಾರ' ತೆರಿಗೆ ?!*

★★★

ಸಹಿಷ್ಣುತೆ ಭಾರತದ ವೈಶಿಷ್ಟ್ಯ – ಪ್ರನವ್

*● ಹಾಗೇ ಕಾಣುತ್ತೆ !!*

★★★

ಮಹಿಳಾ ಕ್ರಿಕೆಟ್ ಪ್ರಗತಿ ನೋಡಿ ಅಪರಂಜಿ ಸಂತಸ ಪಟ್ಟಳಂತೆ !!

★★★

ವಿಧಾನ ಮಂಡಲ ಕಲಾಪ ಪ್ರಸಾರಕ್ಕೆ ಪ್ರತ್ಯೇಕ ಚಾನಲ್ – ಪತ್ರಿಕೆ

*● ಇದನ್ನ ಮನೋರಂಜನೆ ಎನ್ನಬಹುದೆ ??*

★★★

ರಾಯಚೂರಿಗೆ ರಾಹುಲ್ ಭೇಟಿ – ಸುದ್ದಿ

*● ಅಲ್ಲೇನ್ ಮಾಡಕ್ ಹತ್ತಾರ ?!*

★★★

ಕೆರೆಗಳ ಮೇಲೆ ಬಿದ್ದಿದೆ ಭೂಗಳ್ಳರ ಕಾಕದೃಷ್ಟಿ – ಪತ್ರಿಕೆ

*● ಕಾಗೆಗಳ ಸಂಘ ವಿರೋಧ ??!*

★★★

# ನಮ್ಮ ನಿಮ್ಮಲ್ಲಿ

‘‘ಇಗೋ, ನಿಮಗೊಂದು, ನಿಮ್ಮ ಗೆಳೆಯನಿಗೊಂದು’’ ಎನ್ನುತ್ತಾ ತೇಜಸ್ವಿ ಎರಡು ಪೊಟ್ಟಣಗಳನ್ನು ನನ್ನ ಕೈಗಿತ್ತರು. ಪುರಿ ತುಂಬಿದ್ದ ಪೊಟ್ಟಣಗಳಾಗಿದ್ದವು ಅವು. ಹದವಾಗಿ ಹುರಿದಿದ್ದ ಕಡಲೇಕಾಯಿ, ಹುರಿಗಡಲೆ ಬೆರೆಸಿದ್ದ ಕಡಲೇಪುರಿ ಅಲ್ಲ ಆ ಪೊಟ್ಟಣಗಳಲ್ಲಿ ಇದ್ದದ್ದು. ಏನೂ ಬೆರೆಸಿಲ್ಲದ ಕೇವಲ ಪುರಿ. ಇದೂ ಒಂದು ಮಲೆನಾಡಿನ ಆತಿಥ್ಯದ ವರಸೆ ಇರಬಹುದೇನೋ ಅಂದುಕೊಳ್ಳುತ್ತಾ, ಹತ್ತಿರದಲ್ಲೇ ನಿಂತಿದ್ದ ಸಿ.ಆರ್.ಗೆ ಒಂದು ಪೊಟ್ಟಣ ನೀಡಿದೆ. ಅಷ್ಟರಲ್ಲಿ ತೇಜಸ್ವಿ, ‘‘ಈಗ ನಡೀರಿ ಮೀನುಗಳಿಗೆ ಪುರಿ ತಿನಿಸೋಣ. ನೀವು ತಿನ್ನಕ್ಕಲ್ಲ ಕೊಟ್ಟಿದ್ದು’’ ಎನ್ನುತ್ತಾ ತಮ್ಮ ಕೈಯ್ಯಲ್ಲೂ ಒಂದು ಪೊಟ್ಟಣ ಹಿಡಿದು ಮನೆಯ ಹಿಂಬಾಗಿಲಿನಿಂದ ತೋಟಕ್ಕೆ ನಡೆದರು. ನಾವಿಬ್ಬರೂ ನಮ್ಮ ನಮ್ಮ ಪೊಟ್ಟಣಗಳನ್ನು ಹಿಡಿದು ಅವರನ್ನು ಹಿಂಬಾಲಿಸಿದೆವು.

ಆ ದಿನ ಬೆಳಗ್ಗೆ ಸಕಲೇಶಪುರದಲ್ಲಿನ ಪ್ಲಾಂಟರ್ಸ್ ಕ್ಲಬ್ಬಿನಿಂದ ನಾವಿಬ್ಬರೂ ಹೊರಟು, ಮೂಡಿಗೆರೆಯ ಹ್ಯಾಂಡ್‌ಪೋಸ್ಟ್‌ನಲ್ಲಿರುವ ತೇಜಸ್ವಿಯವರ ಮನೆ ಸೇರಿದಾಗ ಹತ್ತು ಗಂಟೆ ಆಗಿತ್ತು. ಜೂನ್ ತಿಂಗಳ ಮಳೆಗಾಲದಲ್ಲಿ ಈ ಭಾಗಗಳಲ್ಲಿ ಸಂಚರಿಸುವುದೇ ಒಂದು ಮೋಜು. ಆಗಿನ ಹಲವು ವರ್ಷಗಳಲ್ಲಿ ಪ್ರತಿ ಮಳೆಗಾಲದಲ್ಲೂ ತೇಜಸ್ವಿಯವರ ಮನೆಗೆ ಭೇಟಿಕೊಡುವುದು ನಮ್ಮ ಸಂಪ್ರದಾಯವಾಗಿತ್ತು. ತೇಜಸ್ವಿಯವರೊಂದಿಗಿನ ಮಾತುಕತೆ ಅವರ ಶ್ರೀಮತಿಯವರ ಆದರದ ಆತಿಥ್ಯ ಇವೆಲ್ಲಾ ನಮ್ಮ ಈ ವಾರ್ಷಿಕ ಭೇಟಿಯನ್ನು ಬಹು ಉತ್ಸಾಹದಿಂದ ಇದಿರುನೋಡುವಂತೆ ಮಾಡಿತ್ತು. ತೇಜಸ್ವಿಯವರು ತಮ್ಮ ಕಾಫಿತೋಟದ ಮಧ್ಯೆ ಒಂದು ಅಚ್ಚುಕಟ್ಟಾದ ಹೆಂಚಿನ ಮನೆಯೊಂದನ್ನು ಕಟ್ಟಿಕೊಂಡಿದ್ದರು. ರಸ್ತೆಯಿಂದ ತೋಟವನ್ನು ಪ್ರವೇಶಿಸುವ ಗೇಟಿನಿಂದ ಸುಮಾರು ದೂರ ಕಾಲುಹಾದಿಯ ಮೇಲೆ ನಡೆದೇ ಅವರ ಮನೆ ಸೇರಬೇಕಾಗಿತ್ತು.

ಮೀನುಗಳಿಗೆ ಪುರಿಹಾಕುವ ಕಾರ್ಯಕ್ರಮ ಯಶಸ್ವಿಯಾಗಬೇಕಾದರೆ ಮೀನುಗಳು ಇರಲು ಸಾಧ್ಯವಾಗುವಂತಹ ಕೆರೆ, ಕೊಳ ಅಥವಾ ಹರಿಯುತ್ತಿರುವ ಝರಿಯಾದರೂ ಇರಲೇಬೇಕಲ್ಲ. ಇಂತಹ ನೀರಿನ ಒರತೆಯನ್ನು ಹುಡುಕಿಕೊಂಡು ಇನ್ನೂ ಎಷ್ಟು ದೂರ ನಡೆಯಬೇಕೋ ಎಂದುಕೊಳ್ಳುತ್ತಿರುವಾಗಲೇ ಅವರ ಕಾಫಿತೋಟದ ನಡುವಿನಲ್ಲಿ ತೋಟವನ್ನು ಸೀಳಿಕೊಂಡು ಹರಿಯುತ್ತಿದ್ದ ಒಂದು ಝರಿ ಕಣ್ಣಿಗೆ ಬಿತ್ತು. ‘‘ಆಹಾ, ಖಾಸಗಿ ತೋಟಕ್ಕೊಂದು ಖಾಸಗಿ ಝರಿ, ಎಂತಹ ಅದೃಷ್ಟವಪ್ಪಾ’’ ಎಂದುಕೊಂಡೆ. ಝರಿಯ ದಂಡೆಯಲ್ಲಿದ್ದ ಬಂಡೆಗಲ್ಲುಗಳ ಮೇಲೆ ನಾವೆಲ್ಲರೂ ಕುಳಿತೆವು. ಒಂದು ಹಿಡಿ ಪುರಿ ಹಾಕಿದ ತಕ್ಷಣ ಎಲ್ಲಿಂದಲೋ ಮೀನುಗಳು ಪ್ರತ್ಯಕ್ಷವಾಗಿ ಪುರಿಯನ್ನು ಭಕ್ಷಿಸುತ್ತಿದ್ದವು. ಈಗ ಆ ಸಮಯವನ್ನು ನೆನೆಸಿಕೊಂಡರೆ ಅಂದು ಆ ಕಿನ್ನರ ಲೋಕವನ್ನು ಅನುಭವಿಸಲು ಎಷ್ಟು ಪುಣ್ಯ ಮಾಡಿದ್ದೆವೋ ಅನಿಸುತ್ತದೆ. ಆ ಮೋಡಗಳಿಂದ ತುಂಬಿದ ಆಗಸ. ಬಳುಕುತ್ತಾ ಹರಿಯುತ್ತಿದ್ದ ಝರಿ. ಶಬ್ದವೆಂದರೆ ನೀರು ಹರಿಯುವ ಶಬ್ದ ಮಾತ್ರ. ಸುತ್ತಲೂ ಹಚ್ಚ ಹಸಿರಿನ ಹರಹು. ಅಲ್ಲಲ್ಲಿ ತಮ್ಮ ರೆಕ್ಕೆಗಳಿಂದ ಆಗಸವನ್ನು ಬೀಸಿ ಕರೆಯುತ್ತಾ ನಿಂತಿದ್ದ ಬಗನಿ ಮರಗಳು. ಅವುಗಳನ್ನು ಸುತ್ತಿ ಬೆಳೆಯುತ್ತಿದ್ದ ಏಲಕ್ಕಿ ಬಳ್ಳಿಗಳು. ಇಂತಹ ಪರಿಸರದಲ್ಲಿ ಮೀನುಗಳು ಸಡಗರ ಸಂಭ್ರಮಗಳಿಂದ ಪುರಿಯ ಕಾಳುಗಳನ್ನು ಹೆಕ್ಕಿ ತಿನ್ನುವುದನ್ನು ನೋಡುತ್ತಿದ್ದಂತೆ ಒಂದು ಅಲೌಕಿಕ ಶಾಂತಿ ಮನದಲ್ಲಿ

ಮೂಡಿತು. ಹಲವು ಕಾಲ ನಾವು ಮೂವರೂ ಈ ಶಾಂತ ಮನೋಭಾವದಲ್ಲಿ ಮೀಯುತ್ತಾ ಮೌನದಲ್ಲಿ ಕುಳಿತೆವು.

ಅನಂತರ ತೇಜಸ್ವಿ ಮಾತನಾಡಲು ಪ್ರಾರಂಭಿಸಿದರು. ''ದಿನನಿತ್ಯ ನಡೆಯುವ ಎಲ್ಲ ಘಟನೆಗಳೂ ಒಂದಲ್ಲಾ ಒಂದು ರೀತಿಯಲ್ಲಿ ಒಂದಕ್ಕೊಂದು ಸಂಬಂಧವನ್ನು ಹೊಂದಿರುತ್ತವೆ. ಈ ಸಂಬಂಧಗಳ ಗೋಜನ್ನು ಬಹು ಸೂಕ್ಷ್ಮವಾಗಿ ಬಿಡಿಸುತ್ತಾ ಹೋದಂತೆ ಒಂದು ಮಾಯಾಲೋಕವೇ ನಮ್ಮ ಕಣ್ಣಮುಂದೆ ತೆರೆದುಕೊಳ್ಳುತ್ತದೆ'' ಎಂದು ಹೇಳಿದಾಗ ಸಿ.ಆರ್. ''ಈ ಸಂಬಂಧಗಳನ್ನು ಗುರುತಿಸುವುದಾದರೂ ಹೇಗೆ?'' ಅಂತ ಪ್ರಶ್ನಿಸಿದ.

''ಅದಕ್ಕೆ ಮುಖ್ಯವಾಗಿ ಯಾವುದೇ ಪೂರ್ವಾಗ್ರಹವಿಲ್ಲದೇ ಜಗತ್ತನ್ನು ಗ್ರಹಿಸುವ ಕಲೆ ನಿಮಗೆ ಕರಗತವಾಗಬೇಕಾಗುತ್ತದೆ. ಆಗ ಒಂದು ಸರಣಿಯಲ್ಲಿ ನಡೆಯುವ ಘಟನೆಗಳ ಸಂಬಂಧಗಳ ಸುಳಿವು ನಿಮಗೆ ಸಿಗುತ್ತದೆ. ಅಕಸ್ಮಾತ್ ಆಗಿ ಚಪ್ಪಲಿಗಳು ಅದಲು ಬದಲು ಆಗಿದ್ದರಿಂದ ಉಂಟಾದ ಸರಣಿ ಘಟನೆಗಳ ಬಗ್ಗೆ ನನ್ನದೊಂದು ಕತೆಯಲ್ಲಿ ವಿವರಿಸಿರುವೆ. ದಿನನಿತ್ಯ ನಡೆಯುವ ಘಟನೆಗಳು ತುಂಬಾ ಸರ್ವೇಸಾಧಾರಣ ಎಂದು ನಾವು ಭಾವಿಸುವುದರಿಂದ ಅವುಗಳ ಹಿನ್ನೆಲೆಯನ್ನು ಗಮನಿಸುವ ಸೂಕ್ಷ್ಮತೆಯನ್ನು ನಾವು ಕಳೆದುಕೊಂಡು ಬಿಡುತ್ತೇವೆ.''

ಈ ಮಾತನ್ನು ಕೇಳಿದಾಗ ನನಗೆ ರಿಛರ್ಡ್ ಬ್ರೂಸ್ ನಿರ್ಮಿಸಿದ ಸಾಕ್ಷ್ಯಚಿತ್ರ ಸರಣಿ ''ದ ಕನೆಕ್ಷನ್ಸ್'' ನೆನಪಿಗೆ ಬಂತು.

''ಈಚೆಗೆ ನಾನು ನೋಡಿದ ಸಾಕ್ಷ್ಯಚಿತ್ರವೊಂದರಲ್ಲಿ ಇದೇ ಧಾಟಿಯ ಚಿಂತನೆ ಇದೆ. ಅಂಕಿ ಸಂಖ್ಯೆಗಳ ಬಗ್ಗೆ ಚಿಂತಿಸುತ್ತಾ ಅವುಗಳಿಂದ ಹದಿನಾರನೆ ಶತಮಾನದ ನೀರಿನ ಚಕ್ರಗಳನ್ನು ಬಳಸುತ್ತಿದ್ದ ಹಿಟ್ಟಿನ ಗಿರಣಿಗಳು, ಯುರೋಪಿನಲ್ಲಿ ಚರ್ಚುಗಳ ಪ್ರಾಬಲ್ಯ, ಮುದ್ರಣ ಯಂತ್ರಗಳ ವಿನ್ಯಾಸ ಇವೆಲ್ಲವನ್ನು ಪರಸ್ಪರ ಸಂಬಂಧವಿರುವ ಒಂದೇ ಘಟನಾವಳಿಯ ರೂಪದಲ್ಲಿ ಬ್ರೂಸ್ ನಮ್ಮ ಮುಂದಿಡುತ್ತಾನೆ'' ಎಂದು ನಾನು ಹೇಳಿದೆ.

''ಇದೇ ಆಲೋಚನೆ ನನ್ನನ್ನ ಹಲವು ತಿಂಗಳುಗಳಿಂದ ಕಾಡುತ್ತಿದೆ ಶಿವಕುಮಾರ್. ಮಾಯಾಲೋಕ ಎಂದು ಎರಡು ಭಾಗಗಳ ಪುಸ್ತಕ ಬರೆಯುವ ಹಂಚಿಕೆ ಇದೆ. ಮಾಯಾಲೋಕ ಒಂದರಲ್ಲಿ ಘಟನೆಗಳ ನಡುವಣ ವಿಚಿತ್ರ ಸಂಬಂಧಗಳ ಬಗ್ಗೆ ಹೇಳಿ, ಎರಡನೆಯ ಹಂತದಲ್ಲಿ ಅವನು ಇನ್ನೂ ಆಳವಾಗಿ ಪರಿಶೀಲಿಸುವ ಉದ್ದೇಶ ನನ್ನದು. ನೋಡೋಣ ಹೇಗಾಗುತ್ತದೋ.''

ನಮ್ಮಗಳ ಮಾತುಕತೆಗಳು ಮುಂದುವರಿದೇ ಇತ್ತು. ಕಂಪ್ಯೂಟರುಗಳಲ್ಲಿ ಕನ್ನಡದ ಬಳಕೆ ಬಗ್ಗೆ ತೇಜಸ್ವಿಯವರಿಗೆ ಆಗಿನ ದಿನಗಳಲ್ಲೇ ಬಹುವಾಗಿ ಕಳಕಳಿ ಇತ್ತು. ಕನ್ನಡದ ಮಕ್ಕಳು ಆಧುನಿಕ ತಂತ್ರಜ್ಞಾನವನ್ನು ಕನ್ನಡದಲ್ಲೇ ಸುಲಭವಾಗಿ ಕಲಿಯುವಂತಹ ಪುಸ್ತಕಗಳ ಅಗತ್ಯದ ಬಗ್ಗೆ ಅಂದು ಬಹುವಾಗಿ ಮಾತನಾಡಿದರು. ಕೊನೆಗೆ ರಾಜೇಶ್ವರಿಯವರು ''ಊಟಕ್ಕೆ ಬನ್ನಿ'' ಎಂದು ಕರೆದಾಗಲೇ ನಾವು ಅಲ್ಲಿಂದ ಎದ್ದದ್ದು.

ತೇಜಸ್ವಿ ಮಾಯಾಲೋಕ-1 ಬರೆದರು. ಭಾಗ ಎರಡನ್ನು ಓದುವ ಸೌಭಾಗ್ಯ ಓದುಗರಿಗೆ ಇರಲಿಲ್ಲ. ಅಷ್ಟರಲ್ಲಿ ಮೋಹನ ಮುರುಳಿಯ ಕರೆಗೆ ಅವರು ಓಗೊಟ್ಟು ನಮ್ಮನ್ನು ಅಗಲಿದರು.

ಸೆಪ್ಟೆಂಬರ್ ಎಂಟು ತೇಜಸ್ವಿಯವರ ಹುಟ್ಟಿದ ದಿನ. ಅಗಲಿದ ಗೆಳೆಯನಿಗೆ ಇದೊಂದು ನುಡಿನಮನದ ಉಡುಗೊರೆ.

**ಶಿವಕುಮಾರ್**

# ವಾಲ್ಮೀಕಿ ಸೃಷ್ಟಿಸಿದ ಛಂದಸ್ಸು ಅವನದ್ದಲ್ಲ ಎನ್ನಬಹುದೆ?

**- ಎಸ್.ಆರ್. ವಿಜಯಶಂಕರ**

'ಅಲ್ಲಾ ಈ ಸೃಜನಶೀಲ ಬರಹಗಾರರಿಗೆ ವಿಮರ್ಶಕರ ಮೇಲೆ ಯಾಕೆ ಇಷ್ಟೊಂದು ಕೋಪ ಅಂತ?' ಎಂದು ಕೇಳಿ ಅದ್ರಾಮ ತನ್ನ ಕಾಫಿಗೆ ಗಾಳಿ ಊದಿ ತಣಿಸತೊಡಗಿದ. ಶೇಷಾದ್ರಿಪುರಂ ಕಾಲೇಜಿನ ಸಂದಿಯ ಕ್ಯಾಂಟಿನ್‌ನಲ್ಲಿ ಹೊಟ್ಟೆ ತುಂಬಾ ತಿಂದು, ಸ್ವಸಹಾಯವಾದ್ದರಿಂದ ನಿಂತುಕೊಂಡೇ ಕಾಫಿ ಹೀರಿ ರೈಲ್ವೆ ಪ್ಯಾರಲರ್ ರೋಡಿನಲ್ಲೊಂದು ಪುಟ್ಟ ವಾಕ್ ಹೋಗುವುದೆಂದು ನಾವು ನಿರ್ಧರಿಸಿದ್ದೆವು.

'ಹಾಗಾದರೆ ವಿಮರ್ಶಕರು ಕಥೆ ಬರೆಯುವವರ ವಿರೋಧ ಪಕ್ಷದವರಾ?' ಎಂದು ಕೇಳಿದ ಪೊಮ್ಮ. ವಿಮರ್ಶಕರ ಟ್ರೇಡ್ ಯೂನಿಯನ್ನಿನ ಅಧ್ಯಕ್ಷರ ಹಾಗೆ ಮಾತನಾಡುದಾ? ಅಂತ ಸೃಶೀಬರೊಬ್ಬರು ಖಾಸಗಿಯಾಗಿ ಹೇಳಿದ್ದನ್ನು ಸಾಹಿತ್ಯಪ್ರೀತಿ ಎಂಬ ವಾಟ್ಸ್‌ಪ್ ಗ್ರೂಪ್‌ನಲ್ಲಿ ಒಬ್ಬ ಉತ್ಸಾಹಿ ಹಾಕಿದ್ದನ್ನು ಓದಿ ಅದ್ರಾಮನಿಗೆ ಬೇಸರವಾಗಿತ್ತು.

ಅದಕ್ಕಷ್ಟು ವರಿ ಯಾಕೆ? ಯಾವ ಸಾಹಿತಿಯನ್ನು ಕೇಳಿದರೂ ಈ ವಿಮರ್ಶಕರಿಗೆ ನಾವು ಬರೆದದ್ದೇ ತಿಳಿಯುವುದಿಲ್ಲ ಎನ್ನುತ್ತಿರುತ್ತಾರೆ. ಆದರಲ್ಲೇನು ಮಹಾ? ಎಂದೆ ನಾನು.

ಈ ಅಪ್ಪಣ್ಣ ಎಲ್ಲವನ್ನೂ ಲೈಟ್ ಮಾಡಿ ಬಿಡುವುದು. ಇವನು ವೈಎನ್‌ಕೆ ಸಾಹಿತ್ಯ ಓದಿ ಎಲ್ಲವನ್ನೂ ತೇಲಿಸಿ ಬಿಡುತ್ತಾನೆ ಎಂದ ಪೊಮ್ಮ. 'ಪದ್ಯ ಇಷ್ಟು ಲೈಟಾದರೆ ಹೇಗೆ ಸ್ವಾಮಿ?' ಎಂಬ ವೈಎನ್‌ಕೆ ಕವನ ಸಂಕಲವನ್ನು ಹಾಗೆ ಪಡಪೋಶಿ ಮಾಡಬೇಡ. ಅದೂ ಅರ್ಥಗರ್ಭಿತ ಎಂದೆ ನಾನು.

ಇವರು ಬರೆದ ವಿಚಾರ ಮೊದಲೇ ಬಂದಿದೆ ಎಂದು ಯಾರಾದರೂ ವಿಮರ್ಶಕರು ಹೇಳಿದರೆ ಮುಗಿಯಿತು. ಈ ಲೇಖಕರು ತಮ್ಮ ಗಲಾಟೆ ಶುರು ಮಾಡುತ್ತಾರೆ. ಅವರು ಬರೆಯುವುದೇ ಅವರಿಗಿಂತ ಮೊದಲಿದ್ದ ಭಾಷೆಯಲ್ಲಿ ಎಂಬುದು ಈ ಕಥೆಗಾರರಿಗೆ ಯಾಕೆ ಗೊತ್ತಾಗುವುದಿಲ್ಲ ಎಂದ ಪೊಮ್ಮ. ಭಾಷೆ, ಶಬ್ಧ, ಅರ್ಥ ಅಂತೆಲ್ಲಾ ಈ ವಿಮರ್ಶಕರು ಮಾತನಾಡುತ್ತಾರೆ. ಭಾಷೆ ಅಂದರೆ ಶಬ್ಧವೂ ಅಲ್ಲ ಅದು ಅರ್ಥವೂ ಅಲ್ಲ. ಅದು ಮಧ್ಯಮ ಮಾರ್ಗ ಎಂಬುದು ಕಥೆಗಾರರಿಗೆ ಅಂದರೆ ಸೃಶೀಬಗಳಿಗೆ ಯಾಕೆ ತಿಳಿಯುವುದಿಲ್ಲ. ಭಾಷೆ ಏನು ಅವರ ಅಪ್ಪನ ಭಾಷೆಯ? ಎಂದು ವ್ಯಗ್ರನಾದ ಪೊಮ್ಮ. ಅವನ ಅಪ್ಪನ ಗಂಟೂ ಎಂಬುದು ಹೋಗಿ ಭಾಷೆ ಎಂದು ಮಾಡಿಕೊಂಡಿದ್ದಾನೆ ಎಂದು ನಾನು ಯೋಚಿಸುವಾಗ, ಪೊಮ್ಮನ ಆವೇಶವನ್ನು ಕಮ್ಮಿ ಮಾಡಲು ಅದ್ರಾಮ, ''ಅದು ಅವನ ಅಪ್ಪನ ಭಾಷೆಯಲ್ಲ, ಅಮ್ಮನ ಭಾಷೆ, ಅಂದರೆ ಮದರ್ ಟಂಗ್'' ಎಂದು ಕಾಫಿ ಕುಡಿದ ನಾಲಗೆಯನ್ನು ಹೊರ ಚಾಚಿದ.

''ನಾನೇರುವೆತ್ತರಕೆ ನೀನೇರಬಲ್ಲೆಯಾ? ಜನ್ಮಶನಿಯೇ, ಜಿಗಣೆಗೆಣೆಯ ಗುರುವೇ ಇತ್ಯಾದಿ ಹೇಳಿದ ದೊಡ್ಡವರಿದ್ದಾರೆ. ಆದರೆ ಈಗಿನವರಿಗೆ ಅವರು ಬರೆದದ್ದು ಹೊಸದಲ್ಲ. ಅದು ಹೀಗೆ ಇನ್ನೊಂದು ಕಡೆ ಉಂಟು ಎಂದರೆ ಆಗುವುದಿಲ್ಲ. ಹಾಗಾದರೆ ಇವರು ಬರೆದದ್ದು ಮಾತ್ರ

ನಾವು ಓದಬೇಕಾ? ನಾವು ಬೇರೆ ಓದಿದ್ದರಿಂದ ಅಲ್ವಾ ಇನ್ನೊಂದು ಕಡೆ ಅದೇ ರೀತಿಯದ್ದು ಉಂಟು ಅಂತ ಗೊತ್ತಾಗೋದು'' ತನ್ನ ಅಸಹಾಯಕತೆಯನ್ನೂ ಜಿಗುಪ್ಸೆಯನ್ನೂ ಒಟ್ಟಿಗೆ ಹೊರಗೆ ಹಾಕಿದ ಅದ್ರಾಮ.

ಇವನ ವಿಷಯಜ್ಞಾನ ಯಾರಿಗೆ ಬೇಕು? ಈಗ ಎಲ್ಲಾ 'ಕಿರು' ಕುಳಗಳ ಕಾಲ. ಕಿರು ಕಾದಂಬರಿ, ಕಿರು ಕಥೆ, ಕಿರು ಪದ್ಯ ಎಂಬ ಚುಟುಕು ಅಥವಾ ಹನಿಗವನಗಳಲ್ಲಿ ಎಲ್ಲಾ ಹೇಳಬೇಕು. ಅದು ಬಿಟ್ಟು ಅಲ್ಲಿ ಇದೆ ಇಲ್ಲಿ ಬಂದಿದೆ ಅಂತ ಹೇಳುತ್ತಾ ಹೋದರೆ ಯಾರಿಗೆ ಪುರುಸೊತ್ತು ಉಂಟು ಅಂತ ಬೇಕಲ್ಲ ಎಂದು ಪೊಮ್ಮ ತನ್ನ ಉಪದೇಶ ಶುರು ಮಾಡಿದ.

ಅದ್ರಾಮನ ನೆಚ್ಚಿನ ಕಥೆಗಾರ ವಿಷ್ಣುರೂಪನ ಕಥೆಗಳಲ್ಲಿ ಇರುವುದೆಲ್ಲಾ ವಿವರಣೆ ಮಾತ್ರ. ಅವರ ವಿಚಾರಗಳನ್ನು ಸಾವಿರ ಸಲ ಮಾಸ್ತಿ ಮೊದಲಾದ ದೊಡ್ಡ ಕಥೆಗಾರರು ಮರೆತು ಹೋಗದ ಹಾಗೆ ಬರೆದು ಆಗಿದೆ ಎಂದು ವಿಮರ್ಶಕ ಹೇಳಿದನಂತೆ. ಅಂತಹ ವಿಮರ್ಶೆಗಳು ಕ್ಷುಲ್ಲಕ. ನಾವು ಹೇಳಿದ್ದೇ ತಿಳಿಯದ ವಿಮರ್ಶಕರು ಇದ್ದರೇನು? ಇಲ್ಲದಿದ್ದರೇನು? ಎಂಬಿತ್ಯಾದಿ ಮಾತುಗಳನ್ನು ವಿಷ್ಣು ರೂಪ ಹೇಳಿಯಾರೆಂದು ಅವರ ಅಭಿಮಾನಿಯಾದ ಅದ್ರಾಮ ಕನಸಿನಲ್ಲೂ ಎಣಿಸಿರಲಿಲ್ಲ. ಈ ಮಾತುಗಳಿಂದ ಆಶಾಭಂಗ ಗೊಂಡಿದ್ದ ಅದ್ರಾಮನಿಗೆ ಪೊಮ್ಮನ ಉಪದೇಶ ಬೇಕಾಗಿರಲಿಲ್ಲ. ಅದ್ರಾಮನನ್ನು ಹೇಗೆ ಸಮಾಧಾನಗೊಳಿಸುವುದೆಂದು ಯೋಚಿಸುತ್ತಿದ್ದಾಗ ವಾಲ್ಮೀಕಿ ನೆನಪಾದರು.

ಅದು ಬಿಡಪ್ಪ ಅದ್ರಾಮ. ಈ ಗೋಳು ಆದಿ ಕವಿಯನ್ನು ಬಿಟ್ಟಿಲ್ಲ. ಇನ್ನು ಉಳಿದವರ ಕಥೆಯೇನು? ನೀನು ಯಾಕೆ ಬೇಸರ ಮಾಡ್ತಿ ಅದ್ರಾಮ. ಸೃಶೀಬಗಳು ಇರುವುದೇ ಹಾಗೆ ಎಂದೆ ನಾನು.

ನೀನು ಆದಿಕವಿ ಎಂದು ಹೇಳಿದ್ದು ಯಾರನ್ನು? ಎಂದು ಕಣ್ಣರಳಿಸಿದ ಅದ್ರಾಮ.

ಮತ್ತೆ ಇನ್ಯಾರನ್ನು ಆದಿ ಕವಿ ವಾಲ್ಮೀಕಿಯನ್ನು. ವ್ಯಾಸರು ಮಹಾಭಾರತ ಬರೆದರೂ ಅವರನ್ನು ಯಾರೂ ಕವಿ ಎನ್ನುವುದಿಲ್ಲ. ಅವರು ಮಹರ್ಷಿಗಳು ಅಲ್ಲವೆ? ಎಂದೆ ನಾನು.

ಆದಿ ಕವಿ ವಾಲ್ಮೀಕಿ ವಿಮರ್ಶಕರನ್ನು ಎಲ್ಲಿ ಬೈದದ್ದು ಮಾರಾಯ? ಅವರಿಗೆ ಕಂಪ್ಲೇಂಟ್ ಮಾಡಲಿಕ್ಕೆ ಎಂತದು ಉಂಟು? ಅವರನ್ನು ಹೊಗಳದ ವಿಮರ್ಶಕ ಇದ್ದಾನ? ಎಂದು ಬೆರಗಾದ ಪೊಮ್ಮ.

ಅದ್ರಾಮನ ಮುಖದಲ್ಲಿ ಆಶ್ಚರ್ಯ ಚಿಹ್ನೆ ಮಾಡಿತು.

ಇದು ಅಪ್ಪಣ್ಣ ಮಾಡುವ ತಮಾಷೆ ಅಂತ ತಿಳಿದಿದ್ದೀರಾ? ಸ್ವತಃ ವಾಲ್ಮೀಕಿಯೇ ಹೇಳಿದ್ದು ಎಂದೆ ನಾನು. ಎಂತದು ಕಥೆ. ನಮಗೆ ಗೊತ್ತಿಲ್ಲದ್ದು ಎಂದು ಇಬ್ಬರೂ ಕೇಳಿದರು.

'ಅನುಷ್ಟುಭ್' ಎಂಬ ಹೊಸ ಛಂದಸ್ಸನ್ನು ವಾಲ್ಮೀಕಿ ನಿರ್ಮಿಸಿದ್ದು. ತಮಸಾ ನದಿ ತೀರದಲ್ಲಿ ಗಂಡು ಹಕ್ಕಿಗೆ ಬೇಡನೊಬ್ಬ ಬಾಣ ಹೊಡೆವಾಗ ವಾಲ್ಮೀಕಿ ಋಷಿ 'ಮಾನಿಷಾದ.....' ಎಂದು ಹೇಳಿದಾಗಲೇ ಆ ಹೊಸ ಛಂದಸ್ಸು ಹುಟ್ಟಿದ್ದು. ಶೋಕದಿಂದ ಶ್ಲೋಕ ಬಂದಾಗ ಹುಟ್ಟಿದ ಛಂದಸ್ಸು ಅದು ಅಲ್ಲವೆ? ಆದರೆ ನಿಜವಾದ ಕಥೆ ಅದಲ್ಲ. ಈ ಹೊಸ ಛಂದಸ್ಸು ವೇದದಲ್ಲೇ ಇತ್ತು ಎಂದು ವಿಮರ್ಶಕರು ಹೇಳುತ್ತಾರಂತಲ್ಲ. ಅದರಿಂದ ವಾಲ್ಮೀಕಿಗೆ ಬೇಸರವಾಗಿದೆ ಎಂದೆ ನಾನು.

ನಿನ್ನದು ಎಂತದು ರಗಳೆ ಮಾರಾಯ. ವೇದದಲ್ಲಿ ಇರುವುದು 'ತ್ರಿಷ್ಟುಭ್' ಛಂದಸ್ಸು, ಅದು 'ಅನುಷ್ಟುಭ್' ಆಗೋದು ಹೇಗೆ? ಎಂದು ಅನುಮಾನದ ರಾಗ ತೆಗೆದ ಪೊಮ್ಮ.

ನೀನು ಹೇಳಿದರೆ ವಿಮರ್ಶಕರು ಒಪ್ಪುತ್ತಾರೆಯೇ? ಎಂದು ನಾನು ಪೊಮ್ಮನಲ್ಲಿ ರಾಗ ಎಳೆದೆ.

ಅಷ್ಟರಲ್ಲಿ ನಮ್ಮ ಸಂಸ್ಕೃತ ಪಂಡಿತ ಅದ್ರಾಮ ಚುರುಕಾದ, 'ಉತ್ತರರಾಮಚರಿತ' ಬರೆದ ಭವಭೂತಿಯೇ 'ಆಮ್ನಾಯತ್ ಅನ್ಯತ್ರ' ಅಂದರೆ ವೇದಕ್ಕೆ ಹೊರತಾದ 'ಅನುಷ್ಟುಭ್' ಎಂಬ ಹೊಸ ಛಂದಸ್ಸನ್ನು ನಿರ್ಮಿಸಿದ್ದು ಅಂತ ಹೇಳಿದ್ದಾನಲ್ಲ ಎಂದ.

ನನಗೆ ಗೊತ್ತಿಲ್ಲ. ಆದರೆ ವಿಮರ್ಶಕರ ಪ್ರಕಾರ 'ಆಮ್ನಾಯತ್ ಅನ್ಯತ್ರ'ದಲ್ಲಿ 'ಆ ಮುಂಚೆ' ಎಂಬ ಅರ್ಥವೂ ಇದೆ. 'ಅನುಷ್ಟುಭ್' ಛಂದಸ್ಸು ವೇದಗಳಲ್ಲಿ ಪ್ರಯುಕ್ತವಾದ್ದು. ವಾಲ್ಮೀಕಿ ಅದನ್ನು ಮೊದಲ ಬಾರಿಗೆ 'ಅನ್ಯತ್ರ' ಅಂದರೆ ಲೌಕಿಕ ವಸ್ತುವಿಗೆ ಉಪಯೋಗಿಸಿರಬಹುದು ಎಂದು ಸಂಶೋಧಕ ವಿಮರ್ಶಕರು ಊಹಿಸುತ್ತಾರಂತಲ್ಲ ಎಂದೆ ನಾನು.

ಈ ವಿಮರ್ಶಕರು ವೇದದಲ್ಲೇ 'ಅನುಷ್ಟುಭ್' ಇತ್ತು ಅಂತ ಹೇಳುವುದಕ್ಕೆ ಏನಾದರೂ ಸಾಕ್ಷಿ ಇದೆಯೋ? ಅಥವಾ ವೇದದಲ್ಲಿ ಎಲ್ಲಾ ಐತೆ ಎಂಬ ರೀತಿಯೊ? ಎಂಬ ಸಂಶಯ ಬಂತು ಪೊಮ್ಮನಿಗೆ.

ಐತರೇಯ ಬ್ರಾಹ್ಮಣದಲ್ಲಿ ಹಲವಾರು ಅನುಷ್ಟುಭ್‌ಗಳು ಕಂಡು ಬರುತ್ತವೆ.

ಮರುತಃ ಪರಿವೇಷ್ಟಾರೋ

ಮರುತ್ತ ಸಾವಸನ್ ಗೃಹೇ

ಅವಿಕ್ಷಿತಸ್ಯ ಕಾಮಪ್ರೇ

ವಿಶ್ವೇದೇವಾಃ ಸಭಾಸದಾಃ

ಎಂಬ ಮಂತ್ರ ಪುಷ್ಪದ ಮಂತ್ರವೂ ವೇದ ಮೂಲದ್ದೇ. ಇದನ್ನು ಈಗ ವೈದಿಕರು ಹೇಳುವಾಗ ಇತರ ವೇದಮಂತ್ರ(ಋಚೆ)ಗಳಂತೆಯೇ ಸ್ವರಗಳ ಉಚ್ಚಾರ, ಆಘಾತಗಳೊಂದಿಗೆ ಪಠಿಸುತ್ತಾರೆ. ಹಾಗಾಗಿ ಈ ಮಂತ್ರಗಳನ್ನು ಕೇಳುವಾಗ ಅದು ಅನುಷ್ಟುಭ್‌ಗಳಂತೆ ನಮಗೆ ಕೇಳುವುದಿಲ್ಲ. ಆದರೆ ನಿಜವಾಗಿ ಗಾಯತ್ರೀ, ಜಗತೀ, ತ್ರಿಷ್ಟುಭ್‌ಗಳಂತೆ ಅನುಷ್ಟುಭ್ ಕೂಡಾ ವೇದದಿಂದಲೇ ಬಂದದ್ದು. ಅದನ್ನು ವಾಲ್ಮೀಕಿ ಕಂಡು ಹುಡುಕಿದ್ದು ಅಲ್ಲ ಎಂದು ವಿಮರ್ಶಕರು ಹೇಳುತ್ತಾರಂತಲ್ಲಪ್ಪ ಎಂದೆ ನಾನು.

ನಮ್ಮ ಸಂಸ್ಕೃತ ಪಂಡಿತರಾಗಿದ್ದ ಬಳ್ಳ ಶಂಕರ ನಾರಾಯಣ ಮಾಷ್ಟ್ರ ಪರಮ ಶಿಷ್ಯನಾದ ಅದ್ರಾಮ ತುಸುಗೊಂದಲಕ್ಕೆ ಒಳಗಾದಂತೆ ಅವನ ಮುಖಭಾವ ಹೇಳಿತು. ಅವನು ಅನುಮಾನಿಸುತ್ತಾ ಅರ್ಧ ಗಂಟಲಿನಿಂದ ಹೇಳಿದ, ಭವಭೂತಿಯ 'ಉತ್ತರರಾಮ ಚರಿತ'ದಲ್ಲಿ ಕ್ರೌಂಚ ವಧದ ವೃತ್ತಾಂತ ಇದೆ. ಆ ನಾಟಕದಲ್ಲಿ ಬ್ರಹ್ಮನೇ ''ಆಮ್ನಾಯತ್ ಅನ್ಯತ್ರ ನೂತನೋಯಂ ಛಂದಸಃ ಅವತಾರಃ'' ಎಂದು ಹೇಳಿದ್ದನ್ನು ಬಳ್ಳ ಮಾಷ್ಟ್ರು ವಿವರಿಸಿದ್ದು ನೆನಪಿಲ್ಲವಾ? ಎಂದು.

ಹಾಗಾದರೆ, ಅನುಷ್ಟುಭ್ ಛಂದಸ್ಸನ್ನು ವಾಲ್ಮೀಕಿ ಮಹರ್ಷಿಗಳೇ ಸೃಷ್ಟಿಸಿದ್ದೆಂದು ಭವಭೂತಿಯೂ ಒಪ್ಪಿಕೊಂಡ ಹಾಗಾಯಿತಲ್ಲ ಎಂದ ಪೊಮ್ಮ.

ವಿಮರ್ಶಕರ ತಕರಾರು ಇರುವುದೇ ಇಲ್ಲಿ. ಭವಭೂತಿಯ ನಾಟಕದಲ್ಲಿ ಬರುವ ಬ್ರಹ್ಮ 'ಈ ಛಂದಸ್ಸು ನೂತನ ಅವತಾರ' ಎಂದುದನ್ನೇ ಮುಂದೆ ವಿದ್ವಾಂಸರೆಲ್ಲ 'ಅನುಷ್ಟುಭ್' ವಾಲ್ಮೀಕಿ ಸೃಷ್ಟಿಸಿದ ಹೊಸತು ಛಂದಸ್ಸು ಎಂದು ಪ್ರಚಾರ ಮಾಡಿರಬೇಕು ಎಂದು ವಿಶ್ಲೇಷಿಸುತ್ತಾರಲ್ಲ. ಈ ವಿಮರ್ಶೆಗೆ ಏನು ಹೇಳೋಣ ಎಂದೆ ನಾನು.

ಅಂದರೆ.... ಎಂದು ರಾಗ ಎಳೆದ ಪೊಮ್ಮ, ಆಮ್ನಾಯ ಅಂದರೆ ವೇದಗಳಲ್ಲಿಯ ಛಂದಸ್ಸುಗಳಿಗೆ ಹೊರತಾದ ಹೊಸದೊಂದು ಛಂದಸ್ಸನ್ನು ವಾಲ್ಮೀಕಿ ಹುಟ್ಟಿಸಿದ್ದನೆಂದು ಅರ್ಥ ಅಲ್ಲ ಎಂದ ಹಾಗಾಯಿತೆ? ಎಂದ.

ಈಗ ತುಸು ಅನುಮಾನದಿಂದ ನಿಧಾನವಾಗಿ ಅದ್ರಾಮ 'ಅನ್ಯತ್ರ' ಎಂಬ ಶಬ್ಧ ಸೂಚಿಸುವುದು. ಈ ಛಂದಸ್ಸನ್ನು ಮೊತ್ತ ಮೊದಲಿಗೆ ವೇದಗಳ ಹೊರಗೆ ಬಳಸಿ ಲೌಕಿಕ ಅನುಭವಗಳ ಅಭಿವ್ಯಕ್ತಿಗಳಿಗಾಗಿ ಉಪಯೋಗಿಸಲಾಯಿತು ಎಂಬುದೆ? ಎಂದು ಕೇಳಿದ.

ವಿಮರ್ಶಕರು ಹೇಳುವುದು ಅದನ್ನೇ ಅದ್ರಾಮ. ಅದೇ ವಾಲ್ಮೀಕಿಯನ್ನು ಸಂಕಟಕ್ಕೆ ನೂಕಿದ್ದು. ಎಷ್ಟಾದರೂ ವಾಲ್ಮೀಕಿ ಕವಿಯೇ ಅಲ್ಲವಾ? ಆದಿಕವಿ ಎಂದ ಮಾತ್ರಕ್ಕೆ ತಮ್ಮನ್ನು ವಿಮರ್ಶಕರೂ ಮೆಚ್ಚಬೇಕೆಂಬ ಕವಿ ಗುಣ ಹೋಗುತ್ತದೆಯೆ? ಎಂದೆ ನಾನು.

'ಅಪ್ಪಣ್ಣ, ಸತ್ಯ ಹೇಳು. ನಿನಗೆ ಇದನ್ನು ಹೇಳಿದ್ದು ಯಾರು?' ಎಂದು ಕೇಳಿದ ಪೊಮ್ಮ.

ನನಗೆ ಆದಿ ಕವಿ ವಾಲ್ಮೀಕಿಯೇ ಹೇಳಿದ್ದು ಎಂದೆ ನಾನು.

ಹಾಗಾದರೆ ಹಾಗೆಲ್ಲ ಹೇಳುವ ವಿಮರ್ಶಕ ಯಾರಂತೆ? ಎಂದು ಕೇಳಿದ ಅದ್ರಾಮ.

'ಡಾ॥ ಗೌರೀಶ ಕಾಯ್ಕಿಣಿ ಎಂಬ ವಿಮರ್ಶಕ ಚಿಂತಕರು' ಎಂದೆ ನಾನು.

ಯಾವಾಗಲೋ ನಿನಗೆ ಇದನ್ನು ವಾಲ್ಮೀಕಿ ಹೇಳಿದ್ದು..... ನಿನ್ನ ತರಲೆ ಎಂದ ಅದ್ರಾಮ.

'ನಿನ್ನೆ ರಾತ್ರಿ ಸ್ವತಃ ವಾಲ್ಮೀಕಿಯೇ ಕನಸಲ್ಲಿ ಬಂದು ನನಗೆ ಹೇಳಿದ್ದು' ಎಂಬ ಮಾತು ಮುಗಿಯುವುದರೊಳಗೆ ಫಕ್ಕನೆ ನಗು ಬಂತು. ಬಾಯಿಯಲ್ಲಿದ್ದ ಕೊನೆ ಗುಟುಕು ಕಾಫಿ ಹನಿಗಳು ಪೊಮ್ಮನ ಅಂಗಿಗೆ ಸಿಡಿದವು.

ನಿನ್ನ.... ನಿನ್ನ.... ಎಂದ ಪೊಮ್ಮ ನನ್ನ ಬೆನ್ನಿಗೊಂದು ಗುದ್ದಿ, ಕಾಯ್ಕಿಣಿಯವರ ಯಾವ ಪುಸ್ತಕ ಹೇಳು ಎಂದ.

ಡಾ॥ ಗೌರೀಶ ಕಾಯ್ಕಿಣಿಯವರ ಸಮಗ್ರ ಸಾಹಿತ್ಯದ ಹತ್ತನೇ ಸಂಪುಟ ಮಾರಾಯ. ಅದರ 'ಜಿಜ್ಞಾಸೆ' ವಿಭಾಗದಲ್ಲಿ ರಾಮಾಯಣದ ಬಗ್ಗೆ ಎಂಟು ಲೇಖನಗಳಿವೆ. ಎಂ.ಜಿ. ಹೆಗಡೆಯವರು ಸಂಪಾದಿಸಿದ ಪುಸ್ತಕ. ಹೊಡಿಬೇಡ ಮಾರಾಯ. ತಪ್ಪಾಯ್ತು ಎಂದು ನಕಲಿ ಮಾಡಿ ಕೈಮುಗಿದೆ.

ಈಗ ಎಲ್ರೂ ಮಗ ಜಯಂತ ಕಾಯ್ಕಿಣಿ ಹಾಡುಗಳ ಬಗ್ಗೆಯೇ ಮಾತನಾಡುವಾಗ, ನೀನು ಅಪ್ಪ ಗೌರೀಶ ಕಾಯ್ಕಿಣಿ ಪುಸ್ತಕಗಳನ್ನು ನೆನಪಿಟ್ಟುಕೊಂಡಿದ್ದೀಯಲ್ಲ ಎಂದ ಅದ್ರಾಮ.

ಈ ಅಪ್ಪಣ್ಣ ಮಾಡಿದ ತರಲೆಗೆ, ವಾಕಿಂಗ್ ಆದ ಬಳಿಕ ಮತ್ತೊಂದು ಸಲ ಕಾಫಿ ಕೊಡಿಸಲಿ ಎಂದ ಪೊಮ್ಮ. ಸರಿ ಹೊರಡೋಣವಾಗಲಿ. ಮಧ್ಯೇ ಮಧ್ಯೇ ಕಾಫಿಂ ಸಮರ್ಪಯಾಮಿ ಎಂದೆ ನಾನು.

●

# ಮೈಸೂರು ಪೇಟ

**- ಪಾಲಹಳ್ಳಿ ವಿಶ್ವನಾಥ್**

ನಿಮಗೇ ಗೊತ್ತಿರುವ ಹಾಗೆ ಈಗಿನ ಕಾಲದಲ್ಲಿ ಒಂದು ಚಲನಚಿತ್ರ ನಡೆಯಬೇಕಾದರೆ ಒಬ್ಬ ನಾಯಕ, ಒಬ್ಬ ನಾಯಕಿ ಇದ್ದರೆ ಸಾಲದು. ಇದನ್ನು ತಿಳಿದ ನಿರ್ಮಾಪಕರು ಒಬ್ಬ ನಾಯಕಿ, ಇಬ್ಬರು ನಾಯಕರ ಚಿತ್ರಗಳನ್ನು ಪ್ರಯತ್ನಿಸಿದರು. ಅವೂ ಕೆಲವು ಸಮಯ ಓಡಿದವು ಅನಂತರ ಒಬ್ಬ ನಾಯಕ, ಇಬ್ಬರು ನಾಯಕಿಯರ ಚಿತ್ರಗಳನ್ನು ತಯಾರಿಸಿದರು. ಅವೂ ಕೆಲವು ಸಮಯ ಓಡಿದವು. ಆದರೆ ಈಗ ಚಲನಚಿತ್ರ ನಡೆಯಬೇಕಿದ್ದರೆ ಇಬ್ಬರು ನಾಯಕರು, ಇಬ್ಬರು ನಾಯಕಿಯರು ಬೇಕೇ ಬೇಕು, ಮುಂದೆ ಇದೂ ಬದಲಾಗಬಹುದು. ಆದರೆ ಇದಂತೂ ಹಾಗಿದೆ. ಕಥೆ ಕಾದಂಬರಿಗಳಲ್ಲೂ ಇದೇ ರೂಢಿಯಾಗಿದೆ. ಬಹಳ ಒಳ್ಳೆಯ ಲೇಖಕರಿಗೆ ನಾಯಕನೂ ಬೇಡ, ನಾಯಕಿಯೂ ಬೇಡ. ಹಾಗೆ ನೋಡಿದರೆ ಅಂತಹ ಮಹಾ ಲೇಖಕರಿಗೆ ಯಾವ ವಿಷಯವೂ ಬೇಡ. ಆದರೆ ನಮ್ಮಂತಹ ಆಶು ಲೇಖಕರಿಗೆ ಚಲನಚಿತ್ರದ ಫಾರ್ಮುಲವೇ ಸರಿ. ಇಬ್ಬರು ನಾಯಕರು, ಇಬ್ಬರು ನಾಯಕಿಯರು. ಯಾರೋ ಖ್ಯಾತ ನಾಟಕಕಾರ ಬರೆದಂತೆ - ಒಂದು ನಾಟಕ ಹುಡುಕಿಕೊಂಡು ಹೊರಟ ಆರು ಪಾತ್ರಧಾರಿಗಳು... ಹಾಗೇ ಈಗ ನಮ್ಮ ನಾಯಕ ನಾಯಕಿಯರು ಒಂದು ಕಥೆಯನ್ನು ಹುಡುಕುತ್ತಿದ್ದಾರೆ.

ಇದು ನರೇಂದ್ರ ಮತ್ತು ಮಹೇಂದ್ರರ ಕಥೆ. ಒಬ್ಬ ಮಂಗಳೂರಿನವರು, ಇನ್ನೊಬ್ಬ ಬಿಜಾಪುರದವನು. ಇನ್ನೂ ಯುವಕರು. ಯುವಕರೆಂದರೆ ಪ್ರೀತಿ, ಪ್ರೇಮ ಇದ್ದೇ ಇರುತ್ತಲ್ಲವೇ? ಹಾಗೇ ನರೇಂದ್ರ ಮತ್ತು ಮಹೇಂದ್ರರಿಬ್ಬರೂ ಪ್ರೀತಿಸುತ್ತಿದ್ದರು. ಮಂಗಳೂರಿನ ನರೇಂದ್ರ ಬಾಗಲಕೋಟೆಯ ಕುಸುಮಳನ್ನು ಪ್ರೀತಿಸುತ್ತಿದ್ದ. ಬಿಜಾಪುರದ ಮಹೇಂದ್ರ ಉಡುಪಿಯ ಕಾತ್ಯಾಯಿನಿಯನ್ನು ಪ್ರೀತಿಸುತ್ತಿದ್ದ. ಇವರೆಲ್ಲರೂ ಒಂದೇ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದು ಬೆಂಗಳೂರು ಮಹಾನಗರ ಇವರೆಲ್ಲರನ್ನೂ ಒಟ್ಟಿಗೆ ತಂದಿತ್ತು. ಇಲ್ಲಿ ಪ್ರೀತಿಸುತ್ತಿದ್ದ ಎಂದರೆ ಅಷ್ಟೇ ಅರ್ಥ. ಕುಸುಮಳಿಗೆ ನರೇಂದ್ರನ ಪ್ರಿತಿಯಾಗಲೀ ಕಾತ್ಯಾಯಿನಿಗೆ ಮಹೇಂದ್ರನ ಪ್ರೀತಿಯಾಗಲೀ ಗೊತ್ತಿರಲಿಲ್ಲ. ಏಕೆಂದರೆ ಈ ಯುವಕರ ಪ್ರೀತಿ ಇನ್ನೂ ಒಳಗೇ ಇದ್ದಿತು. ಹೊರ ಬರಲು ಸಮಯ ಕಾಯುತ್ತಿತ್ತು.

ಈಗ ನಮ್ಮ ನಾಯಕರ ಗುಣಗಳನ್ನು ವಿವರಿಸೋಣ. ಮಹೇಂದ್ರ ಭೀಮನಂಥ ಆಜಾನುಬಾಹು, ತಲೆಯೂ ದೊಡ್ಡದು. ಅಂಥ ಸುಂದರನೇನಿರಲಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ನರೇಂದ್ರ ಸುಂದರ. ಅವನಿಗೆ ಬಾಹುಗಳೇನೋ ಇದ್ದವು. ಇದ್ದವು ಅಷ್ಟೆ! ಅವನ ಉದ್ದವೂ ಅಷ್ಟೇನಿರಲಿಲ್ಲ. ಒಟ್ಟಿನಲ್ಲಿ ವಾಮನನಷ್ಟು ಪುಟ್ಟನಲ್ಲದಿದ್ದರೂ ಪುಟ್ಟ ವ್ಯಕ್ತಿಯೇ. ಮಹೇಂದ್ರನ ತಲೆಯನ್ನು ದೊಡ್ಡ ಕಲ್ಲಂಗಡಿ ಹಣ್ಣಿಗೆ ಹೋಲಿಸಿದರೆ ನರೇಂದ್ರನ ತಲೆಯನ್ನು ಕಿತ್ತಲೆ ಹಣ್ಣಿಗಿಂತ ಸ್ವಲ್ಪ ದೊಡ್ಡದು ಎಂದು ಮಾತ್ರ ಹೇಳಬಹುದು. ಈ ಕಥೆಯಲ್ಲಿ ತಲೆಗಳು

ಮುಖ್ಯವಾಗುವುದರಿಂದ ಈ ವಿವರಣೆ ಅತಿ ಅವಶ್ಯಕ. ಇಲ್ಲ, ಇದು ಹಳೆಯ ವಿಕ್ರಮ ಬೇತಾಳರ ಕಥೆಯಲ್ಲ.... ಜ್ಞಾಪಕವಿರಬೇಕಲ್ಲವೇ ಒಂದು ಹೆಣ್ಣು ಅಣ್ಣನ ತಲೆಗೆ ಗಂಡನ ಶರೀರವನ್ನು ಮತ್ತು ಗಂಡನ ತಲೆಗೆ... ಇಲ್ಲಿ ಅಂಥ ಘೋರ ಘಟನೆ ಏನೂ ನಡೆಯುವುದಿಲ್ಲ.

ಈಗ ಕುಸುಮಳ ಮತ್ತು ಕಾತ್ಯಾಯಿನಿಯ ಗುಣಗಳನ್ನು ವಿವರಿಸೋಣ. ಮಗುವಾಗಿ ಕುಸುಮ ಹೇಗಿದ್ದಳೋ ಗೊತ್ತಿಲ್ಲ, ಅಂತೂ ನಾವು ಅವಳ ಪರಿಚಯ ಮಾಡಿಕೊಂಡಾಗ ಅವಳಲ್ಲಿ ಕುಸುಮ ಎಂಬ ವ್ಯಕ್ತಿಗೆ ಇರಬೇಕಾದ ಯಾವ ಗುಣವೂ ಇರಲಿಲ್ಲ. ದೇಹ ದಷ್ಟಪುಷ್ಟ, ಧ್ವನಿ ಗಡಸು. ಇನ್ನು ಕಾತ್ಯಾಯಿನಿ? ನೀವು ಬುದ್ಧಿವಂತ ಓದುಗರಾಗಿದ್ದಲ್ಲಿ ಅವಳು ಹೇಗಿರಬಹುದೆಂದು ಊಹಿಸಿಯೇ ಬಿಟ್ಟಿರುತ್ತೀರಿ. ಹೌದು, ನಿಮ್ಮ ಊಹೆ ಸರಿ! ಕಾತ್ಯಾಯಿನಿ ಬಹಳ ಕೋಮಲ ಹೆಣ್ಣು. ಸಾಧಾರಣ ಉದ್ದಕ್ಕಿಂತ ಸ್ವಲ್ಪ ಕಡಿಮೆಯೇ. ಅವಳ ಹೆಸರೇ ಅವಳಿಗಿಂತ ಉದ್ದ ಎನ್ನಬಹುದೇನೋ. ಉದ್ದದ ಮಹೇಂದ್ರನ ಜೊತೆ ಗಿಡ್ಡ ಕಾತ್ಯಾಯಿನಿಯನ್ನು ನೋಡಿದರೆ ಯಾರಿಗೂ ಏನೂ ಅನಿಸುತಿರಲಿಲ್ಲ. ಆದರೆ ಪುಟ್ಟ ನರೇಂದ್ರನ ಜೊತೆ ಗುಡ್ಡದಂತಿದ್ದ ಕುಸುಮಳನ್ನು ನೋಡಿದರೆ ಜನ ಮಾತಾಡಿಕೊಳ್ಳುತ್ತಿದ್ದರು. ಇದೇ ನೋಡಿ ನಮ್ಮ ಸಮಾಜದ ಡಬಲ್ ಸ್ಟ್ಯಾಂಡರ್ಡ್. ಆದರೆ ನರೇಂದ್ರನೂ ಇದರ ಬಗೆ ಹೆಚ್ಚು ಯೋಚಿಸಲಿಲ್ಲ, ಕುಸುಮಳೂ ತಲೆ ಕೆಡಿಸಿಕೊಂಡಿರಲಿಲ್ಲ. ಈ ಜೋಡಿಗಳ ಸ್ನೇಹ ಮುಂದೆ ಹೋಗಿ ವಿವಾಹದ ಘಟ್ಟವನ್ನು ಮುಟ್ಟುತ್ತದೆಯೇ ಎಂಬುದು ಫ್ಯಾಕ್ಟರಿಯ ಜನರ ಪ್ರಶ್ನೆಯಾಗಿದ್ದಿತು.

ಕಾತ್ಯಾಯಿನಿಯನ್ನು ಪ್ರಭಾವಿಸಲು ಮಹೇಂದ್ರ ಮುಂದಿನ ಹೆಜ್ಜೆ ಏನು ಎಂದು ಯೋಚಿಸಿದ. ತನ್ನ ಚಹರೆಯಲ್ಲಿ ಏನನ್ನಾದರೂ ಬದಲು ಮಾಡಿಕೊಂಡರೆ ಅವಳು ತನ್ನನ್ನು ಮದುವೆಯಾಗಲು ಒಪ್ಪಬಹುದು ಎಂದುಕೊಂಡ. ಹಾಗೆಯೇ ಒಂದು ದಿನ ಚಿಕ್ಕಪೇಟೆ ಸುತ್ತುತ್ತಿದ್ದಾಗ ಒಂದು ಅಂಗಡಿ ಕಾಣಿಸಿತು. ತರಾವರಿಯ ಮೈಸೂರು ಪೇಟದ ಅಂಗಡಿ. ಅಸಲಿ ಮೈಸೂರು ಪೇಟ ಇಲ್ಲೇ ಸಿಗುವುದು ಮಾತ್ರ ಎಂದೂ ಬೋರ್ಡಿನಲ್ಲಿ ಬರೆದಿದ್ದಿತು. ಇನ್ನೂ ಹತ್ತಿರ ಹೋಗಿ ನೋಡಿದಾಗ ಮೈಸೂರಿನ ಮಹಾರಾಜರುಗಳಿಗೆ ಬಹಳ ಹಿಂದಿನಿಂದಲೂ ಪೇಟ ಹಾಕಿರುವವರು ನಮ್ಮ ಪೂರ್ವಜರು ಎಂದೂ ಬರೆದಿದ್ದಿತು. ಒಳಗೆ ಹೋಗಿ ನೋಡಿದಾಗ ಒಬ್ಬ ವಯಸ್ಸಾದ ವ್ಯಕ್ತಿ ಮೈಸೂರು ಪೇಟ ಧರಿಸಿ ಕುಳಿತಿದ್ದರು. ನೋಡಿದ ತಕ್ಷಣ ಗೌರವ ಬರುವಂತಹ ವ್ಯಕ್ತಿ. ಮಹೇಂದ್ರ ಏನೂ ಕೇಳುವ ಮೊದಲೆ ಅವರು ಆ ಅಂಗಡಿಯ ಚರಿತ್ರೆಯನ್ನು ಶುರುಮಾಡಿದರು. ಅವರ ಹೆಸರು ಪೇಟ ಪಂಚಾಕ್ಷರಯ್ಯ. ಅವರ ಮನೆಯಲ್ಲಿ ಎಲ್ಲರ ಹೆಸರೂ ಪಂಚಾಕ್ಷರಯ್ಯ ಎಂದೇ. ಮಹೇಂದ್ರನನ್ನು ಮಾತನಾಡಿಸಿದವರು ಆರನೆಯ ಪಂಚಾಕ್ಷರಯ್ಯನವರು. ಮೊತ್ತ ಮೊದಲ ಪಂಚಾಕ್ಷರಯ್ಯನವರ ಹೆಸರು ಏನಿತ್ತೋ ಗೊತ್ತಿಲ್ಲ ಆದರೆ ಅವರ ಅಕ್ಷರಭ್ಯಾಸ ಅ, ಆ, ಇ, ಈ, ಉ ಎಂಬಲ್ಲಿಗೆ ನಿಂತಿದ್ದು ಎಲ್ಲರೂ ಅವರನ್ನು ಪಂಚಾಕ್ಷರಯ್ಯನವರೆಂದು ಕರೆದಿದ್ದರು. ಅದು ಏನೇ ಇರಲಿ ಮೊದಲನೆಯ ಪಂಚಾಕ್ಷರಯ್ಯನವರು ದಿವಾನ್ ಪೂರ್ಣಯ್ಯನವರಿಗೆ ಪೇಟ ಹೊಲಿದುಕೊಟ್ಟಿದ್ದರಂತೆ. ಟಿಪ್ಪೂ ಸುಲ್ತಾನರಿಗೂ ಇದು ಇಷ್ಟವಾಗಿದ್ದು ಎರಡು ಪೇಟಗಳನ್ನು ಫ್ರಾನ್ಸಿನ ನೆಪೋಲಿಯನ್ ಸಾರ್ವಭೌಮರಿಗೂ ಕಳಿಸಿಕೊಟ್ಟಿದ್ದರಂತೆ. ಅನಂತರದ ಮೈಸೂರು ರಾಜರುಗಳಿಗೆಲ್ಲಾ ಪೇಟವನ್ನು ಹೊಲಿದುಕೊಡುತ್ತಿದ್ದವರು ಇವರೇ. ಹೀಗೆ ಪಂಚಾಕ್ಷರಯ್ಯನವರ ಪೇಟ

ಪ್ರಪಂಚದಲ್ಲಿಯೇ ಮೈಸೂರು ಪೇಟದ ಹಿರಿಮೆಯನ್ನು ಸಾರುತ್ತಿತ್ತಂತೆ. ಇದನ್ನೆಲ್ಲಾ ಕೇಳಿದ ಮಹೇಂದ್ರ ಮಂತ್ರಮುಗ್ಧನಂತೆ ಏನೂ ಮಾತನಾಡದೆ ತನ್ನ ತಲೆಯನ್ನು ಆ ಹಿರಿಯರ ಮುಂದೆ ಬಗ್ಗಿಸಿದನು. ಅವರು ತಲೆಯ ಸುತ್ತಳತೆ ಇತ್ಯಾದಿ ಬರೆದುಕೊಂಡು ಅವನನ್ನು ಬೀಳ್ಕೊಟ್ಟರು. ಈ ವಿಷಯವನ್ನು ಮಹೇಂದ್ರ ನರೇಂದ್ರನಿಗೆ ಹೇಳಿದಾಗ ಅವನೂ ಕುಸುಮಳನ್ನು ಪ್ರಭಾವಿಸಲು ಇದೇ ಅವಕಾಶವೆಂದು ಚಿಕ್ಕಪೇಟೆಗೆ ಹೋಗಿ ಅದೇ ಅಂಗಡಿಯಲ್ಲಿ ಪೇಟಕ್ಕೆ ಆರ್ಡರ್ ಕೊಟ್ಟನು. ಅಂತೂ ಮಹೇಂದ್ರ ಮತ್ತು ನರೇಂದ್ರರಿಬ್ಬರೂ ಯಾವಾಗ ಪೇಟ ಸಿಗುತ್ತದೋ, ಯಾವಾಗ ತಮ್ಮ ಪ್ರೇಯಸಿಯರನ್ನು ಇಷ್ಟಪಡುವ ಹಾಗೆ ಮಾಡುತ್ತೇವೋ ಎಂದು ಕಾತುರರಾಗಿದ್ದರು.

ಇದಾದ ಒಂದು ವಾರದ ನಂತರ ಪಂಚಾಕ್ಷರಯ್ಯನವರ ಅಂಗಡಿಯ ಕಾರು ಮಹೇಂದ್ರನ ಮನೆಗೆ ಬಂದಿತು. ಕಾರಿನಲ್ಲಿ ಎರಡು ಡಬ್ಬಗಳಿದ್ದವು. ಡ್ರೈವರ್ ಎರಡರಲ್ಲಿ ಒಂದನ್ನು ತೆಗೆದುಕೊಂಡು ಮಹೇಂದ್ರನಿಗೆ ಕೊಟ್ಟನು; ಹಾಗೇ ನರೇಂದ್ರನಿಗೂ ಒಂದು ಪೇಟ ಸಿಕ್ಕಿತು. ಮಹೇಂದ್ರ ಖುಷಿಯಾಗಿ ಪೇಟ ಧರಿಸಿ ಕಾತ್ಯಾಯಿನಿಯನ್ನು ನೋಡಲು ಹೋದ. ಕಾತ್ಯಾಯಿನಿ ಸಾಮಾನ್ಯವಾಗಿ ಗಂಭೀರ ಹೆಣ್ಣು, ಸುಮ್ಮಸುಮ್ಮನೆ ನಗುವವಳಲ್ಲ, ಆದರೆ ಇಂದು ಮಹೇಂದ್ರನನ್ನು ನೋಡಿ ಜೋರಾಗಿ ನಗಲು ಶುರುಮಾಡಿದಳು.

'ಯಾಕೆ ನಗ್ತಾ ಇದ್ದೀಯ?'

'ಯಾವುದಾದ್ರೂ ನಾಟಕಕ್ಕೆ ತಯಾರೀನ?'

'ಏನು?'

'ಅಥವಾ ಸರ್ಕಸ್?'

'ಏನಿದು ಕಾತ್ಯಾಯಿನಿ?'

'ಪೇಟ ಏನೋ ಚೆನ್ನಾಗಿದೆ. ಆದರೆ ಅದು ನಿನಗಲ್ಲ, ಸ್ವಲ್ಪ ಅಳತೆ ಕೊಟ್ಟು ಹೊಲಿಸಿಕೋಬಾರದಿತ್ತೇ?'

'ಯಾರು ಗೊತ್ತಾ ಆ ಪೇಟಾ ತಯಾರಿಸಿದವರು? ಪೇಟಾ ಪಂಚಾಕ್ಷರಯ್ಯನವರು!'

'ಯಾರಾದರೆ ಏನಂತೆ? ನಿನಗಂತೂ'

'ಅವರು ತಯಾರಿಸುವ ಪೇಟಗಳು ಪ್ರಪಂಚದಲ್ಲೆಲ್ಲಾ ಬಹಳ ಪ್ರಖ್ಯಾತಿ. ಅವರ ಮುತ್ತಜ್ಜನ ಅಜ್ಜ ದಿವಾನ್ ಪೂರ್ಣಯ್ಯನವರಿಗೆ ಪೇಟಾ ತಯಾರಿಸಿಕೊಡುತ್ತಿದ್ದನಂತೆ.'

'ಏನೇ ಹೇಳು, ಮಹೇಂದ್ರ.'

'ಅವರ ಅಜ್ಜ ಪರಮಪೂಜ್ಯ ಮೋಕ್ಷಗುಂಡಮ್ ಅವರಿಗೂ'

'ಯಾರಿಗೆ ಯಾರು ಪೇಟ ಹೊಲಿದರೆ ಏನಂತೆ. ನಿನಗಂತೂ ಇದು ಸರಿಯಿಲ್ಲ, ಅಷ್ಟೆ ನೀನು ಜೋಕರ್ ತರಹ ಕಾಣುತ್ತೀಯ! ಏನು ಅಂಗಡಿಯೋ'

'ಅವರನ್ನು ವ್ಯಥಾ ಕಾರಣ ಬಯ್ಯಬೇಡ. ಅವರನ್ನು ಹೀಯಾಳಿಸಿದರೆ.'

'ಏಕೋ ಅಷ್ಟು ಸೀರಿಯಸ್ಸಾಗಿ'

'ಇನ್ನೇನು, ನೀನು ಏನೋ ಅಂತಿದ್ದೆ, ಕಾತ್ಯಾಯಿನಿ!'

'ಇವತ್ತು ಸಿನೆಮಾ ಪ್ರೋಗ್ರಾಮ್ ಇತ್ತಲ್ವೆ'

'ನಿನ್ನ ಜೊತೆ ನಾನು ಯಾವ ಸಿನೆಮಾನೂ ನೋಡಲು ತಯಾರಿಲ್ಲ'

ಕಾತ್ಯಾಯಿನಿಗೂ ಕೋಪ ಬಂದಿತು. ಕೋಪದಲ್ಲೇ ಅವರು ಬೇರೆಯಾದರು.

ಈಗ ನರೇಂದ್ರನಿಗೆ ಏನಾಯಿತು. ನರೇಂದ್ರ ತನ್ನ ಪೇಟ ಹಾಕಿಕೊಂಡು ಕುಸುಮಳ ಬಳಿ ಹೋದ. ಯಾವಾಗಲೂ ಜೋರಾಗಿಯೇ ನಗುತ್ತಿದ್ದ ಕುಸುಮ ಇಂದು ಅವನನ್ನು ನೋಡಿ ಕಿಸ ಕಿಸ ನಗಲು ಪ್ರಾರಂಭಿಸಿದಳು. ಅವರಿಬ್ಬರ ಮಧ್ಯೆ ಏನು ನಡೆಯಿತು ಎಂದು ಹೇಳಬಹುದು. ಆದರೆ ನೀವು ಈಗ ಮಹೇಂದ್ರನ ಬಗ್ಗೆ ಕೇಳಿದ್ದೇ ಅಲ್ಲೂ ನಡೆಯಿತು. ಕಾತ್ಯಾಯಿನಿಗೆ ಮಹೇಂದ್ರನ ಪೇಟ ಹೇಗೆ ಇಷ್ಟವಾಗಲಿಲ್ಲವೋ ಹಾಗೆಯೇ ಕುಸುಮಳಿಗೂ ನರೇಂದ್ರನ ಪೇಟ ಇಷ್ಟವಾಗಲಿಲ್ಲ. ಅವನ ಪೇಟ ಅವನ ತಲೆಯನ್ನಲ್ಲದೆ ಇಡೀ ಮುಖವನ್ನು ಮುಚ್ಚುತ್ತಿತ್ತು ಕುಸುಮಳ ಜೊತೆ ಮಾತನಾಡಬೇಕಾದಾಗ ಅವನು ಪೇಟವನ್ನು ಹಿಂದೆ ಹಾಕಿಕೊಂಡು ಬಾಯಿ ತೆಗೆಯಬೇಕಿತ್ತು.

ಆದರೂ ಅವನೂ ಮಹೇಂದ್ರನಂತೆ ಪೇಟ ಅಂಗಡಿಯವರನ್ನು ಬಿಟ್ಟುಕೊಡಲಿಲ್ಲ. ಮಹೇಂದ್ರ ಬರೇ ಮೈಸೂರು ಮಹಾರಾಜರ ಹೆಸರು ಹೇಳಿದ್ದ. ಆದರೆ ನರೇಂದ್ರ ಹೊರಗಿನವರ ಹೆಸರುಗಳನ್ನೆಲ್ಲಾ ಹೇಳುತ್ತ ಹೋದ ಹಿಂದೆ ಬೆಂಗಳೂರಿಗೆ ರಷ್ಯದ ಕ್ರುಶೇವ್ ಬಂದಿದ್ದರು, ಚೀನಾದ ಚೌಎನ್. ಲೈ, ಇಂಗ್ಲೆಂಡಿನ ರಾಣಿಯ ಗಂಡ ಪ್ರಿನ್ಸ್ ಫಿಲಿಸ್.. ಹೀಗೆ ಪ್ರಪಂಚದ ನಾಯಕರ ಹೆಸರನ್ನೆಲ್ಲಾ ಹೇಳಿದ. ಅವರಿಗೆ ತೊಡಿಸಿದ ಪೇಟಗಳೆಲ್ಲವೂ ಈ ಪೇಟಪಂಚಾಕ್ಷರಯ್ಯನವರ ಅಂಗಡಿಯಿಂದಲೆ ಬಂದಿದ್ದಂತೆ. ನರೇಂದ್ರ ಇದನ್ನೆಲ್ಲ ಹೇಳುತ್ತಿದ್ದಾಗ ಕುಸುಮ ನಗುತ್ತಲೇ ಇದ್ದಳು. ಆದರೆ ಅವಳ ಮೊದಲ ಕಿಸಕಿಸ ನಿಧಾನವಾಗಿ ಜೋರಾದ ನಗೆಯಾಗಿ ಪರಿವರ್ತನೆಗೊಂಡಿತ್ತು. ಜೋಕು ಚೆನ್ನಾಗಿರಬಹುದೆಂದು ರಸ್ತೆಯಲ್ಲಿದ್ದವರೆಲ್ಲಾ ಇವರಿಬ್ಬರ ಹತ್ತಿರ ಬಂದು ಕೇಳಿಕೊಂಡು ಹೋಗುತ್ತಿದ್ದರು. ಅವರಿಗೆ ಏನು ಅರ್ಥವಾಯಿತೋ ಗೊತ್ತಿಲ್ಲ, ಅಂತೂ ಅವರೂ ನಗುತ್ತಿದ್ದರು. ನರೇಂದ್ರನಿಗೆ ಕೋಪ ಏರುತ್ತಲೆ ಹೋಯಿತು. ಕಡೆಗೆ ನಾನು ನಿನ್ನನ್ನು ನೋಡುವುದು ಇದೇ ಕಡೆ ಎಂದು ಹೇಳಿ ನರೇಂದ್ರ ನಡೆದುಬಿಟ್ಟ.

ಮಹೇಂದ್ರ ಕೋಪಿಸಿಕೊಂಡು ಕ್ಲಬ್ಬಿಗೆ ಹೋಗಿ ಒಂದು ವಿಸ್ಕಿ ಆರ್ಡರ್ ಮಾಡಿದ. ಸ್ವಲ್ಪ ಸಮಯದ ನಂತರ ಅಲ್ಲಿಗೆ ಬಂದ ನರೇಂದ್ರನೂ ಒಂದು ಬಿಯರ್ ಆರ್ಡರ್ ಮಾಡಿದ. ಇಬ್ಬರೂ ಪೇಟವನ್ನು ತೆಗೆದು ಟೇಬಲಿನ ಮೇಲೆ ಇಟ್ಟು ಅಂದು ನಡೆದ ವಿಷಯಗಳ ಬಗ್ಗೆ ಮಾತನಾಡುತ್ತಿದ್ದರು. ಕಾತ್ಯಾಯಿನಿಯ ಸಹವಾಸ ಸಾಕಪ್ಪ ಸಾಕು ಎಂದ ಮಹೇಂದ್ರ. ಹೌದು, ಕುಸುಮಳ ಸಹವಾಸವೂ ಸಾಕಾಯಿತಪ್ಪ ಎಂದ ನರೇಂದ್ರ. ಈ ಹುಡುಗೀರೇ ಹೀಗೆಂದು ಇಬ್ಬರೂ ನಿರ್ಧರಿಸಿದರು. ತೆಗೆದಿಟ್ಟಿದ್ದ ಪೇಟಗಳನ್ನು ಹಾಕಿಕೊಂಡು ಮನೆಗೆ ಹೊರಟರು.

ಹೀಗೆ ಕೆಲವು ದಿನಗಳಾದ ಮೇಲೆ ಚಿತ್ರಮಂದಿರವೊಂದರಲ್ಲಿ ನರೇಂದ್ರನಿಗೆ ಕಾತ್ಯಾಯಿನಿ ಸಿಕ್ಕಿದಳು. ಹೆಚ್ಚು ಪರಿಚಯವಿರದಿದ್ದರೂ ಹಾಗೆಯೇ ಮಾತನಾಡಲು ಶುರು ಮಾಡಿದರು. ನಿನ್ನ ಪೇಟ ಬಹಳ ಚೆನ್ನಾಗಿದೆ ಎಂದಳು ಕಾತ್ಯಾಯಿನಿ. ನರೇಂದ್ರನಿಗೆ ಖುಷಿಯಾಯಿತು. ಆ ಕುಸುಮ ಇದ್ದಾಳಲ್ಲ ಅವಳಿಗೆ ಇಷ್ಟವೇ ಆಗಲಿಲ್ಲ ಎಂದ. ಇಲ್ಲ ನಿನಗೆ ಬಹಳ ಚೆನ್ನಾಗಿದೆ ಎಂದು

ಮತ್ತೆ ಹೇಳಿದಳು ಕಾತ್ಯಾಯಿನಿ. ಹಾಗೆಯೆ ಅವರಿಬ್ಬರ ಮಧ್ಯೆ ಆಗಾಗ್ಗೆ ಮಾತುಕಥೆ ನಡೆಯುತ್ತಿತ್ತು ಅದೂ ಕಾತ್ಯಾಯಿನಿ ಹತ್ತಿರದ ಉಡುಪಿಯ ಹೆಣ್ಣು ಎಂದು ತಿಳಿದಾಗ ನರೇಂದ್ರನಿಗೆ ಇನ್ನೂ ಖುಷಿಯಾಯಿತು.

ಈಗ ಡಿಟೋ ಎಂದು ಬಿಡೋಣವೆ? ಕುಸುಮಳಿಗೂ ಮಹೇಂದ್ರನ ಪೇಟ ಇಷ್ಟವಾಯಿತು. ಅದಲ್ಲದೆ ಅವನು ಹತ್ತಿರದ ಬಿಜಾಪುರದವನು ಎಂದು ತಿಳಿದಮೇಲಂತೂ ಇನ್ನೂ ಹೆಚ್ಚು ಸಂತಸವಾಯಿತು. ಭಾಷೆಯಿಂದ ಮೊದಲೇ ಗೊತ್ತಾಗಲಿಲ್ಲವೆ ಎಂದು ನೀವು ಕೇಳಬಹುದು. ಇದೇ ಮಹಾನಗರಗಳ ತೊಂದರೆ ಮನುಷ್ಯನ ಗುರುತನ್ನೆ ಅಳಿಸಿ ಹಾಕಿಬಿಡುತ್ತದೆ. ಬೇರೆ ಬೇರೆ ಕಡೆಗಳಿಂದ ಅಲ್ಲಿಗೆ ಬರುವವರು ನಗರದ ಭಾಷೆಗೆ ಒಗ್ಗಿಕೊಂಡು ತಮ್ಮ ಹಳ್ಳಿಯ, ಊರಿನ, ಪ್ರದೇಶದ ಭಾಷೆಯ ಸೊಗಡನ್ನು ಕಳೆದುಕೊಂಡುಬಿಡುತ್ತಾರಲ್ಲವೇ?

ಅಂತೂ ಕೆಲವು ಸಮಯದ ನಂತರ ಈ ಎರಡು ಮದುವೆಗಳೂ ನಡೆದವು ಬೇರೆ ಬೇರೆ ಸಮಯದಲ್ಲಿ ಬೇರೆ ಬೇರೆ ಕಡೆ. ಎರಡು ಮದುವೆಗಳಿಗೂ ಫ್ಯಾಕಟರಿಯ ಸ್ನೇಹಿತರು ಹೋಗಿದ್ದರು. ಬಾಗಲಕೋಟೆಯಲ್ಲಿ ಆಜಾನುಬಾಹು ಮಹೇಂದ್ರ ಮತ್ತು ಅವನಿಗಿಂತ ಸ್ವಲ್ಪ ಮಾತ್ರ ಕಡಿಮೆತೂಕವಿದ್ದ ಕುಸುಮ! ಬಹಳ ಒಳ್ಳೆಯ ವರ ಸಾಮ್ಯ ಎಂದು ಎಲ್ಲರೂ ಹೇಳಿದರಂತೆ. ಉಡುಪಿಯಲ್ಲಿ ಸ್ಫುರದ್ರೂಪಿಗಳಾದ ನರೇಂದ್ರ ಮತ್ತು ಕಾತ್ಯಾಯಿನಿ. ಹೌದು ಇಬ್ಬರೂ ಹೆಚ್ಚೇನೂ ಉದ್ದವಿರಲಿಲ್ಲ. ಅದರೂ ಒಳ್ಳೆಯ ವರಸಾಮ್ಯ ಎಂದರು ಸ್ನೇಹಿತರು.

ಈ ಕಥೆಗೆ ನೀತಿಗಳು ಕೆಲವಿರಬಹುದು. ಅವುಗಳನ್ನು ಊಹಿಸಿಕೊಳ್ಳಲು ನಿಮಗೇ ಬಿಟ್ಟಿದ್ದೇವೆ. ಬೆಂಗಳೂರಿನ ಚಿಕ್ಕಪೇಟೆಗೆ ಯಾವಾಗಲಾದರೂ ಹೋದರೆ ಪಂಚಾಕ್ಷರಯ್ಯನವರ ಮೈಸೂರು ಪೇಟ ಅಂಗಡಿಯನ್ನು ಮರೆಯಬೇಡಿ. ಅದೂ ಯಾರನ್ನಾದರೂ ಇಂಪ್ರೆಸ್ ಮಾಡಬೇಕಾದರೆ...

*(ಡೋನ್ಸ್ - ದಿ ಅಮೆಜಿಂಗ್ ಹ್ಯಾಟ್ ಮಿಸ್ಟರಿ)*


**ಅಪರಂಜಿ ಚಂದಾದಾರರ ಸಂಖ್ಯೆಯನ್ನು ಇಮ್ಮಡಿಗೊಳಿಸಿ!**

**ಅದು ಸುಲಭ, ನೀವೇ ಮಾಡಬಹುದು!**

ಹೇಗೆ?

ಇನ್ನೊಬ್ಬ ಚಂದಾದಾರರನ್ನು ಹುಡುಕಿಕೊಡಿ

ನಿಮ್ಮ ಸ್ನೇಹಿತರನ್ನು ಅಪರಂಜಿ ಓದುಗರನ್ನಾಗಿ ಮಾಡಿ

**ಅಷ್ಟು ಸುಲಭ!**

ವಾರ್ಷಿಕ ಚಂದಾ: ರೂ. 100/-

ಆಜೀವ ಸದಸ್ಯತ್ವ: ರೂ. 750/-

**ಇಂದೇ ಈ ಕೆಲಸ ಪ್ರಾರಂಭಿಸಿ**

# ಐ.ಟಿ. ದಾಳಿ!

**- ಗಣೇಶ ಹೆಗ್ಗಡೆ**

**ಮುಂ**ಜಾನೆ ಐದೂ ಅಥವಾ ಐದೂ ಇಪ್ಪತ್ತು ಇದ್ದಿರಬಹುದು. ಕಾಂಪೌಂಡಿನ ಗೇಟ್ ತೆರೆದ ಶಬ್ಧವಾಗಿ ಎದ್ದು ವೆರಾಂಡದ ದೀಪ ಹಾಕಿದಾಗ ಯಾರೋ ಬಾಗಿಲನ್ನು ದಬದಬನೆ ಬಡಿಯುತ್ತಿದ್ದುದು ಕೇಳಿಸಿತು. ಬಾಗಿಲು ತೆರೆದಾಗ ಯಾರೋ ನಾಲ್ಕು ಜನ ಅಪರಿಚಿತ ಗಂಡಸರು ಕೈಯಲ್ಲಿ ಸೂಟ್‌ಕೇಸ್ ಹಿಡಿದು ನಿಂತಿರುವುದು ಕಂಡು ನನ್ನ ಜಂಘಾಬಲವೇ ಉಡುಗಿಹೋಯ್ತು.

**ಈ ದಾಳಿಯಿಂದ ಯಜಮಾನ್ರ ಎಲ್ಲಾ ಪ್ರಾಬ್ಲಂ ತೀರಿತು ಎಂದರೆ ನೀವು ನಂಬಲೇಬೇಕು**

''ಇದು ಬಾಲಯ್ಯನವರ ಮನೆ ತಾನೇ? ಅಮ್ಮಾ ಎಚ್ಚರ ಮಾಡ್ಕೊಳ್ಳಿ. ನೀವು ತಿಳಿದ ಹಾಗೆ ನಾವು ಡಕಾಯಿತರಲ್ಲ ಎದುರು ನಿಂತವರ ದನಿ ಕೇಳಿ ಕೊಂಚ ವಾಸ್ತವ ಪ್ರಪಂಚಕ್ಕೆ ಬರುವ ಹಾಗಾಯ್ತು ನನಗೆ.''

'ಮತ್ತೆ ತಾವು ಯಾ...ರು...?'

'ನಾವು ಇನ್‌ಕಂ ಟ್ಯಾಕ್ಸ್ ಡಿಪಾರ್ಟ್‌ಮೆಂಟಿನವರು. ಬಾಲಯ್ಯನವರ ಮೇಲೆ ಸರ್ಚ್ ವಾರೆಂಟು ಇದೆ. ದಯವಿಟ್ಟು ವರಾಂಡದ ಬಾಗಿಲು ಹಾಕಿ, ಎಲ್ಲಿ, ಬಾಲಯ್ಯನವರನ್ನು ಎಬ್ಬಿಸಿ.'

'ಅವು ಏಳುವ ಸ್ಥಿತಿಯಲ್ಲಿಲ್ಲ ಮಹಾಸ್ವಾಮಿ.'

'ಅಂದರೆ'

'ಅವರಿಗೆ ಈಗ ಸ್ಲಿಪ್‌ಡಿಸ್ಕ್ ಆಗಿದೆ. ಹಲವಾರು ಆರ್ಥೋಪೆಡಿಕ್ಸ್ ಡಾಕ್ಟರುಗಳು ಇವರನ್ನು ಮೇಲಕ್ಕೆಬ್ಬಿಸಲು ಪ್ರಯತ್ನಿಸಿ ಕೈ ಚೆಲ್ಲಿ ಹೋಗಿದ್ದಾರೆ.'

'ಪೂರ್ ಮ್ಯಾನ್... ಸಾರಿ... ರಿಚ್‌ಮ್ಯಾನ್ ನಮ್ಮ ರೆಕಾರ್ಡ್ಸ್ ಪ್ರಕಾರ... ಹಾಗಾದ್ರೆ ಅವ್ರು ಎಲ್ಲಿ ಮಲಗಿದ್ದಾರೋ ಅಲ್ಲೇ ಅವರ ಸಮ್ಮುಖದಲ್ಲೇ ತನಿಖೆ, ಮಹಜರು ಎಲ್ಲಾ ಆಗ್ಬೇಕು. ಅವರ ಪರವಾಗಿ ತಾವೇ ತನಿಖೆಗೆ ಸಹಕರಿಸಬೇಕು, ಅಂದ್ಹಾಗೆ ಅವ್ರು ಮಾತನಾಡ್ತಾರೆ ತಾನೆ?'

'ಇಲ್ಲ ಮಹಾಸ್ವಾಮಿ ಮೊನ್ನೆ ಪಕ್ಕದ ಆ ಮನೆಹಾಳಿ ತಂದುಕೊಟ್ಟ ಕಷಾಯವನ್ನು ಕುಡಿದು ಇವ್ರ ಗಂಟಲೇ ಹೂತು ಹೋಗಿದೆ. ಏನೋ ಗೊಗ... ಗೊರ.. ಅಂತ ಶಬ್ಧ ಬರುತ್ತೆ. ಆದರೆ ಅರ್ಥ ಆಗ್ತಾಯಿಲ್ಲ.. ದಯವಿಟ್ಟು ಇನ್ನೊಂದ್ಸಾರಿ ನಿಮ್ಮ ರೆಕಾರ್ಡ್ಸ್ ಚೆಕ್ ಮಾಡ್ಕೊಳ್ಳಿ.. ನಾವು ನೀವು ತಿಳ್ಕೊಂಡಿರುವಷ್ಟು ಸ್ಥಿತಿವಂತರಲ್ಲ...'

'ನೋಡೀಮ್ಮಾ, ನಾವು ಎಲ್ಲಾ ಕನ್‌ಫರ್ಮ್ ಮಾಡ್ಕೊಂಡೇ ಹೀಗೆ ಬಂದಿದ್ದೇವೆ... ಈ ರಸ್ತೆ ಮೂಲೇಲಿ ಇರೊ ನಂದಿನಿ ಹಾಲಿನ ಬೂತ್‌ನ ಓನರ್ರ ಬಳಿ ನಿಮ್ಮ ಯಜಮಾನರ ಹೆಸರು ವಿಳಾಸವನ್ನು ಖಚಿತ ಪಡಿಸಿಕೊಂಡೇ ಇಲ್ಲಿಗೆ ಬಂದಿದ್ದೇವೆ... ನೋಡಿ ಈ ತನಿಖೆ ಮುಗಿಯುವವರೆಗೂ ಯಾರಿಗೂ ತಾವು ಫೋನ್ ಮಾಡುವಂತಿಲ್ಲ... ಹೊರಗೆ

ಹೋಗುವಂತಿಲ್ಲ.... ಎಲ್ಲ ನಿಮ್ಮ ಯಜಮಾನರ ಮುಖದ ಮೇಲಿರುವ ಬೆಡ್‌ಶೀಟು ಮುಸುಕನ್ನು ತೆಗೀರಿ. ಅವ್ರಿಗೆ ನಮ್ಮ ಮಾತು ಕೇಳುತ್ತೆ ತಾನೆ?'

''ಒಂದು ತಿಂಗಳ ಕೆಳಗಿನಿಂದ ಅವ್ರ ಎರಡು ಕಿವಿಗಳೂ ಢಮಾರ್ ಆಗಿ ಹೋಗಿವೆ. ಕೊಂಚ ಡೌಟು.'

ವ್ಹಾಟ್?

''ಹೌದು ಮಹಾಸ್ವಾಮಿ.. ಆ ಭಾನುವಾರ ಸಂಜೆ ಟಿ.ವಿ. ನೋಡ್ತಾ ಚೆನ್ನಾಗೇ ಇದ್ದರು. ಯಾವುದೋ ಸೀರಿಯಲ್ ಸಂತೆ ಇರ್ಬೇಕು.. ಆ ನಿರೂಪಕಿ ಚಪ್ಪಾಳೆ ಅಂತಾ ಜೋರಾಗಿ ಕಿರುಚಿಕೊಳ್ಳುವುದಕ್ಕೂ, ಇವ್ರು ತಮ್ಮೆರಡೂ ಕಿವಿಗಳನ್ನೂ ಭದ್ರವಾಗಿ ಮುಚ್ಚಿಕೊಂಡು ಅಮ್ಮಾ ಎಂದು ಕಿರುಚಿಕೊಂಡು ಕುರ್ಚಿಯಿಂದ ಕೆಳಗೆ ಬೀಳುವುದಕ್ಕೂ ಸಮನಾಗಿ ಹೋಯ್ತು. ಸ್ಲಿಪ್ ಡಿಸ್ಕ್ ಜತೆಗೆ ಕಿವಿಯ ನರಗಳೂ ಸ್ಲಿಪ್ ಆಗಿ ಹೋಗಿವೆ ಅಂತಂದರು ಡಾಕ್ಟರು.''

'ಪೂರ್ ಮ್ಯಾನ್'

'ಅಲ್ಲಾ ಮಹಾಸ್ವಾಮಿ, ಇವ್ರು ತುಂಬಾ ಪ್ಯೂರ್ ಮ್ಯಾನ್, ದಯವಿಟ್ಟು ಇನ್ನೊಮ್ಮೆ ತಮ್ಮ ರೆ...ಕಾ...ರ್ಡ್ಸ್...'

'ಇನ್ಮುಂದೆ ನೀವು ಹೀಗೆ ಪ್ರಶ್ನೆ ಕೇಳುವಂತಿಲ್ಲ.'

'ನಾವು ಕೇಳ್ತಿವಿ. ನೀವು ಉತ್ತರ ಕೊಡ್ತಾ ಹೋಗಿ.'

'ಆಯ್ತು ಮಹಾಸ್ವಾಮಿ.'

'ಈ ಮನೆ ನಿಮ್ಮ ಸ್ವಂತದ್ದೇ? ಇದರ ಅಳತೆ?'

'ಅಂದಾಜು ಐದು ಚದರಡಿ 20 ಬೈ 30 ರ ಸೈಟಿನಲ್ಲಿ ನಮ್ಮ ಮಾವನವರು ಅವರ ಪೆನ್ಷನ್ ಹಣದಲ್ಲಿ ಕಟ್ಟಿಸಿಕೊಟ್ಟಿದ್ದು.'

'ಯಾಕೋ ಮಿಸ್ ಹೊಡೀತಿದಿಯಲ್ಲಮ್ಮ.. ನಮ್ಮ ರೆಕಾರ್ಡ್ಸ್ ಪ್ರಕಾರ 100 ಬೈ 120 ಅಳತೆಯ ಸೈಟಿನಲ್ಲಿ ನಲವತ್ತು ಚದರಡಿ ಮನೆ ಇರ್ಬೇಕು. ಹೋಗ್ಲಿ ಈ ಮನೆ ಬಿಟ್ಟು ಬೇರೆ ಏನಾದ್ರು ಸೈಟು ಇದೆಯೆ?'

'ಇದೆ ಸ್ವಾಮಿ ಷಾರ್ಟ್ ಸೈಟು. ಎರರ್ ಮೈನಸ್ಸು 1.5 ಆಗಿದ್ದು ಹೀಗೆ ಬಿ.ಪಿ. ಹೆಚ್ಚಾಗ್ತಾ ಹೋದ್ರೆ ಗ್ಲಾಕೋಮ ಬರೋ ಚಾನ್ಸಿದೆ ಅಂತ ಸರ್ಕಲ್ಲಿನಲ್ಲಿರೋ ನೇತ್ರ ವೈದ್ಯರು ತಿಳಿಸಿದ್ದಾರೆ..'

'ಛೆ.. ಛೆ.. ಹೋಗ್ಲಿ ಬಿಡಿ, ಇವರ ಹೆಸರಿಗೆ ಒಂದು ಕಾಂಪ್ಲೆಕ್ಸ್ ಅಟ್ಯಾಚ್ ಆಗಿರ್ಬೇಕಲ್ಲಾ.'

'ಕರೆಕ್ಟಾಗಿ ಊಹಿಸಿದ್ರಿ ಮಹಾಸ್ವಾಮಿ, ಆದ್ರೆ ತಾವು ತಿಳಿದ ಹಾಗೆ ಇವ್ರ ಹೆಸರಿನಲ್ಲಿ ಮಾತ್ರವಲ್ಲದೆ ಇಡೀ ಬಾಡೀಗೆ ಬಡ್ಕೊಂಡಿದೆ.'

'ಅಂದ್ರೆ ಅರ್ಥವಾಗ್ಲಿಲ್ಲ?'

'ಇವ್ರಿಗೆ ಇನ್‌ಫೀರಿಯಾರಿಟಿ ಕಾಂಪ್ಲೆಕ್ಸು ಮದುವೆಯಾದ ದಿವ್ಸದಿಂದ ಇದೆ. ಸುಮಾರು ನಲ್ವತ್ತು ವರ್ಷವಾಯ್ತು. ನನ್ನನ್ನೇ ಬನ್ನಿ ಹೋಗಿ, ಕಾಫಿ ಕೊಡಿ ಅಂತ ಭಯದಿಂದ ಮಾತನಾಡಿಸ್ತಾರೆ.'

‘ಸ್ಸಾರೀಮ್ಮ.. ಇದು ನಿಮ್ಮ ಪರ್ಸನಲ್ ವಿಚಾರ.. ನಾವು ಬಂದಿರೋದು purseನಲ್ ವಿಚಾರ ತನಿಖೆ ಮಾಡೋಕೆ. ಆದ್ರೆ... ನಮ್ಮ ರೆಕಾರ್ಡ್ಸ್ ಪ್ರಕಾರ ಇವ್ರ ಹೆಸರಿನಲ್ಲಿ ಹದಿನೈದು ಸಾವಿರ ಚದರಡಿ ಕಾಂಪ್ಲೆಕ್ಸ್ ಇದೆ ಅಂತಿದೆಯಲ್ಲಾ?’

‘ಸ್ವಾಮಿ ಇವ್ರ ಹೈಟು ಐದು ಅಡಿ ವಿಡ್ತ್ ಎರಡಡಿ ತಾವು ಹೇಗೇಗೇ ಲೆಕ್ಕ ಹಾಕಿದ್ರು ವಿಸ್ತೀರ್ಣ ಹತ್ತು ಚದರಡಿ ದಾಟೊಲ್ಲ.’

‘ನೆಕ್ಸ್ಟ್ ಪಾಯಿಂಟ್‌ಗೆ ಬನ್ನಿ.. ನಿಮ್ಮ ಯಜಮಾನ್ರು ಮತ್ತು ನೀವು ಆಗಾಗ್ಗೆ ಸಿಂಗಾಪೂರಕ್ಕೆ ಹೋಗ್ತಾ ಇರ್ತೀರಿ ಅಂತ ನಮ್ಮ ಇನ್‌ಫಾರ್ಮರ್ರುಸ್ ತಿಳಿಸಿದ್ದಾರೆ. ಇಲ್ಲಿ ಹೊಡೆದ ಬ್ಲಾಕ್ ಮನೀನ ಅಲ್ಲಿ ಇನ್ವೆಸ್ಟು ಮಾಡೋಕೆ ತಾನೇ ಪದೇ ಪದೇ ಅಲ್ಲಿಗೆ ಹೋಗ್ತಿರೋದು?’

‘ಮಹಾಸ್ವಾಮಿ ಪ್ರತಿ ವರ್ಷವೂ ನಾವು ದಂಪತಿ ಸಮೇತ ಹಾಗೆ ಸಿಂಗಾಪುರಕ್ಕೆ ಹೋಗ್ತಿರೋದು ನಿಜ. ಆದ್ರೆ ತಾವು ತಿಳಿದ ಹಾಗೆ ಆ ಸಿಂಗಾಪುರಕ್ಕಲ್ಲ.’

‘ಮತ್ತೆ’

‘ಮಹಾರಾಷ್ಟ್ರದ ಪೂಜ್ಯನೀಯ ಸ್ಥಳಗಳಲ್ಲೊಂದಾದ ಶಿರಡಿ ಸಮೀಪದ ಶನಿ ಸಿಂಗಾಪುರಕ್ಕೆ. ಏಳು ವರ್ಷಗಳ ಹಿಂದೆ ಇವರ ಜನ್ಮ ನಕ್ಷತ್ರಕ್ಕೆ ಶನಿ ವಕ್ಕರಿಸಿ ಏಳರಾಟ ಕಾಟ ಶುರುವಾಗಿ ಇನ್ನೇನು ಇವ್ರು ಕಾಲೆತ್ತಿದರೂ ಅನ್ನುವ ಹಂತ ತಲುಪಿದಾಗ, ಯಾರೋ ಜ್ಯೋತಿಷಿಗಳು ನಮ್ಮ ನೆರವಿಗೆ ಬಂದು, ಅವರಿತ್ತ ಸಲಹೆ ಮೇರೆಗೆ ಹೀಗೆ ಪ್ರತಿ ವರ್ಷವೂ ಅಲ್ಲಿಗೆ ಹೋಗಿ ಶನಿ ದೇವರ ತಲೆಯ ಮೇಲೆ ಎಣ್ಣೆ ಸುರಿದು ಬರ್ತಿದ್ದೀವಿ. ಇದು ಆರನೆಯ ವರ್ಷ. ಅಲ್ಲಿಯ ದೇವರ ಪ್ರತಿನಿಧಿಯಾಗಿ ತಾವುಗಳು ಬಂದಿದ್ದೀರಿ.. ದಯವಿಟ್ಟು ನಮ್ಮಲ್ಲಿ ಉಳಿದಿರುವ ನಾಲ್ಕು ಪ್ಯಾಕೆಟ್ಟು ಎಣ್ಣೇನ ಒಪ್ಪಿಸ್ಕೊಂಡು ನಮ್ಮನ್ನು ಬಿಟ್ಬಿಡಿ. ತಾವು ತಿಳಿದ ಹಾಗೆ ನಾವು ಶ್ರೀಮಂತರಲ್ಲ, ಪ್ರತಿ ಮಂತಿಗೂ ಕಷ್ಟಪಡುವ ಜೀವಿಗಳು. ಎಲ್ಲೋ ನಿಮ್ಮ ರೆಕಾರ್ಡ್ಸ್ ತಪ್ಪಾಗಿದೆ. ಬಿಟ್ಬಿಡಿ ದಮ್ಮಯ್ಯ.’

‘ಹಾಗೆಲ್ಲಾ ನಿಮ್ಮ ಸೆಂಟಿಮೆಂಟಲ್ ಕಥೆ ಕೇಳ್ಕೊಂಡು ಬಿಟ್ಬಿಡೋಕ್ಕೆ ಆಗೊಲ್ಲಾಮ್ಮ. ಕೊನೇ ಪಾಯಿಂಟಿಗೆ ಈಗ ಬರ್ತಾ ಇದ್ದೀವಿ. ಬಾಲಯ್ಯನವರ ಅಕೌಂಟಿನಲ್ಲಿ ಒಂದು ಕೋಟಿ ಹಣ ಹೇಗಿದೆಯಮ್ಮಾ? ಮೊನ್ನೆ ಹತ್ತನೇ ತಾರೀಖು ಸುಮಾರು ಇಪ್ಪತ್ತು ಲಕ್ಷ ಹಣ ಜಮಾ ಆಗಿದ್ಯಲ್ಲಾ ಅದರ ಸೋರ್ಸು ಏನು? ನೋಡಿ ಬ್ಯಾಂಕ್ ರೆಕಾರ್ಡ್ಸ್.’

‘ಅವರಿತ್ತ ಬ್ಯಾಂಕ್ ರೆಕಾರ್ಡ್ಸ್ ಕೂಲಂಕುಷವಾಗಿ ನೋಡಿ, ಹೋದ ಜೀವ ಮರಳಿ ಬಂದಂತಾಯ್ತು ನನಗೆ. ಆ ಕ್ಷಣದಲ್ಲಿ ಇವರು ಸತ್ಯವಾನರಂತೆಯೂ, ಎದುರು ಕುಳಿತವರು ಸಾಕ್ಷಾತ್ ಯಮನಂತೆಯೂ ಹಾಗೂ ನಾನು ಸಾಕ್ಷಾತ್ ಸಾವಿತ್ರಿಯಂತೆಯೂ ಭಾಸವಾಯ್ತು.’

‘ಮಹಾಸ್ವಾಮಿ ಈ ಬ್ಯಾಂಕ್ ಡೀಟೆಲ್ಸ್ ಇರುವ ಬಾಲಯ್ಯನವರು ನಮ್ಮ ಯಜಮಾನರಲ್ಲ.’

‘ವ್ವಾಟ್! ಆರ್ ಯು ಶ್ಯೂರ್?’

‘ಸತ್ಯವಾಗ್ಲು ಮಹಾಸ್ವಾಮಿ, ಈ ರಸ್ತೇ ತುದಿಯಲ್ಲಿರೋ ನಾಲ್ಕು ಅಂತಸ್ತಿನ ಕಾರ್ನರ್ ಮನೆ ಅವರದ್ದು.’

‘ಮತ್ತೆ ನಿಮ್ಮ ಯಜಮಾನರು?’

'ನಮ್ ಯಜಮಾನರದೂ ಅದೇ ಹೆಸರು. ಒಂದೇ ಬೀದಿ.. ಈ ರೀತಿ ಕನ್‌ಫ್ಯೂಷನ್ ನಮ್ಗೆ ಬಹಳ ಸರ್ತಿ ಆಗಿಹೋಗಿದೆ.'

'ದಯವಿಟ್ಟು ಕ್ಷಮಿಸೀಮ್ಮಾ... ಈ ದಾಳಿ ವಿಚಾರ ಎಲ್ಲೂ ಪ್ರಚಾರ ಆಗೋದು ಬ್ಯಾಡ. ನಮ್ಮ ಮರ್ಯಾದೆ ಹೋಗುತ್ತೆ. ನಾವು ಸೈಲೆಂಟಾಗಿ ಹೊರಟು ಹೋಗ್ತೀವಿ. ದಯವಿಟ್ಟು ಸದ್ದು ಮಾಡದೆ ಬಾಗಿಲು ಹಾಕ್ಕೊಳ್ಳಿ.'

'ಕತ್ತು ತಗ್ಗಿಸಿ ವಿರಮಿಸುತ್ತಿದ್ದ ಅವರುಗಳನ್ನು ನೆನೆದು ಅಯ್ಯೋ ಹಾಳು ಮರೆವೆ? ಎನ್ನಿಸಿತು. ಒಂದು ಕಪ್ ಟೀನಾದ್ರು ಮಾಡಿ ಕೊಡ್ಬಹುದಿತ್ತು. ಆದರೆ ಆ ಸಂಶಯ ಪ್ರಾಣಿಗಳು ನನ್ನನ್ನು ಹೊರಗೆ ಬಿಟ್ಟರೆ ತಾನೆ.'

'ಯಾರು ಬಂದಿದ್ದೋರು? ಎಂದರು ಇವರು ಇನ್ನೂ ನಿದ್ರಾಮಂಪರಿನಲ್ಲಿ.'

'ಇನ್‌ಕಂಟ್ಯಾಕ್ಸ್ ಡಿಪಾರ್ಟುಮೆಂಟ್‌ನವರು' ಅಂದೆ. ವಿದ್ಯುತ್ ಶಾಕ್‌ಗೆ ಒಳಗಾದವರ ಹಾಗೆ ಇವರು ಥಂಗನೆ ಹಾಸಿಗೆಯಿಂದ ಎದ್ದು ಕುಳಿತರು. ಯಾರ ಸಹಾಯವೂ ಇಲ್ಲದೆ ಎದ್ದು ನಿಂತರು.

'ರ್‍ರೀ.. ನಿಮ್ಮ ಗಂಟಲು ಸರಿ ಹೋಗಿದೆ, ಸ್ಲಿಪ್‌ಡಿಸ್ಕ್ ಪ್ರಾಬ್ಲಮ್ಮೂ ಸಾಲ್ವ್ ಆಗಿದೆ. ಇನ್ನುಳಿದಿರೋದು ಕಿವಿ ಪ್ರಾಬ್ಲಮ್ಮು ಅಂದೆ.'

'ಯೋಚ್ನೆ ಮಾಡ್ಬೇಡ.. ನಮ್ಮೂರ ರೈಲ್ವೆ ಸ್ಟೇಷನ್ ಎದುರು ಮೈದಾನದ ಮರದಡಿಯಲ್ಲಿ ಒಬ್ಬ ಟ್ರಂಕ್ ಇಟ್ಕೊಂಡು ಕೂತ್ಗೊಂಡಿರ್ತಾನೆ... ಅವನ ಕೈಯಲ್ಲಿ ಕಿವಿಗುಗ್ಗೆ ತೆಗೆಸ್ಕೊಂಡು ಬರ್ತೀನಿ.. ಎಲ್ಲಾ ಸರಿ ಹೋಗುತ್ತೆ...' ಎಂದರು ಇವರು.

'ಸಾಮಾನ್ಯವಾಗಿ ಐ.ಟಿ. ದಾಳಿಗೊಳಗಾದ ವ್ಯಕ್ತಿ ಹಾಗೂ ಅವನ ಕುಟುಂಬದವರು ಅಧಿಕಾರಿಗಳನ್ನು ಹಾಗೂ ಅವರ ಸರ್ಕಾರವನ್ನು ಶಪಿಸುತ್ತಾರೆ ಎಂದರೆ ನೀವು ಖಂಡಿತಾ ನಂಬುತ್ತೀರಿ. ಆದರೆ, ದಾರಿ ತಪ್ಪಿ ನಮ್ಮಂಥಹ ಹುಲುಮಾನವರ ಮನೆ ಮೇಲೆ ಐಟಿ ದಾಳಿ ನಡೆಸಿ ನಮ್ಮೆಜಮಾನರ ಬರ್ನಿಂಗ್ ಹೆಲ್ತ್ ಪ್ರಾಬ್ಲಂಗಳನ್ನು ಏಕಾಏಕಿ ಒಂದೇ ದಾಳಿಯಲ್ಲಿ ಸಾಲ್ವ್ ಮಾಡಿದ ಅಧಿಕಾರಿಗಳನ್ನು ಹಾಗೂ ಅವರ ಸರ್ಕಾರವನ್ನು ಅಭಿನಂದಿಸುವ ನಮ್ಮಂಥಹ ಬಡಜೀವಿಗಳು ವಿರಳವಾಗಿ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿರುತ್ತಾರೆ ಅಂತಂದರೆ ನಂಬುವುದು ಕೊಂಚ ದುಸ್ತರವಲ್ಲವೆ?'

●

## ನಗುಮೊಗ

ಮನೆಯಿಂದಾಚೆ ನಗುವಿನ ಮೊಗವಿರಲಿ
ಸಂಕಟವೇನಿದ್ದರೂ ಮನದೊಳಗೆ ಹುದುಗಿರಲಿ
ಅಳೆಯಿರಿ ಆನಂದವನ್ನು ನಗುವಿನ ಕೊಳಗದಲ್ಲಿ
ಅಳೆದಷ್ಟೂ ಹೆಚ್ಚು ನಗುವಿರುವುದು ಬಳಗದಲ್ಲಿ

# ಸಂಜೆಹೊತ್ತಿಗೆ ಸೀರೆ ಎಂಟ್ಮೊಳ ನೇಯ್ದರಂತೆ

**- ಎಚ್.ಆರ್. ಹನುಮಂತ ರಾವ್**

ಯಥಾ ಪ್ರಕಾರ ನಮ್ಮ ಸೋಷಿಯಲ್ ಕ್ಲಬ್ ಸಭೆ - ಅಂದ್ರೆ ಸೋಮು, ಚಂದ್ರು, ರಾಘಣ್ಣಿ, ವಿಶ್ವ ಮತ್ತು ನಾನು - ಇತ್ತೀಚೆಗೆ ಹೊಸ್ದಾಗಿ ಫ್ರಾನ್ಸಿಸ್ ಹಾಗೂ ಕುಂಜುಣ್ಣಿ ಸೇರ್ಪಡೆಯಾಗಿದೆ - ಗಣೇಶನ ಹಬ್ಬದ ಮಾರ್ನೆ ದಿನ ಸಂಜೆ ನಡೆಸಿದ್ವಿ - ಜಾಗ ನಮ್ಮನೆ ಮಹಡಿಯ ಮೇಲಿನ ನನ್ನದೇ ಕೊಠಡಿ. ಅದೇ ನಮ್ಮ ಗ್ರೀನ್ರೂಮು. ಹೆಸರಿಗಷ್ಟೇ, ನಾಟಕ ಮಂಡಳಿ - ಸದ್ಯಕ್ಕೆ ಕೇವಲ ಹರಟೆ ಮಂಡಳಿ, ಆದರೆ ನಾಟಕದ ಪ್ರಯತ್ನ, ಚರ್ಚೆಗಳಿಗೇನೂ ಕಮ್ಮಿಯಿಲ್ಲ. ''ಸೋಮು, ನಿಂಗಿಷ್ಟವಾದ ಟೀವೀ ಸೀರಿಯಲ್ಯಾವುದು? ನಂಗಂತೂ ''ಏ'' ಟೀವೀನ 'ಧನಿಷ್ಟ ನಕ್ಷತ್ರ', 'ಹಾಯ್' ಟೀವೀನ 'ಕಳೆದು ಹೋದವಳು' ಮತ್ತೆ 'ಜೀರೋ' ಟೀವೀನ 'ಸಿಕ್ಕಿದ್ದೇನು?' ಪರವಾಗಿಲ್ಲ ಅನ್ನಿಸ್ತು. ಆದ್ರೆ ಯಾವ ಸೀರಿಯಲ್ಲೂ ಮುಗಿಯೋ ಸೂಚ್ನೇನೇ ಇಲ್ಲ. ಎರಡು ವರ್ಷಗಳಾದ್ರೂ, ಒಂದೇ ತರಾ ಡಯಲಾಗು, ಹೆಚ್ಚೂ ಕಮ್ಮಿ ಅಂದ ನಮ್ಮ ವಿಶ್ವ. ಚಂದ್ರು ಧನಿಷ್ಟ ನಕ್ಷತ್ರ ಆಕಾಶ್ದಲ್ಲಿ ಹುಡುಕ್ತಾ ಇದಾರೆ ಅಂತ್ಕಾಣುತ್ತೆ. ಅದು ಸಿಗೋವರ್ಗೂ ಸೀರಿಯಲ್ ನಿಲ್ಲಲ್ಲ, ಅದು ಸಿಗಲ್ಲ, ಇದು ನಿಲ್ಲಲ್ಲ. ಇನ್ನು ಕಳೆದು ಹೋದವಳು ಬೆಂಗ್ಳೂರ್ನಲ್ಲಿ ಎಷ್ಟ್ ಹುಡುಕಿದ್ರೂ ಸಿಗಕ್ ಸಾಧ್ಯವಾ, ಈ ಸೀರಿಯಲ್ಲೂ ನಿಲ್ಲಲ್ಲ ಬಿಡು, ಇನ್ನ 'ಸಿಕ್ಕಿದ್ದೇನು?' ಟೀವೀ ಸೀರಿಯಲ್ನಲ್ಲಿ ನೋಡೋವ್ರಿಗೆ ಸಿಕ್ಕಿದ್ದೇನು ಅನ್ನೋದೇ ಮುಖ್ಯ ಪ್ರಶ್ನೆ. ಬಹುಶಃ ತಲೆನೋವು, ಸಾಂಕ್ರಾಮಿಕ ಜ್ವರ, ಆಗಾಗ್ಗೆ ಅತಿಸಾರ, ಮೈ ಪರಚಿಕೊಳ್ಳೋ ತರ ಆಗೋದಷ್ಟೇ ಶೇಷಪ್ರಶ್ನೆ ಏನಂತೀ ವಿಶ್ವ. ನಿಂಗ್ಯಾಕ್ಕಿದ್ದೀತು ಈ ಸೀರಿಯಲ್ಗಳ ಉಸಾಬರೀ. ಅದ್ರ ಬದ್ಲು ಹೊತ್ತು ಹೋಗೋಕೆ ಜೋಬ್ನಲ್ಲಿ ಒಂದಷ್ಟು ನೋಟುಗಳ್ನ ಹಾಕ್ಕೊಂಬಾ ನಾವಿದೀವಿ ನಿಂಗೆ ಟೈಂಪಾಸ್ ಮಾಡ್ಸಕ್ಕೆ. ಲೇವಡಿ ಮಾಡಿದ ನಮ್ಮ ಸೋಮು. ಸಾಕ್ನಿಲ್ಸು, ಈ ಹೆಸ್ರುಗಳು ಕೇಳಿದ್ರೇನೆ ನನ್ತಲೆ ಗಿರ್ಕಿ ಹೊಡೆಯುತ್ತೆ. ಮತ್ತೇನಾದ್ರೂ ವಿವರ, ವರ್ಣನೆ ಶುರು ಮಾಡಿದ್ಯೋ ಅಷ್ಟೇ ಸೋಮು ಉವಾಚ.

ಹಾಗೆಲ್ಲಾ ನೀನು ಅಷ್ಟೊಂದು ಸೀರಿಯಸ್ ಆಗಿ ಸೀರಿಯಲ್ಗಳ್ನ ತಗೋಬಾರದು. ಅವಕ್ಕೆಲ್ಲಾ ಹೈ ಟೀಆರ್‌ಪಿ ರೇಟಿಂಗ್ ಇದ್ರೇನೆ ಅವು ಮುಂದ್ವರ್ಯೋದು. ಇದೆಲ್ಲ ಕಮರ್ಶಿಯಲ್ ಯುಗ, ಅಲ್ದೆ ಅವುಗಳ ಭಕ್ತಾದಿಗಳು ಇಷ್ಟ ಪಡೋವಾಗ ನಿನಗೆ ಬ್ಯಾಡ ಅನ್ಸಿದ್ರೆ ಬಾಲ ಮುದರ್ಕಂಡಿರು, ನೋಡಬ್ಯಾಡ, ಅಷ್ಟೇಯ. ವಿಶ್ವ ಸಮರ್ಥಿಸಿಕೊಂಡ ತಾನೂ ಸೀರಿಯಲ್ ಅಡಿಕ್ಟ್ ಆಗಿರೋದನ್ನ!

ರಾಘಣ್ಣಿ ಹೊಸ ಐಡಿಯಾ ಹಾಕ್ದ. ನಾವೇ ಯಾಕೆ ಒಂದು ಸೀರಿಯಲ್ನ ತೆಗೀಬಾರ್ದು? ನಿಂದೇ ಬ್ಯಾಂಕ್ ಅಕೌಂಟ್ನಲ್ಲಿ ಹಣ ಹೂಡಿ, ಕಥೆ, ಸ್ಕ್ರಿಪ್ಟ್ ರೆಡಿ ಮಾಡ್ಕಂಡ್ ಚಾನೆಲ್ ಕಮಾಂಡರ್ನ ಹೋಗಿ ನೋಡೋದು? ನಿಂಗೇನ ಅನುಭವ ಇದೆ ಅಂತ ಅವ್ರುಗೋಳು ಮಣೆ ಹಾಕ್ತಾರೆ. ಹಣ ಒದಗಿಸೋ ಚಿಕ್ಕಪ್ಪ ಯಾರು, ಎಲ್ಲಿಂದ ಕ್ಯಾಪಿಟಲ್ ತರ್ತಿ, ಬಾಯಿದೆ ಅಂತ ಏನೇನೋ ಒದರ್‌ಬ್ಯಾಡ ಸೋಮು. ಅವ್ನ ಬಾಯ್ಮುಚ್ಚಿಸಿದ. ಅಲ್ಲಿಗೆ ಆ ಮಾತು ಮುಕ್ತಾಯ, ಹರಟೆ ಮತ್ತೆಲ್ಲಿಗೋ ತಿರುಗಿತು.

ನನಗೂ ಅನ್ನಿಸಿದ್ದುಂಟು. ಈ ಟೀವೀ ಸೀರಿಯಲ್ಗೋಳು ಸಂತೆ ಮಾದರಿಯಾ, ಸಂಜೆಹೊತ್ಗೆ ಸೀರೆ ಎಂಟ್ಮೊಳ ನೇಯ್ದರಂತೆ ಅನ್ನೋ ಹಾಗೆ ಕಸರತ್ಮಾಡೋದಾ, ಯಾವ್ಗುಣ ಮಟ್ಟ ಇವಕ್ಕೆ ಅನ್ವಯಿಸ್ತಾರೆ, ಕಥಾ ಹಂದರ ನಮ್ಮ ಹಳೇಕಾಲ್ದ ಕಾದಂಬರೀಗಳ ತರಹ ಬರದು ಮುಗಿಸಿದ್ಮೇಲೆ ನೋಡಿ ಚೆನ್ನಾಗಿದೆ ಅಂತ ಹೇಳೋ ಸಾಹಿತಿಗಳ ಮಾತ್ನ ಆಧಾರದ ಮೇಲೆ, ಸ್ಕ್ರಿಪ್ಟ್ ಬರೆಯೋದುಂಟಾ ಅಥವಾ ಇವತ್ತಗಿಷ್ಟು, ನಾಳೆಗೆ ಇನ್ನಷ್ಟು ಅನ್ನೋ ತರಾ ಬರೆದು ಮುಗ್ಸೋದಾ, ಈ ಟೀಆರ್‌ಪಿ ಅಂದ್ರೆ ಯಾವ ರೀತಿ ತಕಡಿ ಲೆಕ್ಕ? – ನಾನೇ ಸ್ವಲ್ಪ ಜೋರಾಗಿ ಮೆಲಕು ಹಾಕ್ತಾ ಇದ್ದಾಗ ನನ್ಮಾತು ಕೇಳಿಸ್ಕೊಂಡ ಸೋಮು ಅಂದ. ಹೊಸ್ದಾಗಿ ಟೀವೀ ಮಾಧ್ಯಮ ಕನ್ನಡಕ್ಕೂ ಸೇರ್ಪಡೆಯಾದಾಗ, ಏಕಮೇವ ಸರ್ಕಾರಿ ಚಾನೆಲ್ ಆಗಿದ್ರೂ ತುಂಬಾ ಒಳ್ಳೊಳ್ಳೆ ಸೀರಿಯಲ್ಗಳು ಬಂದುಹೋದ್ವು. ಮಹಾಭಾರತ್ ಹಿಂದೀಲಿ ತೆಗದ್ರೂ ಇಡೀ ದೇಶ್ವೇ ಎಲ್ಲಾ ಬಿಟ್ಟು ಭಾನ್ವಾರ ಬಂದ್ರೆ ನೋಡೋವ್ರು. ರಸ್ತೆಗಳೆಲ್ಲಾ ಖಾಲಿ ಇರೋವು ಅಂದ್ರೆ ಏನಾಶ್ಚರ್ಯ? ರಾಘಣ್ಣಿ ಧ್ವನಿ ಕೂಡಿಸಿದ ಇಂದಿನ ಕೆಲವು ಚಾನೆಲ್ಗಳಲ್ಲಿ ಬರುವ ಹಲವು ಸೀರಿಯಲ್ಗಳನ್ನ ದ್ರೌಪದಿಯ ಮಾನಭಂಗದ ಸೀನಲ್ಲಿ ದುಶ್ಯಾಸನ ಸೀರೆ ಎಳೆದೂ ಎಳೆದೂ ಸುಸ್ತಾದರೂ, ಅದು ಅಕ್ಷಯವಾಗುತ್ತಲೇ ಇರುತ್ತಲ್ಲ, ಅದಕ್ಕೆ ಹೋಲಿಸಬಹುದು. ಈ ಸೀರಿಯಲ್ಗಳನ್ನ ವಾರವಾರವೂ ರಬ್ಬರಿನಂತೆ ಎಳೀತಾನೆ ಇರ್ತಾರಲ್ಲವೋ ವಿಶ್ವ? ಅದ್ರಲ್ಲಿ ಕಂಟೆಂಟ್, ಥೀಮ್, ಆರಂಭ, ಕೊನೆ ಹುಡುಕಿದ್ರೂ ಸಿಗ್ಬಹುದೇ? ಎಲ್ಲೋ ಹಲವು ಹಾಗೇ ಇದ್ರೂ ಒಂದೇ ತಕ್ಕಡಿಗೆ ಹಾಕೋದ್ಸರಿಯಲ್ಲ ಸೋಮು, ಕ್ಯಾರೆಕ್ಟರುಗೋಳು ಎಕ್ಸ್ಚೇಂಜ್ ಆಗ್ಬಾರ್ದು. ಕಥೇನಲ್ಲಿ ಅದೆಷ್ಟೋ ತಿರುವುಗಳಿರುತ್ತಯ್ಯ ನೀ ಏನಾದ್ರೂ ಅನ್ನು, ಇವತ್ತಿನ ಕಥೆ ನಾಳೆ ಬೇರೆ ಆದ್ರೂ ಹೆಚ್ಚೇನಿಲ್ಲ. ಯಾವಾಗ್ಯಾವಾಗ ಕ್ಯಾರೆಕ್ಟರುಗಳು ಚೇಂಜ್ ಆಗತಾರೋ ಭಗ್ವಂತ್ನೇ ಬಲ್ಲ. ವಿಶ್ವನಿಗೆ ರೇಗಿತು. ಗೊತ್ತಾಗ್ತಾನೆ ಪ್ರೇಕ್ಷಕ ಏನು ಮಾಡಬೇಕು? ಕಥೇನಲ್ಲಿ ಎಷ್ಟೋ ತಿರುವುಗಳಿರ್ಬಾರ್ದು ಅಂತ ರೂಲ್ಸಿದೆಯ? ಅಲ್ದೆ ಎಲ್ಲಾ ಸೀರಿಯಲ್ಗಳೂ ಒಂದೇ ತರಾ ಇರಲ್ಲ, ನಾನಂದೆನೋಡ್ರಯ್ಯ, ಮನೇಲಂತೂ ಇದರಿಂದ ಶಾಂತ ವಾತಾವರಣ, ಸಂತೋಷ ಪಡ್ರಯ್ಯ, ಗಂಡ ಹೆಂಡ್ರ ಮಧ್ಯೆ ಸೀರಿಯಲ್ ವೇಳೆ ಮೌನ ಆವರಿಸಿರುತ್ತೆ, ಇಲ್ಲಾ ಗಂಡ ಕ್ಲಬ್ಬು, ಸ್ನೇಹಿತರುಗಳಿಗೆ ಚಾಲು, ಮಕ್ಕಳು ಮೊಬೈಲ್ನಲ್ಲಿ ಚಾಟು, ಗೇಮು ಇಲ್ಲ ಹೋಮ್ವರ್ಕನಲ್ಲಿ ಡಿಪ್ಪಿಂಗ್, ಇನ್ನ ಅತ್ತೆ–ಸೊಸೆ ಒಟ್ಟಿಗೇ ಕೂತು–ಬಿಡ್ತು ಅನ್ನಿ, ಆ ಕಾಲ ಎಂದೋ ಹೋಯ್ತು, ಈಗ ಮೋದಿ ಯುಗದಲ್ಲಿದೀವಿ, ಅಲ್ವೇನ್ರೋ ಬೆಪ್ಪು ತಕ್ಕಡಿಗಳ, ಏನ್ಹೇಳ್ತೀರಾ? ಅಂದೆ. ಚಂದ್ರು ಅಂದ ಈ ಮೂವತ್ತು ನಿಮಿಷದ ಸೀರಿಯಲ್ಗಳಲ್ಲಿ ಐದೈದು ನಿಮಿಷಗಳಿಗೂ ಬ್ರೇಕು, ಎರಡು–ಮೂರು ನಿಮಿಷಗಳಿಗೂ ಜಾಹೀರಾತು ನೋಡಿದ್ದನ್ನೇ ಮತ್ತೆ ನೋಡೋದು, ಮುಖ ತೊಳೆಯಕ್ಕೆ ಯಾವ್ದೋ ಸುಂದರಿ ಅರೆನಗ್ನವಾಗಿ ಮೈಯೆಲ್ಲಾ ಕುಲುಕುತ್ತಾ ತೋರ್ಸೋ ಸೋಪು, ಹಲ್ನಲ್ಲಿ ಇರೋ ಕ್ರಿಮಿಗಳು ಹೋಗಿ ಹೊಸ್ದಾಗಿ ಬರೋವನ್ನ ತಡೆಯೋಕೆ ಇವ್ರ ಬ್ರಾಂಡ್ ಪೇಸ್ಟ್ ಹಾಕ್ಕೊಳ್ಳೀಂತ, ಇಲ್ವೆ ಆಮಶಂಕೆ ಬಂದ್ರೆ ತಡೆಯೋಕೆ ಇವ್ರ ಗುಳಿಗೆ, ಇಲ್ವೆ ಇವ್ರ ಟೀವಿ ಬಿಟ್ಟೋಹೋಗ್ಬಾರ್ದು ಅಂತ ಮುಂದೆ ತೋರ್ಸೋ ಎರಡು, ಮೂರು ಸೀರಿಯಲ್ಗಳ ವೈಭವಾನ ಮುಂಚೇನೇ ತೋರ್ಸೋ ಜಾಹೀರಾತ್ಗಳು, ಮಧ್ಯೆ ಸಿಗ್ನಲ್ ಟ್ಯೂನ್ ಹೀಗೆ ಕಥೆ ಮುಂದುವರೆಯೋದೇ ಇಲ್ಲ. ಮತ್ತೈದು ನಿಮಿಷ ಸೀರಿಯಲ್ಲು, ನಂತರ ಯಥಾ ಪ್ರಕಾರ ಅದೇ ಇಂಗ್ಲೀಷ್ನಲ್ಲಿ ಹೇಳ್ತಾರಲ್ಲ – ಅದೇ ರಿಗಮರೋಲ್. ಜಾಹೀರಾತಿಲ್ದೆ ಏನೂ ಆಗಲ್ಲ ಅದ್ಕೆ.

ಹೇಗಾದ್ರೂ ಟೀಆರ್‌ಪಿ ಜೋರಾಗಿದ್ರೇನೆ ನಡೆಯೋದು, ಜನ ನೋಡೋದು, ನಮ್ಮೆಲ್ಲಾದಾಳು ಗೌರಿ ಪ್ರಕಾರ ಕರ್ಚೀಫ್ಷಿಂದ ಎಷ್ಟೆಷ್ಟು ಕಣ್ಣೀರುಸ್ರಸ್ತಾರೋ ನೋಡೋವ್ರು, ಅಷ್ಟೂ ಟೀಆರ್‌ಪಿ ಜಾಸ್ತಿ ಆಗೋದು ಕಣ್ರಪ್ಪ ಅಂತ! ನಂ ರಾಘಣ್ಣಿ ಇನ್ನೂ ಒಂದ್ಸಂಶೋಧನೆ ಮಾಡಿದಾನೆ. ನೋಡ್ರೋ ಈ ನಡ್ವೆ ಸಿನಿಮಾಗಳ್ತರಾನೇ ಪ್ರೀತಿ, ಪ್ರಣಯ, ಮರ ಸುತ್ತೋದು, ಕಿಡ್ನಾಪು, ಕದಿಯೋದು, ತೋರಸ್ತಾರೆ, ಸದ್ಯ ರೇಪ್ ಇನ್ನಾ ತೋರಸ್ತಾ ಇಲ್ಲಾಂತ್ಕಾಣುತ್ತೆ. ಸೋಮುಗೆ ರೇಗಿತು. ಅಲ್ಲಯ್ಯ, ಅಲ್ಲಿ ಮರ ಸುತ್ತೋದರಿಂದ, ಲವ್ಮಾಡೋದ್ನ ತೋರ್ಸ್ನೋದ್ರಿಂದ ಸೀರಿಯಲ್ ಅಚಾನಕ್ ಆಗಿ ಬೆಳೆಯುತ್ತೆ, ಅದಕ್ಕಾಗಿಯಾದ್ರೂ ಮರಗಳ್ನ ಉಳ್ಸಿಕೊಂಡಿದಾರೆ, ಮರಗಳ್ನ ಸುತ್ತಾಡಿದ್ರೆ ನಿಮಗಳಿಗೇನ್ಮುಜುಗರ ಸ್ವಾಮಿ, ನೀನೂ ಸಿನಿಮಾ ಪ್ರೀತ್ಸೋದಾದ್ರೆ, ಇದನ್ನೂ ನೋಡ್ಬೋದಲ್ಲವಾ? ಹನಿಮೂನ್ಗೆ ಹೋದಾಗ ನಿನ್ವಿಚಾರ ಏನಾಗಿತ್ತು? ಸುಮ್ನೆ ಪೇಚಾಡೋದು ಬಿಡು ಅಂದ. ವಿಶ್ವನಿಗೆ ಮತ್ತೊಬ್ಬ ಇವನ ರೀತೀಲೇ ಮಾತಾಡಿದ್ದು ಖುಷಿಯಾಯ್ತು. ಅವ ಅಂದ ನೋಡ್ರೋ, ರಾಘಣ್ಣಿ ಇನ್ನೂ ಬ್ಯಾಚುಲರ್, ಇವ್ನು ಮದುವೆ ಆಗೋ ಹೊತ್ಗೆ ಬೆಂಗಳೂರ್ನಲ್ಲಿ ಮರಗಳ್ನೆಲ್ಲಾ ಉರುಳಿಸ್ಬಿಟ್ಟಿರ್ತಾರೆ, ಸುತ್ತೋ ಪ್ರಶ್ನೇನೇ ಇರೋಲ್ಲ, ಯೋಚ್ನೇನೇನೆ ಬೇಡ.

ನನಗನಸ್ತು ವರ್ಷಾನುಗಟ್ಲೆ ಸೀರಿಯಲ್ಗಳ್ನ ರಬ್ಬರ್ ತರಾ ಎಳೀತಾ, ನಮ್ಮೂರ್ನ ಗಮಕದ ಕೀರ್ತನ ಕ್ರಿಷ್ಟಾಚಾರ್ರು ಎಳೆದೆಳೆದು ಹಾಡುವಂತೆ, ನನ್ನಂಥಹವರನ್ನು ಹಿಂಸಿಸೋ ಬದಲು ಮಾಮೂಲಿ ಚಿತ್ರಗಳಂತೆ ಮೂರೋ ಇಲ್ಲ ನಾಲ್ಕು ಘಂಟೆ ಒಳಗೆ ಮುಗಿಯೋ ಸಿನೆಮಾನೇ ಮಾಡಿದ್ರೆ ಸಲೀಸು, ಏನಂತೀರಿ? ರಾಘಣ್ಣಿ ಇನ್ನೂ ಸಂಶೋಧನೆ ಮುಂದ್ವರೆಸಿದ್ದ, ಅವ್ನ ಪ್ರಕಾರ ಇಲ್ಲೂ ಕೊಲೆ, ದರೋಡೆ, ಥಕಥಕ ಡ್ಯಾನ್ಸು, ಕಿಡ್ನಾಪು, ಮನೇಲಿರೋ ಹೆಂಗಸ್ರು ಏನ್ಮನೆ ಕೆಲ್ಸ ಮಾಡದಿದ್ರೂ, ಯಾವಾಗ್ಲೂ ಪಿತೂರಿ ನಡೆಸೋದನ್ನೇ ಎಳೆಎಳೆ ಯಾಗ್ತೋರಸ್ತಾರೆ. ಇಲ್ಲಿ ನಾಜೂಕು, ಪ್ರೀತಿ, ವಿಶ್ವಾಸ, ಸಹನೆ ತೋರ್ಸೋದು ಕಮ್ಮಿ ಏನಂತೀರಿ? ಯಾರ್ ಏನ್ಮಾಡ್ತಾರೋ ಇಲ್ವೋ ನೀತಿಪಾಠ ಕಲಿಸ್ತಾರೆ – ಅತ್ತೆ ಮೇಲೆ ಸೊಸೆ, ಸೊಸೆ ಮೇಲೆ ನಾದ್ನಿ, ಇಲ್ವೆ ನಾದಿನಿ ಮೇಲೆ ಚಿಕ್ಕಪ್ಪನೋ ಇನ್ಯಾರೋ ಕತ್ತಿ ಮಸೀಯೋದ್ನ ತೋರಿಸ್ತಾ, ಹೊಸ್ದಾಗಿ ಮದ್ವೆ ಆಗ್ಬರೋ ಸೊಸೆ ಇವೆಲ್ಲಾ ತಲೇಲಿಟ್ಕಂಡ್, ಕಂಡೀಷನ್ಮಾಡೇ ಅತ್ತೆ ಮನೆಗೆ ಕಾಲಿಟ್ಟರೆ ಸಮಾಜ ಹೇಗಿರುತ್ತಯ್ಯ? ಸೇರಿಸಿದ ವಿಶ್ವ ಹೀಗಾದರೆ ಹೆತ್ತು, ಹೊತ್ತು ಸಾಕಿದ ಮಕ್ಕಳೇ ವಯಸ್ಸಾದ ಅಪ್ಪ, ಅಮ್ಮಂದಿರನ್ನ ವೃದ್ಧಾಶ್ರಮಕ್ಕೆ ಕಳುಹಿಸಿ, ನೆಮ್ಮದಿಯಾಗಿರ್ತಾರೇನೋ? ಅದಕ್ಕೆ ಸೋಮು ಹೇಳಿದ ಈಗೆಲ್ಲಾ ಹಾಗೇ ಆಗ್ತಾ ಇರೋದು ನೀವ್ಗಳು ಕೇಳ್ಳಿಲ್ಲವೇನ್ರೋ?

ನನಗೆ ತಿಳಿದಿರೋ ಹಾಗೆ ಒಂದ್ಕಾಲದ್ಲಲ್ಲಿ ರೇಡಿಯೋ ಎಂಬ ಮ್ಯಾಜಿಕ್ ಪೆಟ್ಟಿಗೆಗೆ ಮರುಳಾಗಿ, ಕ್ರಿಕೆಟ್ ಮ್ಯಾಚ್ಗಳನ್ನ ಆಗಿನ ಕಾಮೆಂಟೇಟರ್ಗಳ – ವಿಜಿ, ಸುರೇಶ ರೈನ, ಬೆರ್ರಿ ಸರ್ವಾಧಿಕಾರಿ, ಆನಂದ್ರಾವ್, ಚಕ್ರಪಾಣಿ – ಇಂಥವ್ರ ಮಾತ್ಕೇಳಕ್ಕೆ ರೇಡಿಯೋಗೆ ಅಂಟ್ಕೊಂಡಿರ್ತಿದ್ದುದು, ಮನೆಗಳಲ್ಲಿ ರೇಡಿಯೋ ಇಲ್ಲದವರು ದಾರಿಯಲ್ಲಿನ ಹೋಟೆಲ್ಲುಗಳ ಮುಂದೆ ನಿಂತು ವಿವರಣೆ ಕೇಳಿ, ನಮ್ಮವರು ಬೌಂಡರಿ ಬಾರಿಸಿದರೆ ಹಿಗ್ಗಿ ಕೇಕೆ ಹಾಕುವುದು, ಔಟಾದರೆ ಹಿಡಿ ಶಾಪ ಹಾಕುವುದು ಮಾಮೂಲಿಯಾಗಿತ್ತು! ದೊಡ್ಡವ್ರ ಕೈಲಿ ಬೈಯಿಸ್ಕೊಳ್ಳೋದು ಅನಿವಾರ್ಯ! ಸೈಗಾಲ, ರಫಿ, ಲತಾ, ಆಶಾ, ಮನ್ನಾಡೇ, ಮಹಾಲಿಂಗಂ, ಕಾಳಿಂಗ ರಾವ, ಪಿಟೀಲು ಚೌಡಯ್ಯ, ಜಾನಕಿ, ಅನಂತಸ್ವಾಮಿ – ಹೀಗೆ ಅವರೆಲ್ಲರ

ಹಾಡುಗಳಿಗೆ ದೊಡ್ಡ ಸ್ಪೀಕರ್ನ ಮುಂದೆ ನಾಯಿಯೊಂದು ಎದುರು ನೋಡ್ತಾ ಇರೋ ಗ್ರಾಮಾಫೋನ್‌ಗೆ ಮುಗಿ ಬೀಳ್ತಾ ಇದ್ದು, ನಂತರ ಇನ್ನೊಂದು ಕ್ರಾಂತಿಯಾಗಿ, ಟೇಪ್ ರಿಕಾರ್ಡುಗಳು ಕಾಲಿಟ್ಟು, ಎರಡೇ ದಶಕಗಳ ಅಂತರದಲ್ಲಿ ಇವೂ ಮೂಲೆಗೆ ತಳ್ಳಲ್ಪಟ್ಟು, ಫ್ಲಾಪಿ, ಡಿಸ್ಕು ಬಂದವು. ಈ ಮಧ್ಯೆ ಎಂಭತ್ತರ ದಶಕದ ನಂತರ ಈ ಆಧುನಿಕ ಮೂರ್ಖ ಪೆಟ್ಟಿಗೆ ಯಾವಾಗ ಬಂತೋ ಅಲ್ಲಿಂದ ಎಲ್ಲಾ ಜನರ ಸಂಸ್ಕೃತಿಯೇ ಬದಲಾವಣೆ ಆಗಿರೋದು, ಆಗ್ತಾ ಇರೋದ್ನ ನಾವೆಲ್ಲಾ ಇಂದು ಕಾಣ್ತಾ ಇದೇವಲ್ಲ? ಇವೆಲ್ಲಕ್ಕಿಂತ ಹೆಚ್ಚು ಪರಿಣಾಮ ಬೀದಿಬದಿಯ ಕಳ್ಳೇಕಾಯಿ ಮಾರುವ ಅಜ್ಜಿಯಿಂದ ಹಿಡಿದು, ಮೂರು ವರ್ಷದ ಪುಟಾಣಿ ಮಕ್ಕಳನ್ನೂ, ರಾಷ್ಟ್ರಾಧ್ಯಕ್ಷರಿಂದ ಹಿಡಿದು, ಡವಾಲಿ ಜವಾನನ ತನಕ ಬಿಡದೆ ಅಮರಿಕೊಂಡ ಸೆಲ್ಫೋನ್ ಎಂಬ ಅಂಗೈ ಅಗಲದ ಮಾಯಾವಿನಿಯ ಮರುಳಾಟಕ್ಕೆ, ವಾಟ್ಸಪ್ ಚಾಟ್ಗೆ ಮುಗಿಬೀಳದವರ್‍ಯಾರು? ಇದೀಗಿನ ಜನಕ್ಕೆ ಉಪಹಾರ, ಊಟ ಮಧ್ಯೆಯೂ ಸೆಲ್ಫೋನು ಜ್ಞಾನ ಸಂಜೀವಿನಿಯೇ ಆಗಿಹೋಗಿದೆಯೆನ್ನುವ ಮಾತು ಸತ್ಯಕ್ಕೆ ದೂರವಿಲ್ಲ! ಅಂದು ಆ ಸಾಧನಗಳು ಎಲ್ಲರನ್ನೂ ರೊಮ್ಯಾಂಟಿಕ್ ಯುಗಕ್ಕೆ ತಳ್ಳಿದ್ದರೆ, ಇದೀಗ ಸೆಲ್ಫೋನು, ಟೀವೀ ಚಾನೆಲ್ಗಳಿಂದಾಗಿ ಎಲ್ಲೋ ನಡೆಯುವ ಕೊಲೆ, ಸುಲಿಗೆ, ಅತ್ಯಾಚಾರ, ಯಾರು, ಎಲ್ಲಿ, ಏನುಮಾಡುತ್ತಿದ್ದಾರೆ ಎಂಬುದನ್ನೂ ಮನೆಯಲ್ಲಿ ಕೂತೇ ತಿಳಿದು, ನೋಡುವಂತಹ ಸಂಸ್ಕೃತಿಗೆ ಹೊಂದಿಕೊಂಡಾಗಿಲ್ಲವೆ? ಇನ್ನು ಈ ಟೀವೀ ಚಾನೆಲ್‌ಗಳ ಟೀಆರ್‌ಪಿ ರೇಟಿಂಗ್ ಎಂಬ ರಕ್ಕಸನ ಬಗ್ಗೆ ಯಾಕಾದರೂ ತಲೆ ಕೆಡಿಸಿಕೊಳ್ಳಬೇಕು ಸೋಮು, ವಿಶ್ವ, ಚಂದ್ರು, ರಾಘಣ್ಣೋ? ನಾ ಹೇಳಿದ್ದು ಸರೀನಾ, ತಪ್ಪಾ ಎರಡೂ ಅಲ್ಲಾ ಅಂದ್ರೆ ಇನ್ನೇನ್ರಪ್ಪಾ ನೀವೇ ಹೇಳಿ?

ವೇದೋಕ್ತಿಯ ಸತ್ಯಂ ವದ, ಧರ್ಮಂ ಚರ ಹಾಗು ಭದ್ರಂ ಕರ್ಣೇಭಿಃ ಶ್ರುಣುಯಾಮ ದೇವಾಃ, ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ / ಸ್ಥಿರೈರಜ್ಗೈಸ್ತುಷ್ಟುವಾಗಂ ಸಸ್ತೂನೂಭಿಃ, ವ್ಯಶೇಮ ದೇವಹಿತಂ ಯದಾಯುಃ// ಎಂಬ ಶಾಂತಿ ಮಂತ್ರದಂತೆ ಒಳ್ಳೆಯ ದಿನಗಳು ಬರುವುದೋ ಕಾದು ನೋಡೋಣ. ಏನ್ಹೇಳ್ತೀರಿ?

●


## ಮನೆ ಬಾಡಿಗೆಗೆ ಇದೆ

ಗಾಳಿ ಬೆಳಕು ಯಥೇಚ್ಚವಾಗಿ ಇರುವ 2 ಬೆಡ್ ರೂಂ ಫ್ಲಾಟ್ ಶ್ರೀರಾಮಪುರದಲ್ಲಿ ಬಾಡಿಗೆಗೆ ದೊರೆಯುತ್ತದೆ. ಬಸ್ ಸ್ಟಾಂಡ್, ಶಾಲೆ ಸಮೀಪದಲ್ಲಿದೆ. **ಹತ್ತಿರದಲ್ಲೇ ಇಂದಿರಾ ಕ್ಯಾಂಟೀನ್ ಸಹ ಇದೆ.**

ಸಂಪರ್ಕ: 0677889900

# ಪಂಚ್ ಪದ್ಯಗಳು

**ರಾಜಕೀಯ**

- ಎಚ್. ಡುಂಡಿರಾಜ್

–1–

ಗೆದ್ದರೆ ಸಂಸದ, ಮಂತ್ರಿ ಪಟ್ಟ
ಸೋತರೆ ರಾಜ್ಯಸಭೆಯಲ್ಲಿ ಜಾಗ
ಎಪ್ಪತ್ತೈದರ ನಂತರ
ರಾಜ್ಯಪಾಲರಾಗುವ ಯೋಗ
ರಾಜಕೀಯ ಕೆಲವರ ಪಾಲಿಗೆ
ನಿವೃತ್ತಿ ಇಲ್ಲದ ಉದ್ಯೋಗ!

–2–

ಕೆಲವು ಸಚಿವರಿಗೆ
ಯಾವ ಖಾತೆ ಕೊಟ್ಟರೂ
ಪ್ರಯೋಜನವಿಲ್ಲ ವೇಸ್ಟ್
ಜಾತಿ, ಪ್ರದೇಶ ನೋಡಿ
ಮಾಡುವ ಪುನಾರಚನೆ
ಸುಮ್ಮನೆಕಟ್ ಪೇಸ್ಟ್!

–3–

ತಂಬಾಕು, ಕುಡಿತ
ಹಾದರದ ಹಾಗೆ
ರಾಜಕೀಯವೂ
ಒಂದು ವ್ಯಸನ
ಆರಂಭಿಸುವುದು ಸುಲಭ
ನಿಲ್ಲಿಸುವುದು ಕಠಿಣ!

–4–

ಅನುಭವ ಗುಣ ನಡತೆ
ಶೈಕ್ಷಣಿಕ ಅರ್ಹತೆ
ಎಲ್ಲವೂ ಗೌಣ
ಮಂತ್ರಿಯಾಗಲು ಸಾಕು
ಎರಡೇಎರಡು
ಜಾತಿ ಮತ್ತು ಹಣ!

–5–

ಇನ್ನೂ ಹೆಚ್ಚು ಹೆಚ್ಚು
ಓದಬೇಕಾಗುತ್ತದೆ
ಪಾಸಾದರೆ ಎಸ್‌ಎಲ್‌ಸಿ
ಫೇಲಾದರೆ ಚಿಂತೆಯಿಲ್ಲ
ಆಗಬಹುದು ಮುಂದೆ
ಮಂತ್ರಿ, ಎಂಎಲ್‌ಎ, ಎಂಎಲ್‌ಸಿ

●

# ಕೇಶ ಕ್ಲೇಶ ಕಳೆದಾಗ

**- ನಳಿನಿ ಸೂರ್ಯಪ್ರಕಾಶ್**

**ಮೂ**ರು ದಶಕಗಳು, ಅಂದ್ರೆ ಮೂವತ್ತು ವರ್ಷಗಳು....., ಅಂದ್ರೆ ಹತ್ತು ಸಾವಿರದ ಒಂಭೈನೂರು ದಿನಗಳು! ದಿನಕ್ಕೆರಡು ಬಾರಿ, ಬೆಳಗ್ಗೆ-ಸಂಜೆ, ಅಂದ್ರೆ ಇಪ್ಪತ್ತೊಂದು ಸಾವಿರದ ಒಂಭೈನೂರು ಸಲ ನಾನು ನನ್ನ ಜಡೆ ಹೆಣೆದುಕೊಂಡಿರೋದಂತೂ ಗ್ಯಾರಂಟಿ! ಎಣ್ಣೆ ಹಚ್ಚಿ ಮಧ್ಯ ಬೈತಲೆ ತೆಗೆದು, ಗಾಢವಾದ ಕೇಶರಾಶಿಯನ್ನ ಮೂರು ಭಾಗ ಮಾಡಿ, ಮೊಳದುದ್ದ ಜಡೆ ಹೆಣೆದು, ಕೆಳಗೆ ಹೇರ್ ಬ್ಯಾಂಡ್ ಸುತ್ತಿ, ತಲೆಯ ಬುಡದ ಎಡ-ಬಲ ಬದಿಗಳಲ್ಲಿ ಎರಡೆರಡು ಹೇರ್ ಪಿನ್ನುಗಳನ್ನು ಸಿಕ್ಕಿಸಿದರೆ ಮುಗೀತು! ಹೀಗೆ ನಾನು ಇಪ್ಪತ್ತೊಂದು ಸಾ..... ಬಾರಿ ಜಡೆ ಹೆಣೆದೂ ಹೆಣೆದೂ..... ನೀ ಜಡೆಯೊಳಗೋ, ನಿನ್ನೊಳು ಜಡೆಯೋ ಎಂಬಂತೆ ಇತ್ತೀಚೆಗೆ ಭಾಸವಾಗತೊಡಗಿತು.

**ಸಂತೂರ್ ಮಮ್ಮಿಯ ಚೇತೋಹಾರಿ ಸ್ವಾತಂತ್ರ್ಯ.....**

ಹಳೆಯ ಕೇಶಾಲಂಕಾರ....... ಅಲ್ಲಲ್ಲ ಕೇಶಾವಸ್ಥೆಯಿಂದ ರೋಸಿಹೋಗತೊಡಗಿದೆ. ಈ ಏಕತಾನತೆ ತಂದ ಕಿರಿಕಿರಿ-ಅಸಮಾಧಾನಗಳಿಂದ ಕನ್ನಡಿಯೊಳಗಿನ ನನ್ನ ಮುಖ ಗಂಟಿಕ್ಕತೊಡಗಿತು. ನನ್ನನ್ನು ಕಾಡಹತ್ತಿದ್ದ ಈ ಕೇಶ ಕ್ಲೇಶವನ್ನು ಆಪ್ತಗೆಳತಿಯರ ಗುಂಪಿನಲ್ಲಿ ತೋಡ್ಕೊಂಡೆ. ನನ್ನ ಮನದಿಂಗಿತಕ್ಕೆ ಇಂಬು ಕೊಟ್ಟು ''ಯಸ್, ಇಟ್ಸ್ ಟೈಂ ಫಾರ್ ಎ ಛೇಂಜ್!'' ಎಂದು 'ಕತ್ತರಿ ಪ್ರಯೋಗಕ್ಕೆ' ಹುರಿದುಂಬಿಸಿಬಿಟ್ರು.

ನಂತರ ಕೆಲವೇ ದಿನಗಳಲ್ಲಿ ಗೆಳತಿಯನ್ನು ಜೊತೆಮಾಡಿಕೊಂಡು ಬ್ಯೂಟಿ ಪಾರ್ಲರಿನ ಬ್ಯೂಟಿಯ ಕೈಗೆ ನನ್ನ ತಲೆಕೊಟ್ಟುಕೂತೆ. ಅದೇನು ಚಾಕಚಕ್ಯತೆ ಅಂತೀನಿ! ಚಕಾಚಕ್! ಚಕಾಚಕ್! ಕತ್ತರಿ ಹತ್ತಾರು ಬಾರಿ ನನ್ನ ಕೇಶರಾಶಿಯ ನಡುವೆ ಹರಿದಾಡಿತು. ಈ ಕತ್ತರಿ ಪ್ರಯೋಗದ ಪರಿಣಾಮ, ನನ್ನ ಮೊಳದುದ್ದ ಜುಟ್ಟು ಮೊಟಕಾಗಿ, ಭುಜಗಳ ಮೇಲೆ ಇಂಗ್ಲೀಷಿನ 'ಗ' ಆಕಾರದಲ್ಲಿ ಹರಡಿಕೊಂಡಿತು. ಪದರಪದರವಾಗಿ ಕೂದಲಿನ ಉದ್ದ ಕಡಿಮೆಯಾಗುವ ಈ ಶೈಲಿಗೆ 'ಲೇಯರ್ಸ್' ಅಂತಾರಂತೆ. ಎಂಥಾದ್ದೋ, ಒಟ್ಟಿನಲ್ಲಿ ನನಗೊಂದು ಹೊಸರೂಪವಂತೂ ಬಂತು. 'ವಾರೆವಾಹ್!' ಎನ್ನುತ್ತ ಗೆಳತಿ ನನ್ನ ಫೋಟೋ ಕ್ಲಿಕ್ಕಿಸಿ, ನಮ್ಮ ವಾಟ್ಸಾಪ್ ಗುಂಪಿನಲ್ಲಿ ಹರಿಬಿಟ್ಟಳು. ಎಲ್ಲರ ಪ್ರತಿಕ್ರಿಯೆಗಾಗಿ ಹಾತೊರೆಯುತ್ತಾ, ಗೆಳತಿಯಿಂದ ಬೀಳ್ಕೊಂಡು ಬಸ್ಸು ಹತ್ತಿದೆ. ಕಿಟಕಿಯಿಂದ ತೂರಿಬಂದ ಗಾಳಿಗೆ ನನ್ನ ಗೇಣುದ್ದ ಇಳಿಬಿಟ್ಟ ಕೂದಲು ಹಾರಾಡತೊಡಗಿ ಅದರ ಲಾಸ್ಯಕ್ಕೆ ಕಚಗುಳಿಯಿಟ್ಟಂತಾಯ್ತು! ಈ ಚೇತೋಹಾರಿ ಸ್ವಾತಂತ್ರ್ಯ ತಂದುಕೊಟ್ಟ ಖುಷಿಯಂತೂ ವರ್ಣನಾತೀತ! ಮೂರು ದಶಕಗಳ ನನ್ನ ಕೇಶಾವಸ್ಥೆ ಎಂಬ ಕೋಶಾವಸ್ಥೆಯಿಂದ ಹೊರಬಂದ ಚಿಟ್ಟೆಯಂತಾಗಿದ್ದೆ! ಆಹಾ! ಮೈಮನಸ್ಸುಗಳೆರಡೂ ಹಗುರಾದ ಅನುಭವ!

ಇತ್ತ ನಮ್ಮ ಗೆಳತಿಯರ ವಾಟ್ಸಾಪ್ ಗುಂಪಿನಲ್ಲಿ 'ವಾಹ್! ಸೂಪರ್! ತುಂಬಾ ಚೆನ್ನಾಗಿ ಕಾಣಿಸ್ತಿ..' ಮುಂತಾದ ಪ್ರತಿಕ್ರಿಯೆಗಳು ಬರತೊಡಗಿ, ಹಿಗ್ಗಿ ಹೀರೇಕಾಯಾದೆ. ಅಂತೂ ತನ್ನ ಮಗಳು ಈಗಲಾದ್ರೂ ಫ್ಯಾಷನ್ನಿನತ್ತ ವಾಲಿದಳಲ್ಲಾ ಅಂತ ನನ್ನ ಅಮ್ಮನಿಗೆ ಖುಷಿಯೋ ಖುಷಿ!



ನನ್ನ ಹೊಸ ಅವತಾರವನ್ನು ಎಷ್ಟು ಕಣ್ತುಂಬಿಕೊಂಡರೂ ಸಾಲದು. ಎಷ್ಟೇ ಆಗಲಿ, ಹೆತ್ತೋರಿಗೆ ಹೆಗ್ಗಣ ಮುದ್ದು! ಇತ್ತ ಯಜಮಾನರ ನೆತ್ತಿಯನ್ನು ಕ್ರಮೇಣ ಹಣೆ ಆಕ್ರಮಿಸಿಕೊಳ್ಳುತ್ತಿರಬೇಕಾದ್ರೆ, ನಾನು ಇದ್ದ ಮೊಳದುದ್ದ ಜುಟ್ಟನ್ನು ಕತ್ತರಿಸ್ಕೊಂಡು ಬಂದೆ! ಆದಾಗ್ಯೂ ಪತಿರಾಯರು ನನ್ನ ಹೊಸ ಅವತಾರವನ್ನ ಮೆಚ್ಚಿಯೇ ಬಿಟ್ಟರು! ಹಣೆಯ ವೈಶಾಲ್ಯತೆಯ ಜೊತೆಗೆ ಎಂಥಾ ಹೃದಯ ವೈಶಾಲ್ಯತೆ! ಕತ್ತರಿಸಿಕೊಂಡು ಬಂದ ಜುಟ್ಟನ್ನು ಯಜಮಾನರಿಗೆ ಮುಂದೆ ವಿಗ್ ಮಾಡಿಸಿಕೊಡಲು ಜೋಪಾನವಾಗಿ ಕಪಾಟಿನಲ್ಲಿಟ್ಟಿರೋದು ಬೇರೆ ಮಾತು ಬಿಡಿ!

ಈ ಕತ್ತರಿ ಪ್ರಯೋಗದಿಂದ ನನ್ನ ಆತ್ಮವಿಶ್ವಾಸ ಗರಿಗೆದರಿರುವುದಂತೂ ನಿಜ. ಎಲ್ಲಾ ಸಂಕೋಚ – ಹಿಂಜರಿಕೆಗಳಿಗೆ ಸಡ್ಡು ಹೊಡೆದು ನನ್ನ ಹೊಸ ಅವತಾರದಲ್ಲಿ ಮೊದಲ ದಿನ ಆಫೀಸಿನೊಳಗಡಿಯಿಟ್ಟೆ. ಕೆಲವು ಆಶ್ಚರ್ಯಭರಿತ ನೋಟಗಳು ಎದುರಾಗ್ತಿದ್ದಂತೆ, ಆಫೀಸಿನ ನನ್ನ ಗೆಳತಿಯರ ಗುಂಪು ನನ್ನ ಸುತ್ತುವರಿದು, ನನ್ನ ಹೊಸ ಅವತಾರವನ್ನ ಮೆಚ್ಚುತ್ತಾ, ಛೇಡಿಸುತ್ತಾ, ಸಣ್ಣ ಕೋಲಾಹಲವನ್ನೆಬ್ಬಿಸಿಬಿಡ್ತು! ಅಂತೂ ಎಲ್ಲವನ್ನು ನಿಭಾಯಿಸಿಕೊಂಡು ಹಾಜರಾತಿ ಹಾಕಲು ಬಿಗ್ ಬಾಸಿನ ಕ್ಯಾಬಿನ್ನು ಹೊಕ್ಕೆ. ಯಾವುದೊ ಮಾತುಕತೆಯಲ್ಲಿದ್ದ ಬಿಗ್ ಬಾಸು, ಹೊಸ ಮುಖವೊಂದನ್ನ ಕಂಡಂತಾಗಿ, ಎರಡನೆಯ ಬಾರಿ ನನ್ನತ್ತ ನೋಡಿದ್ದು ಓರೆನೋಟದಲ್ಲೇ ಕಂಡ ನಂಗೆ ಒಳಗೊಳಗೇ ನಗು! ಎಲ್ಲರೆದುರು ಪ್ರತಿಕ್ರಿಯಿಸಲು ಬಿಗ್ ಬಾಸಿನ ಬಿಗುಮಾನ ಅಡ್ಡ ಬಂತೇನೋ! ಕೆಲದಿನಗಳ ಬಳಿಕ ತಾವೊಬ್ಬರೆ ಕ್ಯಾಬಿನ್ನಿನಲ್ಲಿರುವಾಗ ''ಏನ್ ಮೇಡಂ? ಹೇರ್ ಸ್ಟೈಲ್ ಛೇಂಜ್ ಮಾಡಿದ್ದು? ನೈಸ್, ನೈಸ್..'' ಚುಟುಕಾದ ಮೆಚ್ಚುಗೆ, ಅಂತೂ ಬಿಗ್ಬಾಸಿನ ಬಿಗುಮಾನವನ್ನ ಭೇದಿಸಿ ಹೊರಬಂತು! ನಾನೂ, ಚುಟುಕಾಗಿ, ''ಥ್ಯಾಂಕ್ಯೂ ಸರ್'' ಎಂದೆ.

ಏತನ್ಮಧ್ಯೆ, ಆಫೀಸಿನ ಮಿತ್ರರೊಬ್ಬರು, ''ಇಲ್ಲಿ ಕೂರ್ತಿದ್ರಲ್ಲ.. ಅವ್ರ ತಂಗೀನಾ ನೀವು?'' ಅಂತ ಛೇಡಿಸಿದ್ರೆ, ಮತ್ತೋರ್ವ ಗೆಳತಿ, ''ಸಂತೂರ್ ಮಮ್ಮಿ'' ಅಂತ ನಾಮಕರಣ ಮಾಡಿದಳು. ಸಂಬಂಧಿಯೊಬ್ಬಳು, ''ಈ ಗೆಟಪ್ಪಲ್ಲಿ ಹತ್ತು ವರ್ಷ ಚಿಕ್ಕವಳ ಹಾಗೆ ಕಾಣಿಸ್ತಿ'' ಅಂದ್ಲು! ಆಹಾ! ಅದೆಷ್ಟು ಪುಳಕಿತಳಾದೆ! ಪ್ರಫುಲ್ಲಿತಳಾದೆ!.. ಇನ್ನೂ ಏನೇನೋ ಆದೆ! ಅಂತೂ ಪಾರ್ಲರಿನ ಬ್ಯೂಟಿಗೆ ಗರಿಗರಿ ನೋಟೆಣಿಸಿಕೊಟ್ಟಿದ್ದು ಸಾರ್ಥಕವಾಯ್ತು ಅಂದ್ಕೊಂಡೆ.

ಒಮ್ಮೆ ಹೀಗಾಯ್ತು. ಆಫೀಸಿನಲ್ಲಿ ಸಹೋದ್ಯೋಗಿಯೊಬ್ಬರ ಜೊತೆಗಿನ ಮಾತುಕತೆ ನನ್ನ ಕತ್ತರಿಸಿದ ಜುಟ್ಟಿನ ಬಗ್ಗೆ ಹೊರಳಿತು. ''ನಾನು ಒಂದು ಹೊಸ ಥರ ಶರ್ಟ್ ತೊಗೋಬೇಕು ಅಂದ್ರೆ ಎಷ್ಟೆಲ್ಲ ಹಿಂಜರೀತೀನಿ. ನೀವು ನಿಮಗಿಷ್ಟವಾದದ್ದನ್ನ ಯಾವ ಹಿಂಜರಿಕೆಯೂ ಇಲ್ಲದೆ ಮಾಡಿ, ಖುಷಿಯಾಗಿದ್ದೀರಿ. ನಿಮ್ಮ ನಿಲುವನ್ನ ಮೆಚ್ಚಲೇಬೇಕು!'' ಅಂದ್ರು. ಆಪ್ತ

ಗೆಳತಿಯೊಬ್ಬಳು, ''ಹೊಸತನ್ನ ಪ್ರಯತ್ನಿಸಿದ್ದೀಯಲ್ಲ, ಅದ್ರ ಬಗ್ಗೆ ತುಂಬಾ ಸಂತೋಷ'' ಅಂತ ವಾಟ್ಸ್ಯಾಪಿಸಿದ್ದಳು. ಓದಿ ಖುಷಿಪಟ್ಟೆ

ಹಾಗಂತ ನನ್ನ 'ಹೊಸತನ'ದ ಬಗ್ಗೆ ಬರೀ ಮೆಚ್ಚುಗೆಗಳೇ ಕೇಳಿಬಂದ್ವು ಅಂತೇನಲ್ಲ. ಕೇವಲ ಮೆಚ್ಚುಗೆಗಳನ್ನೇ ನಾನು ನಿರೀಕ್ಷಿಸಿಯೂ ಇರಲಿಲ್ಲವೆನ್ನಿ. ಓರಕತ್ತಿ... ಅಲ್ಲಲ್ಲ... ಓರಗಿತ್ತಿಯರು ನನ್ನಲ್ಲಾದ ಈ ಸ್ಪಷ್ಟ ಬದಲಾವಣೆಯನ್ನ ಕಂಡೂ ಕಾಣದಂತಿದ್ರು. ಆದರೆ, ನಮ್ಮ ದೂರದ ಸಂಬಂಧಿಯಾದ ಎದುರು ಮನೆ ಪದ್ಮ, ಎರಡು ಮೂರು ಬಾರಿ ನನ್ನ ಕಂಡಾಗ, ''ಅಯ್ಯೋ! ಎಷ್ಟು ಚೆನ್ನಾಗಿತ್ತಲ್ರೀ ನಿಮ್ ಜಡೆ! ಥೋಟುದ್ದ ಆಗೋಯ್ತಲ್ರೀ'' ಅಂತ ಬೇಸರಪಟ್ಕೊಂಡ್ರು. ಆಗ ನಾನೇ, ''ಹೋಗ್ಲಿ ಬಿಡಿ, ಪದ್ಮ, ಬೇಜಾರು ಮಾಡ್ಕೊಬೇಡಿ'' ಅಂತ ಆಕೆಯನ್ನ ಖುಷಿಯಿಂದಲೇ ಸಮಾಧಾನಪಡಿಸಿದೆ. ಕಾರಣ, ಆಕೆಯ ಪ್ರತಿಕ್ರಿಯೆಯಲ್ಲಿದ್ದ ಪ್ರಾಮಾಣಿಕತೆ!

ಜುಟ್ಟು ಗಿಡ್ಡವಾಯ್ತು ಅಂತ ನಾನದಕ್ಕೆ ಯಾವುದಕ್ಕೂ ಕಮ್ಮಿ ಮಾಡಿಲ್ಲವೆನ್ನಿ. ವಾರವಾರವೂ ಅದೇ ಕೂದಲೆಣ್ಣೆ, ಶಾಂಪೂಗಳ ಆರೈಕೆ ಇದ್ದೇ ಇದೆ. ಜೊತೆಗೆ ಗಿಡ್ಡ ಪೋನಿ ಕಟ್ಟಿ ಆಗಾಗ ನಮ್ಮತ್ತೆ ಕೊಡುವ ಮಲ್ಲಿಗೆಯೋ, ಕನಕಾಂಬರ ತುಂಡಿನದ್ದೋ ಅಲಂಕಾರ ಬೇರೆ! ಮಲ್ಲಿಗೆ ಅಂದಾಗ ನೆನಪಾಗತ್ತೆ. ಮುಂಚೆಯೆಲ್ಲಾ ನಾನು ನನ್ನ ಮೊಳದುದ್ದ ಜಡೆ ಅಲ್ಲಾಡಿಸ್ಕೋತ ನಮ್ಮ ಗಾಂಧಿ ಬಜಾರಿನ ತುಂಬೆಲ್ಲಾ ಓಡಾಡೋವಾಗ, ಫುಟ್ಪಾತಿನಲ್ಲಿ ಮಲ್ಲಿಗೆ ಹೂ ಮಾರುವ ತಮಿಳು ಹೆಂಗಸ್ರು ನನ್ನ ಹಿಂದೆ ಬೀಳೋರು.... ''ಅಕ್ಕೋ... ಮಳ್ಳೆ ಪೂ ತಕ್ಕೋಕ್ಕಾ..... ಪತ್ತ್ ರುಬಾಯ್.... ತಕೋಕ್ಕಾ.....'' ಎಷ್ಟರ ಮಟ್ಟಿಗೆ ಅಂದ್ರೆ, ಎಲ್ಲಿ ಅನಾಮತ್ತು ನನ್ನ ಉದ್ದ ಜಡೆ ಹಿಡಿದೆಳೆದು, ಮೊಳದುದ್ದ ಮಲ್ಲಿಗೆ ಮುಡಿಸಿ, ನನ್ನಿಂದ ದುಡ್ಡು ಕಿತ್ಕೊಂಡುಬಿಡ್ತಾರೋ ಎನ್ನುವಷ್ಟು! ಸಧ್ಯ, ಈಗ ನನ್ನ ಗೇಣುದ್ದ ಕೂದಲನ್ನ ಹಾರಾಡಿಸ್ಕೋತಾ ಓಡಾಡ್ತಿದ್ರೆ, ''ಅಕ್ಕೋ.... ಪತ್ತ್ ರುಬಾಯ್.....'' ಅಂತಾರೆ ಹೊರತೂ, ನನ್ನ ಹಿಂದೆ ಅಂತೂ ಬೀಳಲ್ಲ.

ಇಷ್ಟೆಲ್ಲಾ ಆದ್ರೂ, ನನ್ನ ಅಂತರಂದೊಂದಾಸೆ ಮಾತ್ರ ಹಾಗೇ ಉಳ್ಕೊಂಡುಬಿಟ್ಟಿದೆ. ನನ್ನ ಸೊಂಪಾದ ಗಿಡ್ಡಕೂದಲನ್ನ ಹಾರಾಡಿಸ್ಕೋತಾ ಓಡಾಡ್ತಿದ್ರೆ, ಯಾರೊಬ್ಬ ಪಡ್ಡೆ ಹುಡುಗಾನಾದ್ರೂ ಸಿನಿಮಾ ಹಾಡೊಂದ ಗುನುಗಬಾರದೇ... ''ಓಪನ್ ಹೇರು ಬಿಟ್ಕೊಂಡು.. ಕೂದಲ್ ಹಾರಾಡಿಸ್ಕೊಂಡು.... ಏರಿಯಾದಾಗೆ ಓಡಾಡಾಬ್ಯಾಡಾ.... ಜೀವಾ ಝುಲ್ ಅಂತದೇ......'' ಆಶಾವಾದಿಯಾಗಿ ಕಾಯ್ತಾನೇ ಇದೀನಿ.........

●

## ಅವಳ ಪ್ರಶ್ನೆ

ಒಬ್ಬ ಮಹಿಳೆ ಜ್ಯೋತಿಷಿ ಬಳಿ ಹೋಗುತ್ತಾಳೆ.

"ಕ್ಷಮಿಸಿ ತಾಯಿ ನಿಮಗೆ ಈ ಅಶುಭ ಸುದ್ದಿ ಹೇಳಲೇ ಬೇಕು. ನೀವು ಸಧ್ಯದಲ್ಲೇ ವಿಧವೆ ಆಗುತ್ತೀರಿ. ನಿಮ್ಮ ಪತಿಗೆ ಘನಘೋರ ಸಾವು ಕಾದಿದೆ" ಎಂದ ಜ್ಯೋತಿಷಿ.

ಆ ಸುದ್ದಿಯನ್ನು ಅರಗಿಸಿಕೊಂಡ ಅವಳು ಮೌನವಾದಳು. ನಂತರ ಸಾವರಿಸಿಕೊಂಡು ಕೇಳಿದಳು: "ನಾನು ಖುಲಾಸೆ ಆಗುತ್ತೇನೆಯೆ?"

# ಬ್ರೇಕಿಂಗ್ ನ್ಯೂಸ್

**- ನಂನಾಗ್ರಾಜ್**

**ಈ**ಚೆಗೆಲ್ಲ ಟಿ.ವಿ. ಮಾಧ್ಯಮದವರು ಬಿತ್ತರಿಸುವ **ಬ್ರೇಕಿಂಗ್ ನ್ಯೂಸ್‌ಗಳು** ಅನಿರೀಕ್ಷಿತವಾದ ಬೆಳವಣಿಗೆಯ ಬಗ್ಗೆಯೋ ಅಥವಾ ಪ್ರಮುಖವಾದ ಬೆಳವಣಿಗೆಯ ಬಗ್ಗೆಯೋ ಆಗಿರಬೇಕೆಂದಿಲ್ಲ. ಎಷ್ಟರ ಮಟ್ಟಿಗೆ ಅಂದರೆ ತಲೆ ಒಡೆದರೂ ಬ್ರೇಕಿಂಗ್ ನ್ಯೂಸ್, ಈಡುಗಾಯಿ ಒಡೆದರೂ ಬ್ರೇಕಿಂಗ್ ನ್ಯೂಸ್. ಈ ವಿಷಯ ಹಾಗಿರಲಿ. ಬೇರೆ ತರಹದ ಹಲವು ಬ್ರೇಕಿಂಗ್ ನ್ಯೂಸ್‌ಗಳನ್ನು ಗಮನಿಸೋಣ.

ನನ್ನ ಬಾಲ್ಯದ ದಿನಗಳಲ್ಲಿ ನಮ್ಮನೆಯ ಹಜಾರದಲ್ಲೇ ಟೆನ್ನಿಸ್ ಬಾಲ್ ಕ್ರಿಕೆಟ್ ಆಡುವಾಗ ಗೋಡೆಯ ಮೇಲೆ ಎತ್ತರದಲ್ಲಿ ಸುತ್ತಲೂ ಹಾಕಿದ್ದ ಪಟದ ದೇವರುಗಳು ಔಟ್ ಆದಾಗ ಅದು **ಬ್ರೇಕಿಂಗ್ ನ್ಯೂಸ್** ಆಗುತ್ತಿತ್ತು ಮತ್ತು ''ಮತ್ತೇನಾದರೂ ಪಟ ಒಡೆದರೆ ನಿಮ್ಮ ಕೈ, ಕಾಲು ಮುರಿಯುತ್ತೇನೆ'' ಎಂಬ ಅಮ್ಮನ ಬೆದರಿಕೆಯೂ ಕೂಡ!

'ಅತ್ತೆ ಒಡೆದ ಪಾತ್ರೆಗೆ ಬೆಲೆ ಇಲ್ಲ ಅಥವಾ ಹಳೆಯದಾಗಿತ್ತು' ಎಂಬುದನ್ನು ನಾವೆಲ್ಲ ಕೇಳಿದ್ದೇವೆ. ಅದೇ ಸೊಸೆ ಒಡೆದಿದ್ದೇ ಆದರೆ ಅದು ಖಂಡಿತ ಬ್ರೇಕಿಂಗ್ ನ್ಯೂಸ್ ಆಗುತ್ತಿತ್ತು, ಮನೆಮಂದಿಗಷ್ಟೇ ಅಲ್ಲ, ಅಕ್ಕಪಕ್ಕದವರಿಗೂ ಕೂಡ!

ಇನ್ನು ಮನೆ ಕೆಲಸದವರು. ಅವರು ವಡ್ಡು ವಡ್ಡಾಗಿ ಡಸ್ಟ್ ಮಾಡುವಾಗ ನಮಗೆ ಪ್ರಿಯವಾದ ಹೂ ದಾನಿಗಳು ಒಡೆಯುವುದು ಅಪರೂಪವೇನೂ ಅಲ್ಲ. ಮನೆ ಕೆಲಸದವರು ಸಿಗುವುದು ಕಷ್ಟವಾದ ಈ ದಿನಗಳಲ್ಲಿ ಈ ಸನ್ನಿವೇಶ ಬಿಸಿ ತುಪ್ಪದ ತರಹ. ಬ್ರೇಕಿಂಗ್ ನ್ಯೂಸ್ ಗಂಟಲಲ್ಲೇ ಉಳಿದು ಬಿಡುತ್ತದೆ!

ಕಿರಿಮಗ ಕ್ಲಾಸ್‌ಗೆ ಚಕ್ಕರ್ ಹೊಡೆದು ಗೆಳೆಯರೊಡನೆ ಮೂಲೆ ಪೆಟ್ಟಿಗೆ ಅಂಗಡಿ ಹಿಂದೆ 'ದಂ' ಹೊಡೆಯುತ್ತಿರುವಾಗ ಕಾಣಿಸಿಕೊಂಡಾಗ, ಮಗಳು ಕಾಲೇಜ್ ಬಂಕ್ ಮಾಡಿ ಗೆಳತಿಯರೊಡನೆ ಮಾಲ್‌ನಲ್ಲಿ ಕಾಣಿಸಿಕೊಂಡಾಗ ಹಾಗೂ ಹಿರಿಮಗ ಪಬ್‌ನಲ್ಲಿ 'ಮಾಮೂಲಿ' ದೋಸ್ತ್ ಜೊತೆ ಸಿಕ್ಕಿ ಕೊಂಡಾಗ ಅವು ಬ್ರೇಕಿಂಗ್ ನ್ಯೂಸ್ ಅಲ್ಲವೇ?

ಹಿರಿಯ ನಾಗರಿಕರ ಗುಂಪು ಪಾರ್ಕ್ ಬೆಂಚಿನ ಮೇಲೆ ಲೋಕಾಭಿರಾಮವಾಗಿ ಹರಟೆ ಕೊಚ್ಚುತ್ತಿದ್ದಾಗ ಅದೇ ಗುಂಪಿನ ಮತ್ತೊಬ್ಬ ಸದಸ್ಯ ಏದುಸಿರು ಬಿಡುತ್ತಾ ಬಂದು 'ಸುಬ್ಬ ಹೋಗ್ಬಿಟ್ಟನಂತೇ......' ಅಂದಾಗ, ಪದ್ದಮ್ಮ ಪಾರ್ವತಮ್ಮನ ಕಿವಿಯಲ್ಲಿ 'ಕಮಲಮ್ಮ ಕೆಂಪಿನ ಬಳೆ ಮಾಡಿಸ್ಕೊಂಡ್ಳಂತೇ ರೀ......' ಅಂತ ಪಿಸುಗುಟ್ಟಿದಾಗ ಅವುಗಳು ಬ್ರೇಕಿಂಗ್ ನ್ಯೂಸ್ ಅಲ್ಲವೇ?

ನಾಲ್ಕು ವರ್ಷದ ಹಿಂದೆ ಮದುವೆ ಆಗಿದ್ದ ಒಬ್ಬಳೇ ಮುದ್ದು ಮಗಳು ಅನಿರೀಕ್ಷಿತವಾಗಿ ಆವೇಳೆಯಲ್ಲಿ ತವರಿಗೆ ಬಂದಾಗ ಅನುಭವಿ ಅಮ್ಮ 'ಏನೇ.... ಸಮಾಚಾರಾನಾ?' ಎಂದು ಕೇಳಿದಾಗ ಮಗಳು ನಾಚಿ ನೀರಾಗಿ ಕೆನ್ನೆಯಲ್ಲಿ ಕೆಂಪು ಮೂಡಿಸಿಕೊಂಡು ಬೆರಳಲ್ಲಿ ಸೀರೆಯ

ಸೆರಗಿನ ಅಂಚನ್ನು ಸುತ್ತಿಕೊಳ್ಳುತ್ತಾ ಮೌನವಾಗಿಯೇ ಮೆಸೇಜನ್ನು ಮುಟ್ಟಿಸುವುದು ಹೃದಯಸ್ಪರ್ಶಿ ಬ್ರೇಕಿಂಗ್ ನ್ಯೂಸ್ ಅಲ್ಲವೇ?

ಮುಂದಿನ ವಾರ ಬರಬೇಕಾದ ಗ್ಯಾಸ್ ಮರುದಿನವೇ ಬಂದಾಗ, ಇಡೀ ದಿನ ಕರೆಂಟ್ ಹೋಗದಿದ್ದಾಗ, ವಾರದಲ್ಲಿ ಮೂರು ದಿನ ನೀರು ಎಡಬಿಡದೇ ಬಂದಾಗ, ರಾಜಕಾರಿಣಿಗಳು ಸಮಾರಂಭಕ್ಕೆ ಸಮಯಕ್ಕೆ ಸರಿಯಾಗಿ ಬಂದಾಗ, ನಿರಂತರವಾಗಿ ಜೀವನಾಂಶದ ಸುತ್ತ (35/100) ಗಿರಿಕೆ ಹೊಡೆಯುತ್ತಿದ್ದ ವಿದ್ಯಾರ್ಥಿ 60 ಅಂಕ ಗಳಿಸಿದಾಗ, ಫಸ್ಟ್ ಪಾಸ್ ಆದಾಗ, ನಾವು ಕೇಳಿದ ಜಾಗಕ್ಕೆ ಬರಲು ಒಪ್ಪಿದ್ದೇ ಅಲ್ಲದೆ 'ಮೇಲಷ್ಟು' ಕೇಳದೇ ಇದ್ದ ಅಪರೂಪದ ಆಟೋವಾಲ ಸಿಕ್ಕಿದಾಗ..... ಇವೆಲ್ಲವೂ ಬ್ರೇಕಿಂಗ್ ನ್ಯೂಸ್‌ಗಳೇ ಅಲ್ಲವೇ?

ಪಟ್ಟಿ ಮಾಡುತ್ತಾ ಹೋದರೆ ಒಂದು ಗ್ರಂಥವೇ ಆದೀತು. ಸಧ್ಯಕ್ಕೆ ಇದಕ್ಕೆ ಬ್ರೇಕ್ ಹಾಕುತ್ತೇನೆಂದರೆ ಅದೂ 'ಬ್ರೇಕಿಂಗ್ ನ್ಯೂಸ್' ಆಗುತ್ತಾ!

●

## ನೋವಿರುವುದೇ ನಿಮಗಾಗಿ

(ಮಯೂರ ಚಿತ್ರದ ನಾವಿರುವುದೇ ನಿಮಗಾಗಿ ಧಾಟಿ)

ನೋವಿರುವುದೇ ನಿಮಗಾಗಿ
ಮೂವ್ ಇರುವುದೇ ಅದಕಾಗಿ
ಚಿಂತೆಯು ಏಕೆ, ಭಯವದು ಏಕೆ
ಹಚ್ಚಿರಿ ಮೂವನು ಹಾಯಾಗಿ
ಮುಚ್ಚಿರಿ ಕಣ್ಣನು ಹಿತವಾಗಿ

ಕಾಲಿನ ನೋವೇ ಇರಲಿ
ಕೈಗಳ ನೋವೇ ಇರಲಿ
ಮೂವಿನ ಆಣೆ ನಿಮ್ಮನು ಕಾಡುವ
ನೋವುಗಳೊಂದನ್ನು ಉಳಿಸಲ್ಲ

ಮಂಡಿ ನೋವು ಸೊಂಟ ನೋವು
ಸೋದರರಂತೆ ಅವುಗಳೆಲ್ಲಾ
ಹಚ್ಚುತ ಮೂವು ನೀವುತ ನೀವು
ತೊಲಗಿಸಿ ನೋವನು ಹಿತವಾಗಿ

ಸಾವಿರ ಜನುಮದ ಪಾಪವೋ ಏನೋ
ನಮಗೀ ನೋವುಗಳು ಕಾಡುತಿವೇ
ವೈದ್ಯರ ವರವೋ, ನಿಮ್ಮಯ ದೆಸೆಯೋ
ಮೂವ್ ಮುಲಾಮು ನಮ್ ಜೊತೆಗಿದೆ
ನೋವನು ಬಡಿದೋಡಿಸುವಾ
ಈ ನೋವಿಗೆ ಬಿಡುಗಡೆ ತರುವಾ
ದೇಹಕೆ ನೆಮ್ಮದಿ ಸುಖವನು ತರಲು
ಮೂವನೇ ಬಳಸುವಾ

*– ಜಿ.ವಿ. ನಿರ್ಮಲ*

# ಭುಕ್ಕುಂಡ ವಿಜಯ

- ಗುಂಡಯ್ಯ

1 ರಾಜನಿಗೇಕೋ ಕೋಪ ಬಂದಿತು, ವಿಕಟಕವಿಯ ಕಂಡು.
ಕರೆದು ಹೇಳಿದನು ಸೈನಿಕರಿಬ್ಬರ: ''ಇವನ ಕರೆದುಕೊಂಡು
ಊರ ಹೊರಗಡೆ-ನದಿಯ ಬಲಗಡೆ
ದುರ್ಗಿಯ ಗುಡಿಯಿರುವಲ್ಲಿ-ಇವನ ಕಡಿದು ಕೊಲ್ಲಿ''

2 ರಾಜನಾಜ್ಞೆಯ ಶಿರಸಾವಹಿಸಿ ವಿಕಟಕವಿಯ ಹಿಡಿದು
ಸೈನಿಕರೊಯ್ಯಲು ಬಂದರಾ ಕವಿ ಕಣ್ಣ ಹನಿಯ ಮಿಡಿದು
''ರಾಜನ ಮುಖವ-ನೋಡುವ ಸುಖವ
ಈ ನಗರದ ಪ್ರಜೆಯೆಲ್ಲಾ-ನೀಗಿಕೊಂಡರಲ್ಲಾ!''

3 ಎನಲು, ನಕ್ಕು ದೊರೆ, ಕೇಳಿದವನ: ''ಏನು ಹುಚ್ಚುಮಾತು!
ನಿನ್ನ ಕೊಂದರೀ ಜನಕೆ ನನ್ನ ಮುಖ ಹೇಗೆ ತಪ್ಪಿಹೋಯ್ತು?
ಹೇಳು ವಿಕಟಕವಿ-ನಿನ್ನ ಮಾತು ಸವಿ
ಎನಿಸಿತೆ, ನಿನ್ನನು ಬಿಡಿಸಿ - ಕಳಿಸುವೆ ಹಣ ಕೊಡಿಸಿ.''

4 ''ಕೇಳು, ಭೂಪ, ನೀ ನನ್ನ ಕೊಂದ ಮರುಗಳಿಗೆಯಲ್ಲೆ ನುಗ್ಗಿ
ಯಮನ ಭಟರು ನಿನ್ನನ್ನೆ ಸೆಳೆವರು! ಯಮನಿಗಿಂದು ಸುಗ್ಗಿ!
ನಿನಗೆ ಮುಂದೆ ನಾ-ನನಗೆ ಹಿಂದೆ ನೀ!
ನಾಮಕರಣ ನಮಗಿಂತು-ಮೃತ್ಯುವಾಗಿ ಬಂತು!''

5 ''ಕೇಳು ಭೂಪ, ತಾನೊಮ್ಮೆ ಕೋರಿದನು ಯಮ ಭಭಾವಳಿಯನು
ಅದರ ಫಲವ ನಾ ಏನ ಹೇಳಲಿ-ನಡೆದ ಹಾವಳಿಯನು!
ಭಕ್ಕೆ ಒಬ್ಬ ಬಲಿ-ಭಾಗೆ ಒಬ್ಬ ಬಲಿ!
ಮುಂದಿನೆರಡಕೊಂದೊಂದ-ಯಮನ ದೂತ ಕೊಂದ!''

6 ''ಕೇಳು ಭೂಪ, ಹಿಂದೊಬ್ಬನಿದ್ದ ಕವಿ - ಅವನ ಹೆಸರು ಭಟ್ಟ
ಸಂಧಿವಿಗ್ರಹ ಸಮಾಸಕಾರ್ಯಗಳಲವನೆ ದೊಡ್ಡ ಜೆಟ್ಟಿ
ಅವನ ಹಿಡಿದು ಯಮ-ದೂತರಿವನ ಸಮ
ಭಕ್ಕೆ ಸರಿಯ ಭಾ ಎಲ್ಲಿ? - ಎಂದು ಅಲ್ಲಿ ಇಲ್ಲಿ-''

7 ''ಹುಡುಕಿ ಹುಡುಕಿ, ಕೇಳ್ ಭೂಪ, ಹಿಡಿದರಿನ್ನೊಬ್ಬ ದೊಡ್ಡ ಕವಿಯ
ಪಾರ್ಥಕಿರಾತರ ಕಾಳಗವನು ಕಥೆ ಹೇಳಿದ ಭಾರವಿಯ!
ಹಿಡಿದ ದೂತರು–ಹಿಗ್ಗಿ ಹೋದರು!
ಮುಂದೆ ಎಲ್ಲಿ 'ಭಿ'? ಎಂದು–ಕೇಳಿಕೊಳ್ಳುವಂದು–''

8 ''ಕೇಳು ಭೂಪ, ಮುಂದೊಬ್ಬ ಭಿಕ್ಷು ತಾ ಬೋಳುಮಂಡೆ ಬಿಟ್ಟು
ಕೈಯೊಳೊಂದು ಕಪ್ಪರವ ಹಿಡಿದು, ಹಳೆಹರಕು ಬಟ್ಟೆಯುಟ್ಟು
ಹೋಗುತ್ತೆ ಮೂಢ–ಬಿದ್ದವನ ಕೂಡ!
ಭಿಕ್ಷುಗಂದು ಸಂನ್ಯಾಸ–ಆಯ್ತು ಯಮನ ಪಾಶ!''

9 ''ಬಳಿಕ, ಭೂಪ ಕೇಳ್. 'ಮೂರು ಸಿಕ್ಕಿತು. ನಾಲ್ಕನೆಯದು ಸಿದ್ಧ
ಎಂದು ಅಸಮಬಲ ಭೀಮಸೇನನ ಜೊತೆಗೆ ಮಲ್ಲಯುದ್ಧ
ನಡಸಿ ಯಮನ ಭಟ – ರೆಂದರಿ'ವನ ಘಟ
ಆಯ್ತು ಭೀಗೆ ಬಲು ಭರತಿ!'' – ಈಗ ನನ್ನ ಸರತಿ!

10 ''ಹೀಗೆ, ಭೂಪ, ಯಮ ಆಯ್ದು ಆಯ್ದು ಆ ಮೊದಲ ನಾಲ್ಕನುಂಡ
ಈಗ 'ಐದು' ಎಂದಿತ್ತ ತಿರುಗಿದರೆ, ಸಿಕ್ಕಿದ ಭುಕ್ಕುಂಡ.
ನಿನಗೆ ಮುಂದೆ ನಾ–ನನಗೆ ಹಿಂದೆ ನೀ!
ನಾಮಕರಣ ನಮಗಿಂತು – ಮೃತ್ಯುವಾಗಿ ಬಂತು!''

11 ''ಎಂದು ಕರೆದಳೋ ನನ್ನ ತಾಯಿ ನನ್ನನ್ನ 'ಮಗನೆ ಭುಕ್ಕುಂಡ!'
ಅಂದೇ ನನ್ನೊಡನೆ ಭೂಪ ನಿನ್ನನೂ ಕಾಲ ಕೂಡಿಸಿಯೆ ಉಂಡ!
ಮುಂದೆ ಕೊಂಬು ಭು–ಹಿಂದೆ ಬಾಲ ಭೂ!
ನಾಮಕರಣ ನಮಗಿಂತು – ಮೃತ್ಯುವಾಗಿ ಬಂತು!''

12 ರಾಜ ನೋಡಿದ: ''ಏನು ನಿರ್ಭಯ! ಎಂಥ ಚತುರ ವಿಕಟ!
ಇಂಥ ವಿಕಟನ ವೃಥಾ ಕೋಪಿಸಿ ಕೊಲ್ಲಿಸುವುದೆ! ಅಕಟ!
ಎಂದರಸ ನಕ್ಕು – ನಕ್ಕುಸಿರು ಸಿಕ್ಕು
ಸನ್ಮಾನಿಸಿದನು ತುಂಬ – ವಿಕಟನ ಮನೆತುಂಬ!''

●

# ಹೀಗೊಂದು ಮದುವೆ

**- ವೈ. ಸತ್ಯನಾರಾಯಣ ಕಾಸರಗೋಡು**

**ಸು**ಮಾರು ಅರವತ್ತೈದು ವರ್ಷಗಳ ಹಿಂದಿನ ಕಥೆಯಿದು. ಆಗ ಮದುವೆಗಳೆಲ್ಲ ಹೆಚ್ಚಾಗಿ ವಧುವಿನ ಮನೆಯಲ್ಲಿ ಅಥವಾ ಸಮೀಪದ ದೇವಸ್ಥಾನಗಳಲ್ಲಿ ಜರಗುತ್ತಿದ್ದವು. ಮಕ್ಕಳಿಗೆಲ್ಲ ಮದುವೆ ಎಂದರೆ ಸಂಭ್ರಮ. ಬಂಧು ಮಿತ್ರಾದಿಗಳ ಭೇಟಿ. ಅವರೊಡನೆ ಹರಟೆ ಹೊಡೆಯುವುದು. ಓರಗೆಯವರೊಡನೆ ಆಟ, ಸಿಹಿಯೂಟ ಇವೆಲ್ಲ ಅವರಿಗೆ ವಿಶೇಷ ಆಕರ್ಷಣೆಗಳಾಗಿದ್ದುವು. ಪ್ರತಿಯೊಂದು ಮದುವೆಗೂ ಹೋಗಿ ಬಂದ ನಂತರ ನಮ್ಮ ಆಟದ ಮದುವೆ ನಡೆಯುತ್ತಿತ್ತು.

ಸಾಮಾನ್ಯವಾಗಿ ಏಪ್ರಿಲ್, ಮೇ ತಿಂಗಳುಗಳಲ್ಲಿ ಶಾಲೆಗಳಿಗೆ ಬೇಸಗೆ ರಜೆ ಇರುತ್ತದೆ. ಈ ಅವಧಿಯಲ್ಲೇ ಮದುವೆ, ಉಪನಯನ, ನೂತನ ಗೃಹಪ್ರವೇಶ ಇತ್ಯಾದಿ ಸಮಾರಂಭಗಳು ಹೆಚ್ಚಾಗಿ ಜರಗುತ್ತವೆ. ನಮ್ಮ ಸಂಬಂಧಿಕರ ಮನೆಯಲ್ಲಿ ಒಂದು ಮದುವೆ ನಡೆದಿತ್ತು. ಮದುವೆಯ ಗೌಜು ಮುಗಿದ ಮೇಲೆ ಒಂದು ದಿನ ಓರಗೆಯವರಾದ ನಾವೆಲ್ಲ ದೇವಸ್ಥಾನದ ಹಿಂದಿರುವ ದೊಡ್ಡ ಮಾವಿನ ಮರದ ನೆರಳಿನಲ್ಲಿ ಸೇರಿದೆವು. ಅಂದು ಮದುವೆ ಆಟ ಆಡುವುದೆಂದು ಮೊದಲೇ ತೀರ್ಮಾನಿಸಿದ್ದೆವು.

ಪಾತ್ರಗಳನ್ನು ಹಂಚುವುದು ಮೊದಲ ಕೆಲಸವಾಗಿತ್ತು. ಆಗಲೇ ಜಗಳವೂ ಆರಂಭವಾಗುತ್ತಿತ್ತು. ಅಂದೂ ಕೂಡಾ ಹಾಗೆಯೇ ಆಯಿತು.

ಕ್ಷೌರಿಕ ಸೋಮಪ್ಪನ ಮಗ ಶೇಖರ 'ನಾನೇ ಮದುಮಗನಾಗುತ್ತೇನೆ' ಎಂದು ಮುಂದೆ ಬಂದ. ನಾನೂ ಸೇರಿ ನಾಲ್ಕು ಮಕ್ಕಳು ಇದಕ್ಕೆ ವಿರೋಧ ವ್ಯಕ್ತಪಡಿಸಿದೆವು. ಮೊದಲಿನ ಮೂರು ಆಟಗಳಲ್ಲಿ ನಾನೇ ಮದುಮಗನ ಪಾತ್ರವಹಿಸಿದ್ದೆ. ಆಗ ನನಗೆ ಮೊದಲ ಅನುಭವ ಉಂಟು ಎಂದಂತಾಯಿತು! ಹಾಗಾಗಿ ಆ ಪಾತ್ರದ ಮೇಲೆ ನನಗೆ ಕಣ್ಣಿತ್ತು. ಉಳಿದ ಮೂವರನ್ನು ಪೆಪ್ಪರ್‌ಮಿಂಟ್ ಕೊಟ್ಟು ನನ್ನ ಕಡೆ ಒಲಿಸಿಕೊಂಡಿದ್ದೆ. ಇದನ್ನು ನೀವು ಆಮಿಷ, ಭ್ರಷ್ಟಚಾರ, ಲಂಚ ಎಂದೆಲ್ಲ ಕರೆಯಬೇಡಿ. ಮದುಮಗನ ಪಾತ್ರ ಅಪಾತ್ರರಿಗೆ ಸಿಗಬಾರದೆಂಬುದೇ ನನ್ನ ಧ್ಯೇಯವಾಗಿತ್ತು! ಆದರೆ ಶೇಖರ ಸ್ಪರ್ಧೆಯಿಂದ ಹಿಂದೆ ಸರಿಯಲು ಒಪ್ಪಲೇ ಇಲ್ಲ. ಮಾತ್ರವಲ್ಲ ಆ ಪಾತ್ರ ಸಿಗದಿದ್ದರೆ ಮದುಮಗಳನ್ನು ಅಪಹರಿಸಿಕೊಂಡು ಹೋಗುವುದಾಗಿ ಬೆದರಿಕೆ ಹಾಕಿದ. ಜಾತ್ರೆಯ ದಿನ ನೋಡಿದ ಒಂದು ನಾಟಕ ಅವನ ಮೇಲೆ ಪ್ರಭಾವ ಬೀರಿತ್ತು! ಇದಕ್ಕೆ ನಾವು ಒಂದು ಪ್ರತಿ ತಂತ್ರ ರೂಪಿಸಿದೆವು. ಅಗಸ ಕುಞ್ಞಣ್ಣನ ಮಗಳು ಸೀತುವನ್ನು ಮದುಮಗಳಾಗುವಂತೆ ಒತ್ತಾಯ ಮಾಡಿದೆವು. ಮನಸ್ಸಿಲ್ಲದಿದ್ದರೂ ಅವಳು ಒಪ್ಪಿದಳು. ಆದರೆ ಶೇಖರ ಇದನ್ನು ತೀವ್ರವಾಗಿ ವಿರೋಧಿಸಿದ. ಕಾರಣ ಆ ಹುಡುಗಿ ಕಪ್ಪಾಗಿದ್ದಳು. ಶೇಖರ, ನೇಕಾರ ಪರಮಣ್ಣನ ಮಗಳು ಸುಗಂಧಿಯೇ ಮದುಮಗಳಾಗಬೇಕೆಂದು ಹಟ ಮಾಡಿದ. ಆ ಹುಡುಗಿ ಬಿಳಿಯಾಗಿದ್ದಳು. ಆದರೆ ಶೇಖರನ ಮದುಮಗಳಾಗಲು ಸುಗಂಧಿ ಸುತರಾಂ ಒಪ್ಪಲಿಲ್ಲ. ಯಾಕೆಂದರೆ ಅವನು ಸ್ವತಃ ಕರಿಯನಾಗಿದ್ದ! ಆದ್ದರಿಂದ ಮದುಮಗಳಾಗುವ ಭಾಗ್ಯ ಸೀತುವಿಗೇ ಒಲಿಯಿತು. ಸಿಡಿಮಿಡಿಗೊಂಡ ಶೇಖರ

ಸ್ಪರ್ಧೆಯಿಂದ ಹಿಂದೆ ಸರಿದ. ಪಾತ್ರ ತಿಮ್ಮಣ್ಣನ ಮಗ ಶೀನನನ್ನು ಮದುಮಗನಾಗಲು ಒಪ್ಪಿಸಿದೆವು. ಪ್ರಧಾನ ಪಾತ್ರಗಳ ಹಂಚಿಕೆ ಮುಗಿದ ನಂತರ ಕೆಲಸಗಳನ್ನು ಹಂಚಿಕೊಂಡೆವು. ವಾದ್ಯದ ಹೊಣೆಯನ್ನು ಕಿಟ್ಟಣಿಗೆ ವಹಿಸಲಾಯಿತು. ಹಾರ ಮತ್ತು ತಾಳಿ (ಮಂಗಳಸೂತ್ರ) ತರಲು ಶೇಖರ ಒಪ್ಪಿಕೊಂಡ. ಪುರೋಹಿತರನ್ನು ತರುವ ಕೆಲಸವನ್ನು ನಾನು ಒಪ್ಪಿಕೊಂಡೆ. ಊಟದ ವ್ಯವಸ್ಥೆಯನ್ನು ಅಡುಗೆ ಭಟ್ಟರ ಮಗ ಶಂಕರನಿಗೆ ಒಪ್ಪಿಸಲಾಯಿತು.

ಆಟದ ಮೊದಲು ವರ ತನ್ನ ಹೆತ್ತವರೊಂದಿಗೆ ಹುಡುಗಿಯನ್ನು ನೋಡಲು ಹೋಗುವ ಕಾರ್ಯಕ್ರಮವಿತ್ತು. ನೆರೆಮನೆಯ ರಾಮಣ್ಣ ಕುಟುಂಬ ಸಮೇತ ಸಂಬಂಧಿಕರ ಮದುವೆಗೆ ಹೋಗಿದ್ದು, ಮನೆಯಲ್ಲಿ ಯಾರೂ ಇರಲಿಲ್ಲ. ಮಾತ್ರವಲ್ಲ ಆ ಮನೆಗೆ ಬಾಗಿಲೂ ಇರಲಿಲ್ಲ. ಆದ್ದರಿಂದ ಅಲ್ಲೇ ಹುಡುಗಿಯನ್ನು ನೋಡುವ ಕಾರ್ಯಕ್ರಮ ಇಟ್ಟುಕೊಂಡೆವು. ಶಿವಪ್ಪ ಮತ್ತು ಮಾಧವಿ ಮದುಮಗಳ ಅಪ್ಪ ಮತ್ತು ಅಮ್ಮನ ಪಾತ್ರ ವಹಿಸಿದ್ದರು.

''ಮದುಮಗಳು ತಲೆತಗ್ಗಿಸಿ ಕುಳಿತುಕೊಳ್ಳಬೇಕು'' ವರನ ಅಪ್ಪ ಹೇಳಿದಾಗ ಸೀತು ತಲೆತಗ್ಗಿಸಿ ಮುದುಡಿ ಕುಳಿತುಕೊಂಡಳು.

''ನಮಗೆ ಕುಳಿತುಕೊಳ್ಳಲು ಆಸನ ಎಲ್ಲಿ?'' ವರನ ತಾಯಿ ಕೇಳಿದಾಗ ಶಿವಪ್ಪ ಧನಿಗಳ ತೋಟಕ್ಕೆ ಓಡಿ ಹೋಗಿ ಎರಡು ಕಂಗಿನ ಹಾಳೆಗಳನ್ನು ತಂದಿಟ್ಟ.

''ಬಂದವರಿಗೆಲ್ಲ ಉಪಾಹಾರ ಕೊಡಿ'' ವರನ ಕಡೆಯವರೊಬ್ಬರು ಗಟ್ಟಿಯಾಗಿ ಕೂಗಿ ಹೇಳಿದರು. ಶಿವಪ್ಪ ಪುನಃ ಹೊರಗೆ ಓಡಿ ಮರದಿಂದ ಬಿದ್ದಿದ್ದ ಗೇರು ಹಣ್ಣುಗಳನ್ನು ತಂದು ಎಲ್ಲರಿಗೂ ಒಂದೊಂದು ಹಣ್ಣುಕೊಟ್ಟ.

''ನನಗೆ ಕೊಡಲಿಲ್ಲ'' ಸೀತು ಹೇಳಿದಾಗ ವರನ ಅಪ್ಪ ಗದರಿದರು. ''ಸುಮ್ಮನೆ ತಲೆತಗ್ಗಿಸಿ ಕುಳಿತುಕೊ. ಮಾತನಾಡಬಾರದು. ನಾವೆಲ್ಲ ಹೋದ ನಂತರ ತಿನ್ನುವಿಯಂತೆ.'' ಸೀತು ಸಿಟ್ಟಿನಿಂದ ತಲೆತಗ್ಗಿಸಿ ಕುಳಿತಳು.

ಮದುವೆಯ ದಿಬ್ಬಣ ಹೊರಟಿತು. ಮುಂದೆ ವಾದ್ಯದ ತಂಡ. ಅದರಲ್ಲಿ ಕಿಟ್ಟ ಮತ್ತು ಮೂವರು ಚಿಕ್ಕ ಮಕ್ಕಳಿದ್ದರು. ಅವನು ಕೈಯಲ್ಲಿ ಮಕ್ಕಳಿಗೆ ಕಾಣುವಂತೆ ಪೆಪ್ಪರ್‌ಮಿಂಟನ್ನು ಹಿಡಿದುಕೊಂಡಿದ್ದ. ಅದನ್ನು ನೋಡಿದ ಮಕ್ಕಳು ಅದನ್ನು ಕೊಡುವಂತೆ ಕೂಗುತ್ತಿದ್ದರು. ಇದೇ ವಾದ್ಯ! ವಾದ್ಯ ನಿಲ್ಲಿಸಬೇಕೆಂದಾಗ ಅವರಿಗೆ ಒಂದೊಂದು ಪೆಪ್ಪರ್‌ಮಿಂಟ್ ಕೊಡುತ್ತಿದ್ದ. ಇನ್ನೊಬ್ಬ ದೊಡ್ಡ ಹುಡುಗ ಆಲ್ಯೂಮಿನಿಯಂ ತಟ್ಟೆಯೊಂದಕ್ಕೆ ಕೋಲಿನಿಂದ ಬಾರಿಸುತ್ತಾ ಇದ್ದ. ಇದು ಇನ್ನೊಂದು ವಾದ್ಯ. ಇನ್ನೊಬ್ಬ ಹುಡುಗ ಬಾಯಲ್ಲೇ ಠೋಠೋ ಎಂದು ಗರ್ನಾಲ್ ಸಿಡಿಸುತ್ತಿದ್ದ!.

ಮಾವಿನ ಮರದ ಅಡಿಯಲ್ಲೆ ನಾಲ್ಕು ತೆಂಗಿನ ಓಲೆಗಳನ್ನು ತಂದು ಮರದ ಕೊಂಬೆಗಳಿಗೆ ಕಟ್ಟಿ ಮದುವೆ ಚಪ್ಪರ ತಯಾರು ಮಾಡಲಾಗಿತ್ತು. ವಧೂವರರಿಗೆ ಕುಳಿತುಕೊಳ್ಳಲು ಕಂಗಿನ ಹಾಳೆಗಳನ್ನು ಇರಿಸಿದ್ದರು. ಪುರೋಹಿತರು ಮರಗಳ ಅಡಿಯಲ್ಲಿ ಬಿದ್ದಿದ್ದ ತರಗೆಲೆಗಳನ್ನು ರಾಶಿ ಹಾಕಿ ಬೆಂಕಿಕೊಟ್ಟು ಹೋಮ ಮಾಡಿದರು. ಒಂದರಿಂದ ನಾಲ್ಕರವರೆಗಿನ ಮಗ್ಗಿಯೇ ಮಂತ್ರವಾಯಿತು. ಶೇಖರ ಹಾರಗಳನ್ನು ತಂದಿದ್ದ. ವಾದ್ಯ ಮೊಳಗಿತು. ವಧೂವರರು ಹಾರಾರ್ಪಣೆ ಮಾಡಿದರು. ವರ ವಧುವಿನ ಕೊರಳಿಗೆ ತಾಳಿ ಬಿಗಿದ. ಅಂದಿನ ತೂತಿರುವ

ಕಾಲಾಣೆ (ಮುಕ್ಕಾಲು) ನಾಣ್ಯವನ್ನು ಬಾಳೆಯ ಹಗ್ಗಕ್ಕೆ ಪೋಣಿಸಿ ಶೇಖರ ತಾಳಿ ತಯಾರಿಸಿದ್ದ. ಎಲ್ಲರೂ ನೋಡುತ್ತಿದ್ದಂತೆಯೇ ವಧೂವರರು ತಮ್ಮ ಕುತ್ತಿಗೆ ಮತ್ತು ಕೈಗಳನ್ನು ಜೋರಾಗಿ ತುರಿಸಲಾರಂಭಿಸಿದರು. ಇದನ್ನು ನೋಡಿ ಎಲ್ಲರೂ ನಗಲಾರಂಭಿಸಿದರು. ಆದರೆ ಅವರಿಬ್ಬರಿಗೆ ಅಳು ಬರುವಂತಾಗಿತ್ತು. ಶೇಖರ ಸೇಡು ತೀರಿಸಿದ್ದ! ಹಾರಗಳ ಎಡೆಯಲ್ಲಿ ಹೂಗಳ ಮಧ್ಯದಲ್ಲಿ ತುರುಚೇ ಗಿಡದ ಎಲೆಗಳನ್ನು ಪೋಣಿಸಿದ್ದ. ತುರಿಕೆ ಸಹಿಸಲಸಾಧ್ಯವಾದಾಗ ಇಬ್ಬರೂ ಹಾರವನ್ನು ತೆಗೆದು ದೂರಕ್ಕೆ ಎಸೆದರು.

ಕೊನೆಯ ಕಾರ್ಯಕ್ರಮವಾದ ಊಟದ ತಯಾರಿ ನಡೆದಿತ್ತು. ಎಲ್ಲರೂ ಮಾವಿನ ಮರದ ಸುತ್ತ ಕುಳಿತರು. ಶಂಕರ ಎಲ್ಲರ ಎದುರು ಒಂದೊಂದು ಉಪ್ಪಳಿಗೆಯ ಎಲೆಯನ್ನು ಹಾಕಿದ. ಆ ನಂತರ ಮಾವಿನ ಹಣ್ಣು, ಗೇರುಹಣ್ಣು, ಪಪ್ಪಾಯಿ ಹಣ್ಣುಗಳ ಹೋಳುಗಳನ್ನು ಬಡಿಸಿದ. ಅನಂತರ ಚಕ್ಕುಲಿ, ಸುಕ್ಕುರುಂಡೆಗಳನ್ನು ಬಡಿಸಿದ. ಹಿಂದಿನ ದಿನ ಅಡುಗೆಗೆ ಹೋಗಿದ್ದ ಅವನ ಅಪ್ಪ ಮನೆಗೆ ತಂದಿದ್ದ ತಿಂಡಿಗಳಲ್ಲಿ ಕೆಲವನ್ನು ಅಮ್ಮನಲ್ಲಿ ಕೇಳಿ ತಂದಿದ್ದ. ಗೆರಟೆಗಳಲ್ಲಿ ಕುಡಿಯಲು ನೀರು ವಿತರಿಸಲಾಯಿತು. ಊಟ ಮುಗಿಯುತ್ತಿದ್ದಂತೆ ಬಟ್ಟೆ ಒಗೆಯಲು ಆ ದಾರಿಯಾಗಿ ಹೊಳೆಯ ಕಡೆಗೆ ಹೋಗುತ್ತಿದ್ದ ಸೀತುವಿನ ತಂದೆ ಕುಞ್ಞಣ್ಣ ಮಕ್ಕಳ ಗಲಾಟೆ ಕೇಳಿ ಅತ್ತ ತಿರುಗಿದ. ಇದನ್ನು ನೋಡಿದ ಮದುಮಗ ಮತ್ತು ಮದುಮಗಳು ಹೆದರಿ ಎಂಜಲು ಕೈಯನ್ನು ತೊಳೆಯದೆ ವಿರುದ್ಧ ದಿಕ್ಕುಗಳಿಗೆ ಓಡಿದರು. ನಾವೂ ದಿಕ್ಕಪಾಲಾಗಿ ಓಡಿ ಮರೆಯಾದವು.

ಮದುವೆ ಆದ ಮೇಲೆ ಮೊದಲ ರಾತ್ರಿ ನನ್ನ 'ಬಾಲ್ಯ ವಿವಾಹದ ಕುರಿತು ಹೆಂಡತಿಗೆ ಹೇಳಿದೆ. ಆಗ ಅವಳು ಮುಗುಳು ನಗುತ್ತಾ ಕೇಳಿದಳು' ಹಾಗಾದರೆ ಈಗಿನದ್ದು ಎಷ್ಟನೇ ಮದುವೆ? ನಾನು ಎಷ್ಟನೆಯ ವಧು?

ವರ್ಷಗಳ ಹಿಂದೆ ಮಿತ್ರರೊಬ್ಬರ ಮಗಳ ಮದುವೆಗೆ ಹೊರಟಿದ್ದೆ. ರೈಲಿನ ಆಗಮನವನ್ನು ನಿರೀಕ್ಷಿಸುತ್ತಾ ನಿಲ್ದಾಣದಲ್ಲಿ ನಿಂತಿದ್ದೆ. ಆಗ ತಾನೇ ಬಂದು ನಿಂತ ರೈಲಿನಿಂದ ಇಳಿದು ತನ್ನ ಗಂಡ ಮತ್ತು ಇಬ್ಬರು ಮಕ್ಕಳೊಂದಿಗೆ ಬರುತ್ತಿದ್ದ ನನ್ನ ಬಾಲ್ಯದ ಆಟದ ವಧುವನ್ನು ನೋಡಿದೆ. ಅವಳ ಮುಖದಲ್ಲಿ ಮುಗುಳುನಗೆ ಅರಳಿತು. ಗಂಡನ ಕಿವಿಯಲ್ಲಿ ಏನೋ ಪಿಸುಗುಟ್ಟಿದಳು. ಅವನು ನನ್ನನ್ನು ಕೆಕ್ಕರಿಸಿ ನೋಡಿಕೊಂಡು ಒಂದು ಮಾತನ್ನೂ ಆಡದೆ ಹೆಂಡತಿ ಮಕ್ಕಳೊಂದಿಗೆ ಸೀದಾ ಮುಂದಕ್ಕೆ ಹೋಗಿಬಿಟ್ಟ!

●

## ಎಟಿಎಂ ಭಾಷೆಯಲ್ಲಿ

ಬ್ಯಾಂಕ್ ಮೆನೇಜರ್ ಹೋಟೆಲಿಗೆ ಹೋಗಿ ಏನಿದೆ ತಿಂಡಿ? ಅಂತ ಕೇಳಿದಾಗ ಮಾಣಿ "ದೋಸೆ, ಖಾರಾ ಬಾತ್, ಕೇಸರಿ ಬಾತ್, ಇಡ್ಲಿ, ವಡೆ, ರವೆ ಇಡ್ಲಿ, ಪೊಂಗಲ್, ಉತ್ತಪ್ಪ, ರವೆ ದೋಸೆ, ಚಿತ್ರಾನ್ನ ಅಂದ. ಮ್ಯಾನೇಜರು "ಇಡ್ಲಿ ಸಾಂಬಾರ್, ರವೆ ದೋಸೆ'' ಕೊಡು ಅಂದರು. ಆಗ ಮಾಣಿ "ಸಾರಿ ಎಲ್ಲಾ ಖಾಲಿ" ಅಂದ. ಮೆನೇಜರ್ ಸಿಟ್ಟಿಂದ "ಮತ್ತೆ ಯಾಕೆ ಅಷ್ಟು ದೊಡ್ಡ ತಿಂಡಿ ಪಟ್ಟಿ ಕೊಟ್ಟೆ?'' ಅಂತ ಕೇಳಿದಾಗ ಮಾಣಿ "ಸರ್ ನಾನು ಪ್ರತಿ ದಿನ ಎಟಿಎಂಗೆ ಹೋಗ್ತೀನಿ ಅದು ಪಿನ್ ನಂಬರ್, ಅಕೌಂಟ್ ಡಿಟೇಲ್ಸ್, ರಶೀದಿ ಬೇಕಾ ಎಂದು ಎಲ್ಲ ಕೇಳಿದ ಮೇಲೆ 'ನೊ ಕ್ಯಾಶ್' ಎನ್ನೊಲ್ಲವೆ ಹಾಗೇನೆ ಸಾರ್ ಇದೂ'' ಅಂದ. ಮೆನೇಜರ್ ಹಸಿದುಕೊಂಡೇ ಎದ್ದು ಹೋದರು.

# ವೀಕ್ ಎಂಡ್ ವಿಥ್ ವೆಂಡರ್

**- ಬೇಲೂರು ರಾಮಮೂರ್ತಿ**

**ವೀ**ಕ್ ಎಂಡ್ ಅನ್ನೋ ಕಾನ್‌ಸೆಪ್ಟ್ ನಮ್ಮ ಕಾಲದಲ್ಲಿ ಇರಲಿಲ್ಲ. ಮಂಥ್ ಎಂಡ್ ಅಂತ ಇರೋದು. ಒಂದು ಹಳೇ ಸಿನಿಮಾ ಹಾಡು ನಿಮಗೆ ನೆನಪಿರಬಹುದು. ತೇದಿ ಒಂದರಿಂದ ಇಪ್ಪತ್ತರ ವರೆಗೆ ಉಂಡಾಟ ಉಂಡಾಟ, ತೇದಿ ಇಪ್ಪತ್ತರಿಂದ ಮೂವತ್ತರ ವರೆಗೆ ಭಂಡಾಟ ಭಂಡಾಟ. ಅದು ಅಂದಿನ ಕಾಲದ ಸರ್ಕಾರಿ ನೌಕರರ ಸಂಬಳ ಮತ್ತು ಮನೆಯ ಪರಿಸ್ಥಿತಿಯನ್ನು ಎತ್ತಿ ಹಿಡಿಯುವಂಥಾ ಹಾಡು. ಆದರೆ ಈಗ ಹಾಗಿಲ್ಲ. ವಾರಕ್ಕೆ ಐದು ದಿನ ಕೆಲಸ ಅಂತ ಬಂದ ಮೇಲೆ ಎಲ್ಲರಿಗೂ ವೀಕ್ ಎಂಡ್ ಅಂತ ಇದೆ. ಈಗಂತೂ ಶುಕ್ರವಾರ ರಜ ಬಂದರೆ ಲಾಂಗ್ ವೀಕ್ ಎಂಡ್ ಎನ್ನುತ್ತಾರೆ. ವೀಕ್ ಎಂಡ್ ಸುಖವನ್ನು ಕಾಣುವವರು ಒಬ್ಬೊಬ್ಬರು ಒಂದೊಂದು ತರಹ. ನಾವು ಚಿಕ್ಕವರಿದ್ದಾಗ ಕೆಲವರು ಅಮೆರಿಕಾದಲ್ಲಿ ಪ್ರತಿ ಶನಿವಾರ ಭಾನುವಾರ ರಜವಂತೆ. ಶನಿವಾರವನ್ನು ಅವರು ಮನೆಯಿಂದ ಹೊರಗಡೆ ಕಾಲ ಕಳೆಯಲು ಭಾನುವಾರವನ್ನು ಮನೆಯನ್ನು ಚೊಕ್ಕಟಗೊಳಿಸಲು ನಿಗದಿಪಡಿಸಿಕೊಂಡಿರುತ್ತಾರೆ ಎನ್ನುವ ಮಾತು ಕೇಳಿಬರುತ್ತಿತ್ತು.

ಇದೇ ಮನೋಭಾವದಲ್ಲಿ ನಾನು ಬೆಳಗಿನ ತಿಂಡಿಯನ್ನು ಆಸ್ವಾದಿಸಿ ಒಂದು ಶನಿವಾರ ಮನೆ ಮುಂಭಾಗಿಲು ತೆಗೆದು ಗೇಟಿನ ಬಳಿ ಬರೋ ಹೊತ್ತಿಗೆ ಗೇಟ್ ಮುಂದೆ ಕಾಣಿಸಿಕೊಂಡ ವ್ಯಕ್ತಿಯೊಬ್ಬ ಅಚ್ಚರಿ ಮೂಡಿಸಿದ. ಚೆನ್ನಾಗಿ ಡ್ರೆಸ್ ಮಾಡಿಕೊಂಡು ಕಣ್ಣಿಗೆ ಕಪ್ಪು ಕನ್ನಡಕ ಹಾಕಿಕೊಂಡು ತಲೆ ಮೇಲೆ ಹ್ಯಾಟು ಹಾಕಿಕೊಂಡು ಕೈಯಲ್ಲಿ ನಾಯಿ ಚೈನ್ ಹಿಡಿದು ನಡೆಯುತ್ತಿದ್ದ. ನನ್ನ ನೋಡಿದವನೇ ''ನಮಸ್ಕಾರ ಸರ್'' ಅಂದ. ನಾನು ಇದ್ಯಾರಪ್ಪಾ ನನಗೆ ಪರಿಚಯ ಇಲ್ಲವಲ್ಲ ಅಂದುಕೊಳ್ಳುತ್ತಿರುವಾಗ ಮತ್ತೆ ಅವನೇ ''ನಾಷ್ಟಾ ಆಯ್ತಾ'' ಸಾರ್ ಅಂತ ಕೇಳಿದ. ''ಈಗ ತಾನೇ ಆಯ್ತು, ತಾವು'' ಅಂದೆ. ಹಾಗಂದ ತಕ್ಷಣ ಅವನು ಜೋರಾಗಿ ನಗಲಾರಂಭಿಸಿದ. ಕನ್ನಡಕ ತೆಗೆದು ''ಏನ್ಸಾರ್ ನನ್ನನ್ನು ಮರೆತೇಬಿಟ್ರಾ'' ಅಂದ. ಮತ್ತೂ ಗೊಂದಲ ನನಗೆ. ನನ್ನ ಅನುಮಾನ ಅವನಿಗೆ ಇನ್ನಷ್ಟು ನಗು ತರಿಸಿತು. ''ಈಗ ನೋಡಿ ನನ್ನ ಗುರುತು ನಿಮಗೆ ಹೇಳ್ತೀನಿ'' ಅಂದು ಗಂಟಲು ಸರಿಮಾಡಿಕೊಂಡು ಪೇಪರ್, ಪೇಪರ್ ಅಂತ ಕೂಗಿದ. ನನಗೆ ತಕ್ಷಣ ಹೊಳೆಯಿತು. ಅರೇ ಇವನು ನಮ್ಮ ಮನೆ ಬೀದಿಯಲ್ಲಿ ಪ್ರತೀ ದಿನ ಸೈಕಲ್ ತಳ್ಕೊಂಡು ಪೇಪರ್ ಅಂತ ಕೂಗ್ತಾ ಹಳೇ ಪೇಪರ್ ಕೊಂಡ್ಕೊಂಡು ಹೋಗೋನಲ್ವೇ ಅಂತ. ಈಗೊಂದು ಆರು ತಿಂಗಳಿನಿಂದ ನಾನು ಇವನಿಗೇ ಹಳೇ ಪೇಪರ್ ಮಾರೋದು. ಪ್ರತಿಸಾರಿ ಪೇಪರ್ ಕೊಂಡ್ಕೊಳುವಾಗಲೂ ಅವನು ಸರ್ ಬೇರೆ ಯಾರಿಗೂ ಪೇಪರ್ ಕೊಡಬೇಡಿ ನಾನೇ ಬರ್ತೀನಿ ಅಂದು ಹೋಗ್ತಿದ್ದ. ನಂತರದ ದಿನಗಳಲ್ಲಿ ನಮ್ಮ ಮನೆ ಮುಂದೆ ಪೇಪರ್ ಅಂತ ಕೂಗಿಕೊಂಡು ಹೋಗುವಾಗ ನಮ್ಮ ಮನೆ ಕಡೆ ನೋಡಿ ನಾನು ಕಂಡರೆ ಪೇಪರ್ ಇದ್ಯಾ ಸರ್ ಅಂತ ಕೇಳ್ತಿದ್ದ.

ಅರೇ ಇದೇನು ಇವನ ಅವತಾರ ಇವತ್ತು ಹೀಗಿದೆ ಅಂತ ನಾನು ಯೋಚಿಸುತ್ತಿದ್ದಾಗ ಅವನು ಮತ್ತೆ ನಕ್ಕ. ''ನಾನು ಇವತ್ತು ಪೇಪರ್ ತಗೊಳೋಕೆ ಬಂದಿಲ್ಲ ಸರ್. ನಾಳೆ ಬರ್ತೀನಿ.

ಇವತ್ತು ಬಹಳ ಮುಖ್ಯವಾದ ಕೆಲಸಕ್ಕೆ ಹೊರಟಿದೀನಿ'' ಅಂದ. ಸರಿ ಇವನು ನನಗೆ ಇದನ್ನೆಲ್ಲಾ ಯಾಕೆ ಹೇಳ್ತಿದಾನೆ ಅಂತ ಅನಿಸಿದಾಗ ಹಳೇ ಪೇಪರ್ ಕೊಂಡ್ಕೊಂಡು ಜೀವನ ಮಾಡೋನು ಇವನು ಇವತ್ತೇನು ಈಪಾಟಿ ಡ್ರೆಸ್ ಮಾಡ್ಕೊಂಡು ಹೋಗ್ತಿದಾನೆ ಅನ್ನೋ ಯೋಚನೆಯೂ ಬಂತು. ಅಲ್ಲಲ್ಲಿ ಮೂಸುತ್ತಿದ್ದ ನಾಯಿಯ ಚೈನ್ ಎಳೆದು ಅವನು ''ಇವತ್ತು ವೀಕ್ ಎಂಡ್ ಅಲ್ವಾ ಸರ್ ಅದಿಕ್ಕೇ ನನ್ನ ಪ್ರೊಪೆಷನ್ನಿಗೆ ರಜ. ಇವತ್ತೇನಿದ್ರೂ ಎಂಜಾಯ್ ಮಾಡೋದು'' ಅಂದು ನನ್ನ ಕಡೆ ನೋಡಿ ''ನಿಮ್ಮದೇನು ಸರ್ ವೀಕ್ ಎಂಡ್ ಪ್ರೋಗ್ರಾಂ'' ಅಂದ. ಏನೂ ಇಲ್ಲಪ್ಪ ಅಂದೆ. ಅವನಿಗೆ ಅದೇನು ಸ್ಫೂರ್ತಿ ಬಂತೋ ಏನೋ ಗೇಟ್ ಬಳಿ ಬಂದು ''ನೋಡಿ ಸರ್ ವಾರದ ಐದು ದಿನ ಈ ನಾಯಿ ಇದೆಯಲ್ಲ ಇದರ ಹಾಗೇ ನಾನು ಬೀದಿ ಬೀದಿ ಮನೆ ಮನೆ ಅಲೆದು ಹಳೇ ಪೇಪರ್ ಕೊಂಡು ಅದನ್ನು ಇನ್ನೊಂದು ಕಡೆ ಮಾರಿ ಒಂದಿಷ್ಟು ಕಾಸು ಮಾಡ್ತೀನಿ. ಮನೆ ಖರ್ಚಿಗೆ ದುಡ್ಡು ಕೊಟ್ಟು ಇನ್ನೊಂದಿಷ್ಟು ಉಳಿಸಿ ವಾರಾಂತ್ಯವನ್ನು ಹೀಗೆ ಎಂಜಾಯ್ ಮಾಡ್ತೀನಿ. ಈಗ ಹೋಗಿ ಅಂಗಡಿಯಿಂದ ಸ್ಪೆಷಲ್ ತಂದು ಮನೆಯಲ್ಲಿ ವಿಶೇಷ ಅಡಿಗೆ ಮಾಡಿಸಿ ಗಡದ್ದಾಗಿ ಹೊಡೆದು ನಂತರ ಒಂದು ನಿದ್ದೆ ತೆಗೀತೀನಿ. ಅಷ್ಟರಲ್ಲಿ ವಾಟ್ಸಪ್ಪಲ್ಲಿ ಮಲ್ಟಿಪ್ಲೆಕ್ಸ್‌ನಲ್ಲಿ ಸಿನಿಮಾಕ್ಕೆ ಟಿಕೆಟ್ ಬುಕ್ ಮಾಡಿರ್ತೀನಿ. ಹೆಂಡ್ತಿ ಮೂರು ಮಕ್ಕಳನ್ನು ಕರ್ಕೊಂಡು ಸಿನಿಮಾ ನೋಡಿಕೊಂಡು ಬರ್ತೀನಿ ಅಲ್ಲಿಗೆ ನನ್ನ ವೀಕ್ ಎಂಡ್ ಮುಗೀತು. ಮತ್ತೆ ನಾಳೆಯಿಂದ ಚಾಕರಿ ಷುರು. ಒಂದೊಂದು ವಾರ ಸಿನಿಮಾ, ಒಂದೊಂದು ವಾರ ದೇವಸ್ಥಾನ ಇನ್ನೊಂದು ವಾರ ಕಬ್ಬನ್ ಪಾರ್ಕ್, ಮತ್ತೊಂದು ವಾರ ಲಾಲ್‌ಬಾಗ್ ಹೀಗೆ ವೀಕ್ ಎಂಡ್ ಎಂಜಾಯ್ ಮಾಡ್ತೀನಿ'' ಅಂದು ನನ್ನ ಕಡೆ ಕತ್ತೆತ್ತಿ ನೋಡಿದ. ಹೇಗಿದೆ ನನ್ನ ಲೈಫ್ ಸ್ಟೈಲ್ ಅನ್ನೋ ರೀತಿ.

ನಾನು ''ಅಲ್ಲಪ್ಪ ನೀನು ಹೀಗೆ ದುಡಿದ ನಾಲ್ಕು ಕಾಸನ್ನು ವೀಕ್ ಎಂಡ್ ಅಂತ ಉಢೀಸ್ ಮಾಡಿದರೆ ನಿನ್ನ ಲೈಫ್ ಎಂಡಲ್ಲಿ ಏನು ಮಾಡ್ತೀಯ'' ಅಂತ ಕೇಳಿದೆ. ಅದಕ್ಕೆ ಅವನು ''ಯಾರು ಹೇಳಿದ್ದು ಸರ್ ನಾನು ಕಾಸನ್ನೆಲ್ಲಾ ಉಢೀಸ್ ಮಾಡ್ತಿದೀನಿ ಅಂತ. ಕೆಂಗೇರಿ ಹತ್ರ ಒಂದು ಸೈಟ್ ತೆಗೆದಿದೀನಿ ಸರ್. ಏರಿಯಾ ಸ್ವಲ್ಪ ಡೆವಲಪ್ ಆದ ಮೇಲೆ ಅಲ್ಲಿ ಮನೆ ಕಟ್ಟಿಸಿ ಹಳೇ ಪೇಪರ್ ಅಂಗಡಿ ಹಾಕಿ ಅಲ್ಲಿ ನನ್ನ ಹೆಂಡ್ತೀನ ಕೂರಿಸಿ ನಾನು ಎಂದಿನಂತೆ ಮನೆ ಮನೆ ಅಲೆದು ಪೇಪರ್ ಕೊಳ್ತೀನಿ ಸರ್. ಇದೆಲ್ಲಾ ಯಾಕೆ ಮಾಡ್ತಿದೀನಿ ಅಂದರೆ ಆ ದೇವರು ನನಗೆ ಮೂರು ಹೆಣ್ಣು ಮಕ್ಕಳನ್ನು ಕೊಟ್ಟುಬಿಟ್ಟಿದಾನೆ. ಅವರಿಗೆ ಒಂದು ಸರಿಯಾದ ದಾರಿ ತೋರಿಸಬೇಕಲ್ವ ಸರ್'' ಅಂದ. ನಾನು ತಮಾಷೆ ಮಾಡುವಂತೆ ''ನಿನಗೇನು ಬಿಡಪ್ಪಾ ನಿನ್ನ ತರಹ ಹಳೇ ಪೇಪರ್ ಕೊಳ್ಳೋರು ಬಹಳ ಜನ ಗುರುತು ಇರ್ತಾರೆ. ಅವರಲ್ಲೇ ಯಾರಾದರೂ ಚೆನ್ನಾಗಿರೋ ಹುಡುಗರನ್ನು ಆಯ್ಕೆ ಮಾಡಿ ನಿನ್ನ ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಟ್ಟರೆ ಆಗ ಅಳಿಯ ಮಾವ ಎಲ್ಲರೂ ಒಟ್ಟಾಗಿ ಈ ವ್ಯಾಪಾರವನ್ನು ಇನ್ನೂ ದೊಡ್ಡದಾಗಿ ಮಾಡಬಹುದು'' ಅಂದೆ. ಅದಕ್ಕೆ ಅವನು ದೊಡ್ಡದಾಗಿ ತಲೆ ಅಲ್ಲಾಡಿಸಿ ''ಎಲ್ಲಾದರೂ ಉಂಟಾ ಸರ್. ಈ ಬಿಸುನೆಸ್ ನನ್ನ ತಲೆಗೇ ಮುಗಿಯಬೇಕು. ನನ್ನ ಹೆಣ್ಣು ಮಕ್ಕಳನ್ನು ಚೆನ್ನಾಗಿ ಓದಿಸ್ತೀನಿ, ಅವರನ್ನು ಸಾಫ್ಟ್‌ವೇರ್ ಇಂಜಿನಿಯರ್ ಮಾಡ್ತೀನಿ. ಒಳ್ಳೇ ಕಡೆ ಮದುವೆ ಮಾಡಿಕೊಡ್ತೀನಿ. ಸಾಫ್ಟ್‌ವೇರ್ ಇಂಜಿನಿಯರ್ ಆದೋರು ಇಂಡಿಯಾದಲ್ಲಿ ಎಲ್ಲಿರ್ತಾರೆ ಸರ್. ಎಲ್ಲಾ ಅಮೆರಿಕಾದ ಕಡೆ ಮುಖ ಮಾಡ್ತಾರೆ. ಆಗ ನಾನೂ ನನ್ನ ಹೆಂಡ್ತಿ ಒಂದೊಂದು ಮಕ್ಕಳ

ಮನೇಲಿ ನಾಲ್ಕು ನಾಲ್ಕು ತಿಂಗಳು ಅಂತ ಇದ್ದರೂ ನಾವೂ ಅಮೆರಿಕಾದಲ್ಲೇ ನೆಲೆ ನಿಲ್ಲಬಹುದು'' ಅಂದ.

ಅವನ ಮಾತು ಮೆಚ್ಚುಗೆಯಾಯಿತು. ಪ್ಲಾನಿಂಗ್ ಅಂದ್ರೆ ಹೀಗಿರಬೇಕು. ಕುಟುಂಬದ ಬಗೆಗೆ ದೂರ ದೃಷ್ಟಿ ಅಂದ್ರೆ ಹೀಗಿರಬೇಕು ಅನಿಸಿತು. ಹಾಗೆ ನೋಡಿದರೆ ನನಗೆ ಇಂಥಾ ಯೋಚನೆಗಳು ಹೊಳೆದೇ ಇಲ್ಲ. ನಾನು ಅವನನ್ನು ಇನ್ನೂ ಏನೋ ಕೇಳಬೇಕು ಅಂದುಕೊಳ್ಳುತ್ತಿರುವಾಗ ''ಅವನು ಬರ್‍ತೀನಿ ಸರ್, ಇವತ್ತು ತುಂಬಾ ಕೆಲಸ ಇದೆ, ನಾನು ಯಾವತ್ತೂ ಸಮಯ ವ್ಯರ್ಥ ಮಾಡೋದಿಲ್ಲ. ಹತ್ತು ನಿಮಿಷ ವ್ಯರ್ಥ ಮಾಡಿದರೆ ಆ ಹತ್ತು ನಿಮಿಷದಲ್ಲಿ ಹತ್ತು ರೂಪಾಯಿಯನ್ನಾದರೂ ಸಂಪಾದಿಸಬಹುದು ಎನ್ನುವ ಆಲೋಚನೆ ನನ್ನದು. ಆದರೆ ಇವತ್ತು ವೀಕ್ ಎಂಡ್ ಏನಿದ್ರೂ ಬರೀ ಎಂಜಾಯ್ ಮಾಡೋಕೆ ಮೀಸಲು. ಬರ್‍ಲಾ ಸರ್'' ಅಂದು ಎರಡು ಹೆಜ್ಜೆ ಇಟ್ಟು ''ನಿಮ್ಮದೇನು ಸರ್ ವೀಕ್ ಎಂಡ್ ಪ್ರೋಗ್ರಾಮು'' ಅಂತ ಕೇಳಿದ. ನಾನು ನಕ್ಕು ''ಏನೂ ಇಲ್ಲಪ್ಪ'' ಅಂದೆ. ಅದಕ್ಕೆ ಅವನ ಮುಖ ಪೆಚ್ಚಾಯಿತು. ''ಯಾಕ್ಸಾರ್ ಬರೀ ಸಂಪಾದನೆ ಮಾಡಿ ಅದನ್ನೇ ನೋಡ್ಕೊಂಡು ಕಾಲ ಕಳೀತೀರ. ಮನೇಲಿ ಇರೋ ಲಕ್ಷ್ಮೀನ ಕಳಿಸಿದರೆ ಮತ್ತೆ ಮತ್ತೆ ಅವಳು ಬರ್‍ತಾಳೆ ಸರ್. ಹಾಗಂತ ನಮ್ಮಪ್ಪ ನನಗೆ ಹೇಳಿದ್ದ. ಎನಿವೇ ಹ್ಯಾಪಿ ವೀಕ್ ಎಂಡ್ ಸರ್'' ಅಂದು ಸ್ವಲ್ಪ ದೂರ ನಡೆದು ಹೋದ. ನಾನು ಅವನು ಹೋಗುತ್ತಿದ್ದುದನ್ನೇ ನೋಡುತ್ತಿದ್ದೆ. ಮತ್ತೆ ಹಿಂದಿರುಗಿ ಬಂದ. ''ಸರ್, ಟೀವೀಲಿ ವೀಕ್ ಎಂಡ್ ವಿಥ್ ಅಂತ ಒಂದು ಪ್ರೋಗ್ರಾಂ ಬರುತ್ತಲ್ಲ ಅದಕ್ಕೆ ನನ್ನ ಹೆಸರು ಶಿಫಾರಸ್ಸು ಮಾಡಿ ಸರ್. ಅಲ್ಲಿ ಹೋಗಿ ನನ್ನ ಆಲೋಚನೆಗಳನ್ನೆಲ್ಲಾ ತಿಳಿಸ್ತೀನಿ ಅದು ಬೇರೆಯವರಿಗೂ ಸ್ಫೂರ್ತಿ ಆಗಬಹುದು'' ಅಂದ. ನಾನು ''ಆಯ್ತಪ್ಪ ನನಗೆ ಯಾರಾದರೂ ಪರಿಚಯ ಇದ್ದರೆ ಅವರಿಗೆ ತಿಳಿಸ್ತೀನಿ'' ಅಂದೆ. ಅವನಿಗೆ ಅದೇ ಖುಷಿಯಾಯಿತು. ಕೈ ಕುಲುಕಿ ತುಂಬಾ ಥ್ಯಾಂಕ್ಸ್ ಸರ್ ಅಂದು ನಗುತ್ತಾ ಹೊರಟುಹೋದ.

ಕೆಲವು ಕ್ಷಣಗಳಲ್ಲಿ ನನ್ನ ಹೆಂಡತಿ ಬಾಗಿಲ ಬಳಿ ಬಂದು ''ಅದ್ಯಾರತ್ರ ಇಷ್ಟೊತ್ತೂ ಹರಟೆ ಹೊಡೀತಾ ಇದ್ರಿ'' ಅಂತ ಕೇಳಿದಳು. ಅವಳಿಗೆ ಸಂಕ್ಷಿಪ್ತವಾಗಿ ವಿಚಾರ ತಿಳಿಸಿ ಅವಳ ಹಿಂದು ಹಿಂದೇನೇ ಹೋಗುತ್ತಾ ''ಲೇ ಇವಳೇ ನಮ್ಮದೇನು ವೀಕ್ ಎಂಡ್ ಪ್ರೋಗ್ರಾಮು'' ಅಂತ ಕೇಳಿದೆ. ಅವಳು ನಗುತ್ತಾ ''ನಾನು ಆಗಲೇ ಪ್ಲಾನ್ ಮಾಡಿದೀನಿ'' ಅಂದಳು. ನನಗೆ ಖುಷಿಯಾಯಿತು. ಭಲೇ ಹೆಂಡತಿ ಅಂತ ''ಏನು ಪ್ಲಾನು ಹೇಳು'' ಅಂದೆ. ಅವಳು ''ಒಂದು ಉದ್ದದ ಪೊರಕೆಯನ್ನೂ, ಸಣ್ಣ ಪೊರಕೆಯನ್ನೂ, ಒಂದೆರಡು ಒದ್ದೆ ಬಟ್ಟೆಗಳನ್ನೂ ಕೊಟ್ಟು ಗೋಡೆಗಳ ಮೇಲೆ, ಸಂದುಗಳಲ್ಲಿ, ಮೂಲೆಗಳಲ್ಲಿ ಜೇಡ ಕಟ್ಟಿರುವುದನ್ನೂ, ಷೋ ಕೇಸ್ ಮೇಲೆಲ್ಲಾ ಧೂಳು ಕೂತಿರುವುದನ್ನೂ ತೋರಿಸಿ ಮಕ್ಕಳು ಹತ್ತಿರ ಇಲ್ಲ ಅಂತ ಖಚಿತಪಡಿಸಿಕೊಂಡು ನನ್ನ ಕೆನ್ನೆಯನ್ನು ಸ್ವಲ್ಪ ಜೋರಾಗಿ ಚಿವುಟಿ ''ಹ್ಯಾಪಿ ವೀಕ್ ಎಂಡ್'' ಅಂದು ತನ್ನ ಕೆಲಸಕ್ಕೆ ಹೊರಟುಹೋದಳು. ನಾನು ಅವಳನ್ನು ಏನು ವೀಕ್ ಎಂಡ್ ಪ್ರೋಗ್ರಾಂ ಅಂತ ಕೇಳಲೇಬಾರದಿತ್ತು ಅನಿಸಿ ಪೊರಕೆಯಾಡಿಸಲು ಷುರುಮಾಡಿದೆ.

●

**- ದಂನಅ**

- ದುರಂತವೆಂದರೆ ಕೃಷಿಕರೂ ಸೇರಿದಂತೆ ಇಂದಿನ ಆಧುನಿಕರೆಲ್ಲ ಸ್ವಭಾವತ ವಣಿಕರಾಗಿದ್ದಾರೆ ಅಥವಾ ಬ್ರಾಹ್ಮಣರು ಅಥವಾ ಕ್ಷತ್ರಿಯರು. ಮತ್ತೆ ಶೂದ್ರರಾಗಬೇಕಿದೆ ನಾವು.
- ಹೇಳೋ ಮಾತು ಕೇಳೋದಿಕ್ಕೆ ಕಿವಿ ಹತ್ತಿರ ಇದ್ದರೆ ಸಾಕೆ?
- ಫಿಟ್‌ನೆಸ್ ಅಂದರೆ ಬರೀ ತೆಳ್ಳಗಿರುವುದಲ್ಲ.
- ಯು ಕೆನ್ ಟೆಲ್ ಹೌ ಸ್ಮಾರ್ಟ್ ಪೀಪಲ್ ಆರ್ ಬೈ ವಾಟ್ ದೆ ಲಾಫ್ ಅಟ್.
- ಬೆಳಗ್ಗೆ 9ಕ್ಕೆ ಯಾವುದೋ ಸ್ಥಳದಲ್ಲಿ ಹಾಜರಿರಬೇಕು ಎಂದರೆ ಅದನ್ನು 8.30ಕ್ಕೆ ಎದ್ದು ನಿರ್ಧರಿಸುವುದು ಅಲ್ಲವೇ ಅಲ್ಲ. 8.30ಕ್ಕೆ ಬಸ್ ಹಿಡಿಯಬೇಕು, 8.15ಕ್ಕೆ ಸ್ನಾನ ಮಾಡಬೇಕು, 8ಕ್ಕೆ ತಿಂಡಿ ತಿನ್ನಬೇಕು, 7.30ಕ್ಕೆ ಎದ್ದೇಳಬೇಕು ಎಂದು ರಿವರ್ಸ್ ಆಗಿ ಲೆಕ್ಕ ಹಾಕಬೇಕು. ಡೆಡ್‌ಲೈನ್ ಟೈಂನಿಂದ ತಿರುಗಿ ಲೆಕ್ಕಾಚಾರ ಹಾಕುವುದು ಸೂಕ್ತ.
- *ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿ*<br>*ಕಮೆಂಟುಗಳಿಗೆಂಜಿ ದೊಡೆಂತಯ್ಯ......*

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ವಾಟ್ ಈಸ್ ಇನ್ ಎ ರಿನೇಮ್?
- ನನಗೆ ದೇವರು ಇಷ್ಟ - ಅವನು ನನಗೆ ಅವನನ್ನೇ ನಿರಾಕರಿಸುವಂತಹ ಸ್ವಾತಂತ್ರ್ಯವನ್ನ ಕೊಟ್ಟಿರುವುದಕ್ಕಾಗಿ.
- ದೀಪಕ್ಕೆ ಒಂದು ನಿರ್ದಿಷ್ಟ ನೆಲೆ ಎಂಬುದಿಲ್ಲ. ಅದು ಎಲ್ಲಿದ್ದರೂ ಬೆಳಕು ಬೀರುತ್ತದೆ.
- ಚೆನ್ನಾಗಿ ತಿಂದಮೇಲೆ ಪಥ್ಯ ನೆನಪಾಗುತ್ತದೆ ಅಂದರೆ.....
- ಸಮ್ ಪೀಪಲ್ ಆರ್ ವೆರಿ ಡಿಸಿಸಿವ್ ವೆನ್ ಇಟ್ ಕಂಮ್ಸ್ ಟು ಅವಾಯ್ಡಿಂಗ್ ಡಿಸಿಷನ್ಸ್.
- ಪ್ರಚಾರ ಬಯಸುವವರಿಗೆ ನೆಮ್ಮದಿ ಜೀವನ ಅಸಾಧ್ಯ.
- ಗುರಿ ಏನು ಎಂಬುದು ನಿರ್ಧಾರವಾದ ಮೇಲೆ ಉಳಿದೆಲ್ಲವನ್ನೂ ಅಡಚಣೆಗಳು ಎಂದೇ ಭಾವಿಸಬೇಕು.
- ನದಿ ಮೇಲೆ ಕೋಪಮಾಡಿಕೊಂಡು ಸ್ನಾನ ಮಾಡೋದನ್ನೇ ನಿಲ್ಲಿಸಿದರೆ...?
- **ಹಿಂದೆ:** ಐ ಥಿಂಕ್ ದೇರ್‌ಫೋರ್ ಐ ಅಮ್<br>**ಈಗ:** ಐ ಸೆಲ್ಫೀ ದೇರ್‌ಫೋರ್ ಐ ಅಮ್

✷

# ಸೇವಾ..........ಸಂಘ

- ಗುಂಡುರಾವ್ ದೇಸಾಯಿ

"ಸರಾ ನಾವು ಇವತ್ತ ವಿಪ್ರ ಯುವಕ ಸಂಘ ಕಟ್ಟಕತೀವಿ ಬರಬೇಕರಿ'' ಎಂದು ಮನಿಗೆ ಬರೊಹೊತ್ತಿನ್ಯಾಗ ದಾರ್‍ಯಾಗ ಭೇಟಿಯಾದ ಹಿರಿಯರು ಹೇಳಿದ್ರು. ಸುದ್ದಿ ಮೊದಲ ಬರಬೇಕಾಗಿತ್ತು! ಯಾಕ ತಡ ಆತು? ಅಂತ ಅನಕೊಂಡೆ. ಮನಿಗೆ ಹೋಗುವಷ್ಟರಲ್ಲಿ ಎರಡು ಮೂರು ಕರಿ ಬಂದ್ವು. ಮೀಟಿಂಗ್ ಸ್ಟಾರ್ಟ ಮಾಡಬೇಕಾಗ್ಯಾದ ನಿಮ್ಮ ಸಲುವಾಗಿ ಕಾಯಕತೀವಿ ಬರ್ರಿ ಅಂತ ಮತ್ತೊಬ್ಬರು ಫೋನ್ ಮಾಡಿದರು. 'ಅಲ್ಲ ಮೊದಲ ತಿಳಿಸಿಲ್ಲ, ಈಗ ಕರಿಯಾಕತೀರಿ, ಸ್ವಲ್ಪ ಮುಖನಾದ್ರೂ ತೊಳಕೊಂಡು ಬರ್ತೀನಿ' ಅಂದ್ರ ಬಿಡವಲ್ರು. ಇವರ ಅವಸರಕ್ಕ ಸೀದಾ ಗುಡಿಗೆ ಹೋದೆ. ಆರಂಭವಾಗಿತ್ತು ಅವರಿವರೂ ಮಾತಾಡಿಯಾಗಿತ್ತು. ಬ್ರಾಹ್ಮಣರ 'ಕೆಲ ಆಚರಣೆಗಳಿಗೆ ಕಮುನಿಷ್ಟನವ ಇದ್ದಾಂಗ ನಾನು' ಅಂತ ಭಾವಿಸದವರು ಅವರಲ್ಲಿ ಹಲವು ಜನ. ಸಂಘದ ಧ್ಯೇಯೋದ್ದೇಶಗಳೇನು ಗೊತ್ತಿರಲಿಲ್ಲ. ಸುಮಾರು ಹೊತ್ತು ಅವರ ಮಾತು ಆಲಿಸುತ್ತಾ ಕುಳಿತೆ. ಅದರಲ್ಲಿ ಹಿರಿಯರು ನಮ್ಮ ಕಂಟ್ರೋಲನಾಗ ಸಂಘ ಇರಬೇಕು ಅನ್ನೋರು, ಇನ್ನೂ ಕೆಲವರು ಮುಪ್ಪಾದರೂ ಯುವಕ ಸಂಘದಾಗ ಹೆಸರಿರಬೇಕು ಅನ್ನೋ ಮನಸ್ಥಿತಿಯವರು. ಊರಲ್ಲಿ ಇರೋದ ಮೂವತ್ತು ನಲವತ್ತು ಕುಟುಂಬ. ಊಟಕ್ಕ ಬರೋರು ನೂರಾರು ಜನ. ಮೀಟಿಂಗ್‌ಗೆ, ಫಂಕ್ಷನ್ಗೆ ಬರೋರು ಹತ್ತಾರು. ಅವರ ತಪ್ಪಿಲ್ಲ. ಜ್ಞಾನ ಸತ್ರ ಹೆಸರನ್ಯಾಗ ಮನಸ್ಸು ಬದಲಿಸೋ ವ್ಯಕ್ತಿತ್ವ ವಿಕಸನ ಕಾರ್ಯಗಳನ್ನಾದರೂ ಹಾಕಿಕೊಳ್ಳತಾರಾ! ಪ್ರಥಮ ಆದ್ಯತೆ ಊಟಾ. ದ್ವಿತೀಯ ಆದ್ಯತೆ ಭಜನಿಗೆ. ದಾಸಾಹಿತ್ಯವನ್ನು ತಾರತಮ್ಯಕ್ಕೇರಿಸಿ ಅಲ್ಲಿಯೂ ಮೇಲು ಕೀಳು ಭಾವ ಸೃಷ್ಟಿಸಿರುವಂತವರು. ದಾಸಾಸಾಹಿತ್ಯ ಮನುಜ ಸಾಹಿತ್ಯವಾಗಬೇಕಾಗಿದ್ದು ಮಧ್ವ ಸಾಹಿತ್ಯವಾಗಿ ಉಳಿದಿರುವುದರಲ್ಲಿ ಇದು ಕಾರಣವು. ಭಜನೆ ಮಾಡವುದರಲ್ಲಿಯ ಆಸಕ್ತಿ ದಾಸರ ಕೀರ್ತನಗಳ ಅರ್ಥ ವಿಶ್ಲೇಷಣೆಗೆ ಹೋಗಲ್ಲ. ಹಾಗೆ ನೋಡಿದರೆ ತಾರತಮ್ಯ ಭಜನಾಮೃತದಲ್ಲಿ ಎಲ್ಲಾ ದೇವತೆಗಳಿಗೂ ಆದ್ಯತೆ ಇದೆ. ಹರಿ ಹರ ಭೇದವಿಲ್ಲ, ಪಾರ್ವತಿ ದೇವಿ, ಲಕ್ಷ್ಮೀ, ಭಾರತಿ ದೇವಿ, ಶಿವ ಎಲ್ಲಾ ದೇವತೆಗಳ ಹಾಡು ಹಾಡಲಾಗುತ್ತದೆ. ವಿಷಯಾಂತರಕ್ಕೆ ಕ್ಷಮೆ ಇರಲಿ. ಹೊಸ ಚಿಂತನೆಗಳನ್ನು ಸಂಘಟನೆಯವರು ಹಾಕಿಕೊಳ್ಳಲ್ಲ ಆದರಲ್ಲಿ ಮೊದಲೇ ರುಚಿ ಇರದ ಊಟದಲ್ಲಿ ಮಾತ್ರ ಆಸಕ್ತಿ ಇರೋ ಮಂದಿ ಬಿಡ್ತಾರ. ಊಟಕ್ಕೆ ಮಾತ್ರ ಹಾಜರ.

ಇರಲಿ ವಿಚಿತ್ರವಾದ ಚರ್ಚೆ ನಡೆದಿತ್ತು. ಮಾತಿನ ಮಧ್ಯದಾಗ ನನ್ನ ಎಬ್ಬಿಸಿ ನಮ್ಮ ಸಂಘಕ್ಕ ಇಂತಹದು ಎಂದು ನಾಮಕರಣ ಮಾಡಿವಿ. ಸಂಘದ ಬಗ್ಗೆ ಮಾತನಾಡಿ ಎಂದದ್ದೆ ತಪ್ಪಾತು. ನಾನು ನಮ್ಮ ಯುವಕರು ಹಾಂಗಾಗಬೇಕು, ಹಿಂಗಾಗಬೇಕು, ಬೇಕಾದಷ್ಟು ಅವಕಾಶಗಳು ಅವ. ಸಂಘಟನೆ ಮೂಲಕ ಸ್ವಉದ್ಯೋಗವಂತಗಾಗಬೇಕು, ಪ್ರತಿಭೆಗಳನ್ನು ಪೋಷಿಸಬೇಕು. ಬಡಬ್ರಾಹ್ಮಣರಿಗೆ ಸಹಾಯ ಮಾಡಬೇಕು, ರಾಜಕೀಯವಾಗಿಯೂ ಮುಂದೆ ಬರಬೇಕು.

ಸಂಘ ನೊಂದಣಿ ಮಾಡಿಸಿ ಸರಕಾರದಿಂದ ಲಾಭ ಪಡಿಬೇಕು, ಸದುದ್ದೇಶದೊಂದಿಗೆ ಹೆಸರು ನಾಡಿನಲ್ಲೇ ಎದ್ದು ಕಾಣವಾಂಗ ಆಗಬೇಕು. ಮೊದಲು ಪ್ರಯತ್ನಶೀಲರಾಗಬೇಕು. ಹಾಂಗ ಹಿಂಗ ಅಂತ ಮಾತಾಡತಾ ಹೋದೆ. ಎಲ್ಲರೂ ತಮ್ಮ ತಲೆಮೇಲೆ ಶಲ್ಯ ಹಾಕಿಕೊಂಡ್ರು, ಸತ್ತವರ ಮನೆಯ ಮುಂದ ಕೂತ ಜನರಂಗ. ನನಗನಸ್ತು ನನ್ನ ಮಾತು ಅರ್ಥ ಆಗಿರಲಕ್ಕಿಲ್ಲ ಅಥವಾ ನನ್ನ ವಿಚಾರ ತಿಳಿದಿರಲಿಕ್ಕಿಲ್ಲ. ಸರಾ, ಭಾರಿರಪ ನೀವು, ದೊಡ್ಡ ಲೆಕ್ಕಕ್ಕಕೊಂಟ್ರಿ, ಅದು ಆಗ ಮಾತೇನ್ರಿ ನಮ್ಮ ಯೋಕ್ತಿ ನೋಡಿಕೋಬೇಕಲ್ರಿ. ಮೊದಲು ಸಣ್ಣದಿಂದ ಆರಂಭ. ಆಮೇಲೆ ಅರ್ಭಟಕ್ಕ ಕೈ ಹಾಕದು'' ಅಂದ್ರು. ನನಗ ಅರ್ಥ ಆಗಲಿಲ್ಲ, ಅಥೈಸಿಕೊಂಡದ್ದ ಬೇರೆ ಇತ್ತು. ತಲೆಗೊಂದು ಮಾತಾಡಕತಿದ್ರು. ''ಮಾಷ್ಟ್ರ ಏನೋ ಚಲೋ ಸಲಹೆ ನೀಡತರಂತ ಕರಿಸದ್ರ, ಉದ್ದಕ ಭಾಷಣ ಬಿಗಿಯಾಕ ಶುರಮಾಡಿದ್ರಲ್ಲರಿ?'' ಅಂತ ಅಂದ್ರು. ''ಅದಕ, ಅದಕ, ಇಂತವೆಲ್ಲ ತಿಳಿಲಾರದಂಗ ಏನೇನೋ ಮಾತಾಡತಾರ ಅಂತನ ನಾವು ಅವರಿಗೆ ಹೇಳಿದ್ದಿಲ್ಲರಿ'' ಅಂದ ಮೊತ್ತೊಬ್ಬ. ''ಸರಿ ತಪ್ಪಾಗಿದ್ರ ಒಪ್ಪಗೊಂತಿನಿ, ನಿಮ್ಮ ಸಂಘದ ಉದ್ದೇಶಗಳನ್ನು ತಿಳಸರಿ'' ಎಂದೆ. ಕಾರ್ಯದರ್ಶಿಯಾಗಿ ಆಯ್ಕೆಯಾದ ಹುಡುಗ ಎದ್ದುನಿಂತು ''ನಮ್ಮ ಯುವಕ ಸಂಘದ ಹೆಸರು ಸೋ ಆಂಡ್ ಸೊ ಸೇವಾ ಸಂಘ ಅಂತ ನಾಮಕರಣ ಮಾಡ್ವಿ. ಇದರ ಸದಸ್ಯತ್ವ ಶುಲ್ಕ 500 ರೂಪಾಯಿ.....'' ಅಂದೊಡನೆ 'ಎಲ್ಲರೂ ಕೊಡ್ರಿ ಮೊದಲು' ಎಂದು ಮಾತು ನಿಲ್ಲಿಸಿ ರೊಕ್ಕ ವಸೂಲು ಮಾಡಿದ್ರು. ಮುದುಕರು ನಮ್ಮದು ತೊಗೋರಿ ಅಂತ ಕೊಟ್ಟರು. ಪೈಸೆ ಖರ್ಚು ಮಾಡದ ಮುದಕರೋರ್ವರು 'ಈ ಅಚಾರಿಗೆ 70 ವರ್ಷ ಆಗ್ಯಾದ, ಅವನೆಂಗ ಯುವಕ ಆಗ್ತಾನಂತ' ಪ್ರಶ್ನೆ ಎಸೆದ್ರೂ. ಏ ಇದು ಯುವಕ ಸಂಘ ಅಂತ ಅಷ್ಟ ಲೆಕ್ಕ, ರೊಕ್ಕ ಎಲ್ಲರೂ ಕೊಡಬೇಕು ಅಂತ ಇನ್ನೋರ್ವರಿಂದ ಫರ್ಮಾನು ಹೊರಬಂತು. ಜೋರಾಗಿ ನಡೆಯುತ್ತಿದ್ದ ವಾಗ್ವಾದ ಯುವಕರಿಗೆ ಅನುಕೂಲ ಆಗುತ್ತೆ ಎಂಬ ಕಾರಣಕ್ಕೆ ಅಲ್ಲಿಗೆ ನಿಂತಿತು. ಕಾರ್ಯದರ್ಶಿ ತನ್ನ ಮಾತು ಮುಂದುವರೆಸಿ ''ನಮ್ಮ ಸೇವಾ ಸಂಘದ ಪ್ರಮುಖ ಉದ್ದೇಶ ಹೇಳತಾ ಇದ್ದೀನಿ ಲಕ್ಷಗೊಟ್ಟು ಕೇಳ್ರಿ'' ಅಂದ ''ಏ ಅದರಲ್ಲಿ ಮುಚ್ಚುಮರೆ ಏನದ ಹೇಳಿರಿ ಕಾರ್ಯದರ್ಶಿಗಳೇ'' ಎಂದ ಯುವಕನೊಬ್ಬ, ''ನೋಡ್ರಿ ಇತ್ತಿತಲಾಗಿ ಗುಡಿಯಾಗ, ನಮ್ಮ ಮಂದಿಮನ್ಯಾಗ ಏನರ ಕಾರ್ಯಕ್ರಮ ಆದರ ಊಟಕ್ಕ ಬಡಸೋದ ದೊಡ್ಡ ಸಮಸ್ಯ ಆಗ್ಯಾದ. ಹಾಗಾಗಿ ಈ ವಿಷಯವನ್ನು ಬಹು ಗಂಭೀರವಾಗಿ ಪರಿಗಣಿಸಿ ಸಮಸ್ಯೆಯನ್ನು ಕೊನೆಗೊಳಿಸಲು ತೀರ್ಮಾನಿಸಿದ್ದೀವಿ'' ಎಂದ. ನನಗೂ ಒಂದು ಒಳ್ಳೆಯ ಆಶಾಭಾವ ಬಂದು ಊಟಕ್ಕೋದ್ರೆ ಒಂದು ಪಂಕ್ತಿ ಬಡಸ್ರಿ ಅಂತ ಕೇಳಿ ವಯಸ್ಸಾದ್ರೂ ಬಿಡುಗಡೆ ಸಿಗದ ಈ ಭಾಗ್ಯದ ಬಗ್ಗೆ ಆಸೆ ಚಿಗುರಿ 'ಏನ ಮಾಡಿರಿ?' ಎಂದೆ. ನಮ್ಮ ಸಂಘದ ಪ್ರಮುಖ ಉದ್ದೇಶ 'ಕ್ಯಾಟರಿಂಗ ಅದೆ ಊಟಬಡಿಸೋದ ಅಂತ ಅನಕೊಂಡಿವಿ, ಅಲ್ಲ ನಿರ್ಧಾರ ಮಾಡಿವಿ' ಅಂದ. ಎಲ್ಲರೂ ಜೋರಾಗಿ ಚಪ್ಪಾಳೆ ಹಾಕಿದ್ರು. ಹಿರಿಯರೊಬ್ಬರು ಅಧ್ಯಕ್ಷರಿಗೆ ಹಾರ ಹಾಕಿ ಸಂಘ ಚಿರಾಯುವಾಗಲಿ ಎಂದು ಹಾರೈಸಿದರು. ಕಾರ್ಯದರ್ಶಿ ಮುಂದುವರೆದು 'ಗುಡಿಯಲ್ಲಿ ಕಾರ್ಯಕ್ರಮ ಆದಗಾ ಊಟಬಡಿಸುವುದು ಪ್ರಮುಖ. ನಂತರ ಅದೇ ನಮ್ಮವರ ಮದುವೆಗಳಲಿ ಏನೇ ಆದ್ರೂ ಅವರಿಂದ ಇಂತಿಷ್ಟು ನಮ್ಮ ಸಂಘದ ಅಭಿವೃದ್ಧಿಗಾಗಿ ಹಣ

ಪಡೆದು ಬಡಸಾಕ ಹೋಗುವುದು. ಇದರಲ್ಲಿ ಮೆಂಬರು ಆದವರೆಲ್ಲ ಹೋಗುವುದು ಕಡ್ಡಾಯ' ಅಂದ, 'ನಾನು ಸತ್ಯೆನಪ' ಅಂದೆ. ನಾನು ಹಿಂದಕ್ಕ ತಕ್ಕಬೇಕು ಅನ್ನುವಷ್ಟರಲ್ಲಿ ಯಾರದರೂ ಊಟಬಡಿಸದೆ ಊಟ ಮಾಡಿ ಹಾಗೆ ಹೋದರೆ ಅವರಿಗೆ ಭಹಿಷ್ಕಾರ ಹಾಕಿ ಮುಂದಿನ ದಿನಗಳಲಿ ಊಟಕ್ಕೆ ಹೇಳದೆ ಇರುವುದು ಅಂತ ಅವ ಮಾತು ಮುಂದುವರೆಸುತ್ತಿರಬೇಕಾದ್ರೆ ಒಬ್ಬಾತ 'ಹೌದ್ರಿ ಬರತಾರ ನನ್ಮಕ್ಕಳು ತಿಂತಾರ ಹಾಂಗ ಪಂಚೆ ಝಾಡಿಸಿಕೊಂಡು ಹೊರಟು ಬಿಡ್ತಾರ. ಇದು ಆಗಲೇಬೇಕು. ಆ ಸೀನಪ್ಪನ ಮಗನಿಗೆ ಏನಾಗದ್ರಿ ಇಂಜಿನಿರದ್ರ ಕೊಂಬು ಬಂತನಿ, ಮಲ್ಲಯ್ಯನ ಮಗ ಲೆಕ್ಚರಿದ್ರ ಸೊಕ್ಕುಬಂತನೂ, ಅವರ ಡಾಕಟ್ರೆದೆ ನೆತ್ತಿ ಮೇಲೆ ಕಣ್ಣ ಬಂದವನು' ಅಂದು ಯೋಗ್ಯತೆಗೆ ತಕ್ಕಂಗ ಮಾತನಾಡಿ 'ಈ ವಿಚಾರದ ಬಗ್ಗೆ ನಿಮಗ ಏನನಸ್ತದರಿ' ರಾಯರ ಅಂದ್ರು. ನಾನು 1000 ರೂಪಾಯಿ ಕೊಡತೀನಿ ಊಟಕ್ಕೂ ಬರಲ್ಲ. ಕೊನಿಗೆ ಹೇಳಿದ್ರಲ್ಲ ಭಹಿಷ್ಕಾರದ ವಿಚಾರ ಅದು ಹಿಡಿಸ್ತು ನೋಡಿ ಅಂತ ಎದ್ದು ಹೊರಬಿದ್ದೆ.

●

## ಮ್ಯಾಚ್ ಆಗದಿದ್ದಾಗ

ಬ್ಯಾಂಕ್ ಆಗತಾನೆ ಮುಚ್ಚುತ್ತಿತ್ತು. ಆಗ ಮೆನೇಜರ್‌ಗೆ ಒಂದು ಫೋನ್ ಬಂದಿತು. 'ಸರ್ ನನಗೆ ಅರ್ಜೆಂಟಾಗಿ 10,000 ಬೇಕು. ಸಿಗುವುದೆ ಸಾರ್?' ಎಂದು ಒಂದು ಹೆಣ್ಣು ಕೇಳಿತು. 'ಸರ್ ತುಂಬಾ ಅರ್ಜೆಂಟ್ ಸರ್ ಇನ್ನು 10 ನಿಮಿಷದಲ್ಲಿ ಬ್ಯಾಂಕ್‌ಗೆ ಬರುತ್ತೇನೆ' ಎಂದು ಕೋರಿಕೊಂಡಿತು.

ಆ ಧ್ವನಿ ಎಷ್ಟು ಮಧುರವಾಗಿತ್ತೆಂದರೆ ಮೇನೇಜರ್‌ಗೆ ಇಲ್ಲ ಎಂದು ಹೇಳಲು ಸಾಧ್ಯವಾಗಲೇ ಇಲ್ಲ. ಜೇನಿನಂತಹ ಧ್ವನಿಯುಳ್ಳ ಆ ಹೆಣ್ಣು ಇನ್ನೆಷ್ಟು ಸುಂದರವಾಗಿರಬಹುದು ಎಂದು ಭಾವಿಸಿದ ಮೇನೇಜರ್ 'ಬನ್ನಿ ಅಮ್ಮ ಬನ್ನಿ ಬ್ಯಾಂಕ್ ತೆರೆದಿರುತ್ತದೆ' ಎಂದರು. ಸುಂದರಿಗಾಗಿ ಕಾದರು. ಕ್ಯಾಷಿಯರ್‌ಗೆ ಹಣ ರೆಡಿ ಮಾಡಲು ಹೇಳಿದರು. ಅವನು ಬೇಜಾರಿನಿಂದಲೇ ದುಡ್ಡು ಎಣಿಸಿದ.

10 ನಿಮಿಷದಲ್ಲಿ ಆಕೆ ಬಂದಳು. ಅರೆ! ಧಡೂತಿ ಮೈ. ಏನೇನೂ ಚೆನ್ನಾಗಿಲ್ಲ ನೋಡಲು. ಮೆನೇಜರ್‌ಗೆ ನಿರಾಶೆ ಆಯಿತು. ಆಕೆ ಚೆಕ್ ನೀಡಿದಳು. 'ಸಾರಿ ಮೇಡಂ ಕ್ಯಾಶ್ ಕ್ಲೋಸ್ ಆಗಿದೆ' ಎಂದರು ಮೆನೇಜರ್. ಆಕೆ ನಿರಾಸೆಯಿಂದ ಹೋದಳು.


ಕ್ಯಾಷಿಯುರ್‌ಗೆ ಕೋಪ ಬಂದಿತು. 'ಮತ್ತೆ ನನ್ನನ್ನು ಯಾಕೆ ಉಳಿಸಿಕೊಂಡಿರಿ?' ಎಂದು ಕೇಳಿದ.

'ನನಗೆ ಸಹಾಯ ಮಾಡಲು ಆಸೆ ಇತ್ತು ಆದರೆ ಬ್ಯಾಂಕಿಂಗ್ ನಿಯಮದ ಪ್ರಕಾರ ವರ್ಡ್ಸ್ ಅಂಡ್ ಫಿಗರ್ ಶುಡ್ ಮ್ಯಾಚ್. ಇಲ್ಲಿ ಹಾಗಾಗಲಿಲ್ಲ. ಅದಕ್ಕೇ ಕೊಡಲಿಲ್ಲ' ಎಂದರು.

# ವ್ಯಂಗ್ಯ ಮೆಲುಕು

**- ಪ್ರಕಾಶ್ ಶೆಟ್ಟಿ**

*ಹಿಂದೆ ಬಹಳಷ್ಟು 'ನಾಯಕಿ ಪ್ರಧಾನ' ವ್ಯಂಗ್ಯಚಿತ್ರಗಳು ಬರುತ್ತಿದ್ದವು. ಗಣಪತಿ ಭಟ್, ಸುಬ್ರಹ್ಮಣ್ಯ, ಅಶ್ವಥ್ ೭೦ರ ದಶಕದಲ್ಲಿ ಬರೆದ ಅಂತಹ ಡೊಂಕುಗಳಿವು.*



ಅದೃಷ್ಟಶಾಲಿ ಕಣೇ! ಶೃಂಗಾರ ಸಾಧನಗಳ ಅಂಗಡಿ ಮಾಲೀಕನೇ ಗಂಡನಾಗಿ ಲಭಿಸಿದ್ದಾನೆ !



ಕಂಬನಿ ಅಂತ ಸಿನಿಮಾ ಬಂದಿದೆ. ಮೂರು ಕರ್ಚೀಫು ಸಾಕು.




ಈಗ ಮಹಿಳೆ ವಿರೋಧ ಪಕ್ಷದ ನಾಯಕಿಯಂತಲ್ಲ... ಮನೇಲಿರೋ ಹಾಗೆ ಅಲ್ಲಿ ಹೇಡಿಯಾಗಿರಬೇಡಿ !